ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 2 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 108 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, *website: www.mysurumithra.com*

ನಗರ ಪೊಲೀಸ್ ಆಯುಕ್ತರು, ಎಸ್‌ಪಿಗೆ ಅಭಿನಂದನೆ...



ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಅವರನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೂಗುಚ್ಛ ನೀಡಿ, ಅಭಿನಂದಿಸಿದರು.

ಇಂದಿನಿಂದ ಸೋಸಲೆ ಶ್ರೀಗಳ 8ನೇ ಚಾತುರ್ಮಾಸ್ಯ ವ್ರತ



ಸೋಸಲೆ ಶ್ರೀ ವ್ಯಾಸರಾಜರ ಮಹಾ ಸಂಸ್ಥಾನ ಮಠದ ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ ಅವರ 8ನೇ ಚಾತುರ್ಮಾಸ್ಯ ವ್ರತದ ಪ್ರಯುಕ್ತ ಸೋಸಲೆ ಗ್ರಾಮದಲ್ಲಿ ಗುರುವಾರ ಸ್ವಾಮೀಜಿಯವರ ಪುರ ಪ್ರವೇಶ ಕಾರ್ಯಕ್ರಮ ನಡೆಯಿತು.

ಮೈಸೂರು,ಆ.1(ಪಿಎಂ)– ಸೋಸಲೆ ಶ್ರೀ ವ್ಯಾಸರಾಜರ ಮಹಾ ಸಂಸ್ಥಾನ ಮಠದ ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ ಅವರ 8ನೇ ಚಾತು ರ್ಮಾಸ್ಯ ವ್ರತವು ಮೈಸೂರು ಜಿಲ್ಲೆ ತಿ.ನರಸೀಪುರ ಸಮೀಪದ ಸೋಸಲೆ ಗ್ರಾಮದಲ್ಲಿ ಆ.2ರಿಂದ ಪ್ರಾರಂಭವಾಗಲಿದೆ.

ಸೋಸಲೆ ಶ್ರೀಗಳ ಚಾತುರ್ಮಾಸ್ಯ ವ್ರತದ ಅಂಗವಾಗಿ ಆ.2ರಿಂದ ಸೆ.17ರವರೆಗೆ ಪ್ರತಿನಿತ್ಯವೂ ಶ್ರೀಮಠದಲ್ಲಿ ನಿತ್ಯ ಜ್ಞಾನ ಯಜ್ಞ ಕಾರ್ಯಕ್ರಮ ಆಯೋಜಿಸಲಾಗಿದೆ. ಪ್ರತಿದಿನವೂ ಬೆಳಗ್ಗೆ 7ಕ್ಕೆ ಸ್ವಾಮೀಜಿ ಅವರಿಂದ ಅಣು ಭಾಷ್ಯ ಶಾಸ್ತ್ರ ಪಾಠ, ವಿದ್ವಾಂಸರಿಂದ ಗೃಹಸ್ಥರಿಗೆ ಸೂತ್ರದೀಪಿಕಾ ಗ್ರಂಥದ ಪಾಠ, ಮಾತೆಯರಿಗೆ ಶ್ರೀ ವ್ಯಾಸರಾಜರ ಕೃತಿಗಳ ವಿಶೇಷ ಅಧ್ಯಯನ ಕಾರ್ಯಕ್ರಮ ನಡೆಯಲಿವೆ.

ಶ್ರೀಕೃಷ್ಣ ಜನ್ಮಾಷ್ಟಮಿಯಂದು ಸಂಸ್ಥಾನ ಪ್ರತಿಮಾ ಶ್ರೀ ಗೋಪಾಲಕೃಷ್ಣ ದೇವರಿಗೆ ಲಕ್ಷ ತುಳಸಿ ಅರ್ಚನೆ ಹಾಗೂ ಭವ್ಯ ಉತ್ಸವ ನಡೆಯಲಿದೆ. ಚಾತು ರ್ಮಾಸ್ಯ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ, ಶ್ರೀ ಲಕ್ಷ್ಮಿ ಕಾಂತ ತೀರ್ಥರ ಆರಾಧನೆ, ಶ್ರೀ ವಿದ್ಯಾ ಪೂರ್ಣತೀರ್ಥರ ಆರಾಧನೆ ಸಂಪನ್ನಗೊಳ್ಳಲಿದೆ.

ಇವುಗಳೊಂದಿಗೆ ಪ್ರತಿನಿತ್ಯವೂ ಶಾಸ್ತ್ರ ಅರ್ಥ ಗೋಷ್ಠಿ, ವ್ಯಾಸತ್ರಯ ವಿಷಯಗಳಲ್ಲಿ ವಿದ್ವತ್‌ಗೋಷ್ಠಿ ಹಾಗೂ ಯುವ ಜನರಿಗಾಗಿ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿದೆ. ಪ್ರತಿದಿನ ಸಂಜೆ 6ಕ್ಕೆ ನಾಡಿನ ಖ್ಯಾತ ವಿದ್ವಾಂಸರಿಂದ ಪ್ರವಚನ, ನೈತಿಕ ಶಿಕ್ಷಣ ಶಿಬಿರ ನಡೆಯಲಿದೆ. ಶ್ರೀ ಮಠದಲ್ಲಿರುವ ಗೋಶಾಲೆಗೆ ಭಕ್ತರು ಗೋಗ್ರಾಸ, ಗೋದಾನಗಳನ್ನು ನೀಡಬಹುದು ಎಂದು ಚಾತುರ್ಮಾಸ ಮುಖ್ಯ ಆಯೋಜಕ ಡಾ.ಮಧುಸೂದನ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಿಪಿಐ ಬಿಳಿಗೆರೆ ವೃತ್ತ'ವೆಂದು ಮರು ನಾಮಕರಣ



ಮೈಸೂರು,ಆ.1(ಪಿಎಂ)– ಮೈಸೂರು ಜಿಲ್ಲೆಯ ನಂಜನಗೂಡು ಪಟ್ಟಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಸಿಪಿಐ ನಂಜನಗೂಡು ಪಟ್ಟಣ ವೃತ್ತ'ವನ್ನು 'ಸಿಪಿಐ ಬಿಳಿಗೆರೆ ವೃತ್ತ' ಎಂದು ಸರ್ಕಾರದಿಂದ ಮರು ನಾಮಕರಣಗೊಳಿಸಿ ಆದೇಶಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್ ಪ್ರದಾನ




ಮೈಸೂರಿನ ರೋಟರಿ ಸಭಾಂಗಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿ ಇಬ್ಬರಿಗೆ ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಆ.1(ಪಿಎಂ)– ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದ ಎಸ್.ಜಾಹ್ನವಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿರುವ ಪ್ರಥಮ್ ಆದಿತ್ಯ ಮೋಹನ್ ಅವರಿಗೆ 'ರೋಟರಿ ಮೈಸೂರು ಮಿಡ್‌ಟೌನ್ ಟ್ರಿನಿಟಿ ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಈ ಇಬ್ಬರು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶಿಕ್ಷಣ ತಜ್ಞ ಮತ್ತು ನಿರ್ವಹಣಾ ಸಲಹೆಗಾರ ಹರೀಶ್ ಮಾಚಯ್ಯ ಕೋದಂಡೇರ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಸ್ತುತ ವಿಜ್ಞಾನ ವಿಷಯದಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿರುವ ಎಸ್.ಜಾಹ್ನವಿ, ಭಾರತೀಯ ವಿದ್ಯಾ ಭವನ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪೂರೈಸಿದರು. ಅಂತೆಯೇ ಮೈಸೂರಿನ ಜ್ಞಾನೋದಯ ಪಿಯು ಕಾಲೇಜಿನಲ್ಲಿ ಪಿಯು ಶಿಕ್ಷಣ ಪೂರೈಸಿರುವ ಪ್ರಥಮ್‌ಆದಿತ್ಯ ಮೋಹನ್ ಇದೀಗ ಸೂರತ್ಕಲ್‌ನಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಸ್.ಕುಮಾರಸ್ವಾಮಿ, ಕಾರ್ಯದರ್ಶಿ ಎಲಿರ್ಝುರ್ ಮಿಲ್ಸನ್, ಟ್ರಿನಿಟಿ ಕಾಲೇಜು ಪ್ರತಿನಿಧಿ ರಶ್ಮಿ ಮತ್ತಿತರರು ಹಾಜರಿದ್ದರು.


ನಿಧನ

ನಿವೃತ್ತ ಡಿವೈಎಸ್ಪಿ ಬಸವರಾಜು



ಮೈಸೂರು, ಆ.1– ನಿವೃತ್ತ ಡಿವೈಎಸ್ಪಿ ಪಿ.ಬಸವರಾಜು (72) ಅವರು ಮೈಸೂರಿನ ಅಪೋಲೊ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು. ಮೈಸೂರು ತಾಲೂಕು ಚಟ್ನಹಳ್ಳಿಪಾಳ್ಯ ಗ್ರಾಮದವರಾದ ಇವರು ಮೈಸೂರಿನ ಪೊಲೀಸ್ ಲೇಔಟ್‌ನಲ್ಲಿ ವಾಸವಿದ್ದರು. ಮೃತರು ಪತ್ನಿ ಕಾಂತಮಣಿ, ಪುತ್ರರಾದ ಜೆಎಸ್‌ಎಸ್ ಮಹಾವಿದ್ಯಾಪೀಠದ ಉಪನಿರ್ದೇಶಕ ಅಶೋಕ್ ಪಾಳ್ಯ ಹಾಗೂ ವಕೀಲ ಅಭಿಷೇಕ್ ಪಾಳ್ಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಚಮ್ಮ



ಮೈಸೂರು, ಆ.1– ನಂಜನಗೂಡು ತಾಲೂಕಿನ ಗೊದ್ದನಪುರ ಮರಳೂರು ಗ್ರಾಮದ ರಾಚಮ್ಮ (95) ಅವರು ಮಂಗಳವಾರ ತಮ್ಮ ನಿವಾಸದಲ್ಲಿ ನಿಧನರಾದರು ಮೃತರು ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನವೀನ್



ಮೈಸೂರು, ಆ.1– ಮೈಸೂರಿನ ಜೆ.ಪಿ.ನಗರ ನಿವಾಸಿ, ವಾಗ್ದೇವಿ ಸೌಹಾರ್ದ ಬ್ಯಾಂಕ್‌ನ ಅಧ್ಯಕ್ಷ ಹಾಗೂ ಬಸವ ಬಳಗ ಚಾಮುಂಡಿಪುರಂ ಸಂಘದ ನಿರ್ದೇಶಕ ನವೀನ್(60) ಗುರುವಾರ ನಿಧನರಾದರು. ಮೃತರು ಪತ್ನಿ ಸವಿತಾ, ಪುತ್ರ ಹಾರ್ದಿಕ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಆ.2) ಮಧ್ಯಾಹ್ನ 12 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯಾದ್ಯಂತ ಅತೀ ವೇಗದ ವಾಹನ ಚಾಲನೆಗೆ ಬ್ರೇಕ್

ನಿಯಮಾವಳಿ ಧಿಕ್ಕರಿಸುವ ವಾಹನ ಚಾಲಕರ ಮೇಲೆ FIR



ಮೈಸೂರು, ಆ.1(ಆರ್‌ಕೆ)–ರಾಜ್ಯಾದ್ಯಂತ ಅತೀ ವೇಗವಾಗಿ ವಾಹನ ಚಾಲನೆ ಮಾಡುವ ಚಾಲಕರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತರಾಗಿ ಎಫ್‌ಐಆರ್ ದಾಖಲು ಮಾಡುವ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದೆ.

ಬೆಂಗಳೂರಿನ ನೈಸ್ ರಸ್ತೆಯ ಟೋಲ್ ಬಳಿ ಸ್ಕಾರ್ಪಿಯೋ ಚಾಲಕ 160 ಕಿ.ಮೀ. ವೇಗವಾಗಿ ಸಂಚರಿಸಿದ್ದರಿಂದ ಉಂಟಾದ ಅಪಘಾತದಲ್ಲಿ ಕಾರಿನಲ್ಲಿದ್ದ ಮೂವರು ಮೃತಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡ ಹಿನ್ನೆಲೆಯಲ್ಲಿ ಜು.19ರಂದು ಸುಪ್ರೀಂಕೋರ್ಟ್‌ನ ರಸ್ತೆ ಸುರಕ್ಷತಾ ಸಮಿತಿ ರವಾನಿಸಿದ್ದ ಪತ್ರವನ್ನಾಧರಿಸಿ, ಅತೀ ವೇಗವಾಗಿ ವಾಹನ ಚಾಲನೆ ಮಾಡುವ ಚಾಲಕರ ವಿರುದ್ಧ ಇಂದಿನಿಂದ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ನಿಗದಿತ ವೇಗಕ್ಕಿಂತ ಹೆಚ್ಚಾಗಿ 130 ಕಿ.ಮೀ. ವೇಗಕ್ಕಿಂತ ಕಡಿಮೆ ವೇಗದಲ್ಲಿ ವಾಹನ ಚಾಲನೆ ಮಾಡುವ ಚಾಲಕನ ವಿರುದ್ಧ ಭಾರತೀಯ ಮೋಟಾರ್ ಕಾಯಿದೆ–183ರಡಿ ಪ್ರಕರಣ ದಾಖಲಿಸಲಾಗುತ್ತಿದೆ. ಈ ಪ್ರಕರಣಕ್ಕೆ ಸಾವಿರ ರೂ. ದಂಡ ವಿಧಿಸಲಾಗುತ್ತದೆ. ಉದಾಹರಣೆಗೆ ಮೈಸೂರಿನ ರಿಂಗ್ ರಸ್ತೆಯಲ್ಲಿ ವೇಗದ ಮಿತಿ 60 ಕಿ.ಮೀ. ಆಗಿದ್ದು, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ವೇಗದ ಮಿತಿ 100 ಕಿ.ಮೀ. ಆಗಿದೆ. ಅಂದರೆ ಮೈಸೂರು ರಿಂಗ್ ರಸ್ತೆಯಲ್ಲಿ 60 ಕಿ.ಮೀ.ಗಿಂತ ಮೇಲ್ಪಟ್ಟು, ಎಕ್ಸ್‌ಪ್ರೆಸ್ ವೇನಲ್ಲಿ 100 ಕಿ.ಮೀ.ಗಿಂತ ಮೇಲ್ಪಟ್ಟು, 130 ಕಿ.ಮೀ.ಗಿಂತ ಕಡಿಮೆ ವೇಗದಲ್ಲಿ ವಾಹನ ಚಾಲನೆ ಮಾಡಿದರೆ ಭಾರತೀಯ ಮೋಟಾರ್ ಕಾಯಿದೆ 183ರಡಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. 130 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ವಾಹನ ಚಾಲನೆ ಮಾಡಿದರೆ ಭಾರತೀಯ ಮೋಟಾರ್ ಕಾಯ್ದೆ–184ರಡಿ ಮತ್ತು ಬಿಎನ್‌ಎಸ್ (ಭಾರತೀಯ ನ್ಯಾಯ ಸಂಹಿತೆ) 281ರಡಿ ಎಫ್‌ಐಆರ್ ದಾಖಲಿಸಲಾಗುತ್ತದೆ. ಈ ಪ್ರಕರಣದಲ್ಲಿ ನ್ಯಾಯಾಲಯವು 6 ತಿಂಗಳು ಜೈಲು ಅಥವಾ ಸಾವಿರ ರೂ. ದಂಡ ಇಲ್ಲವೇ ಜೈಲು ಹಾಗೂ ದಂಡ ಎರಡನ್ನೂ ವಿಧಿಸಬಹುದು. ಜೊತೆಗೆ ಚಾಲಕನ ಡ್ರೈವಿಂಗ್ ಲೈಸೆನ್ಸ್ ಅನ್ನು ವಶಕ್ಕೆ ಪಡೆದುಕೊಂಡು ಅಮಾನತುಗೊಳಿಸಲು ಆರ್‌ಟಿಓ ಅಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಈಗಾಗಲೇ ಅಳವಡಿಸಿರುವ ಎಎನ್‌ಪಿಆರ್ ಕ್ಯಾಮರಾಗಳ ಮೂಲಕ ಹಾಗೂ ಇತರೆಡೆ ಸ್ಪೀಡ್ ಲೇಸರ್ ಗನ್‌ಗಳ ಮೂಲಕ ವಾಹನಗಳ ವೇಗದ ಮಿತಿಯನ್ನು ಪತ್ತೆ ಮಾಡಲಾಗುತ್ತದೆ.

> “ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿದರೆ ಪ್ರಕರಣ ದಾಖಲಿಸುವ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿದೆ. ಆದರೆ ಇಂದಿನಿಂದ ಪೊಲೀಸರು ಸ್ವಯಂ ಪ್ರೇರಿತರಾಗಿ ಎಫ್‌ಐಆರ್ ದಾಖಲಿಸುತ್ತಾರೆ. ನಿಗದಿತ ವೇಗಕ್ಕಿಂತ ಹೆಚ್ಚಾಗಿ 130 ಕಿ.ಮೀ.ಗಿಂತ ಕಡಿಮೆ ವೇಗದಲ್ಲಿ ವಾಹನ ಚಾಲನೆ ಮಾಡಿದರೆ ಐಎಂಎ ಆ್ಯಕ್ಟ್ 183ರಡಿ ಪ್ರಕರಣ ದಾಖಲಿಸಲಾಗುತ್ತದೆ. ಇದಕ್ಕೆ ಸಾವಿರ ರೂ. ದಂಡವಿದೆ. 130 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ವಾಹನ ಚಾಲನೆ ಮಾಡಿದರೆ ಐಎಂಎ ಆ್ಯಕ್ಟ್ 184 ಮತ್ತು ಡಿಎನ್‌ಎಸ್ 281ರಡಿ ಎಫ್‌ಐಆರ್ ದಾಖಲಾಗಿದ್ದು, ಇದಕ್ಕೆ ನ್ಯಾಯಾಲಯ 6 ತಿಂಗಳು ಅಥವಾ ಸಾವಿರ ರೂ. ದಂಡ ಇಲ್ಲವೇ ಜೈಲು ಮತ್ತು ದಂಡ ಎರಡನ್ನೂ ವಿಧಿಸಬಹುದು. ಜೊತೆಗೆ ಡ್ರೈವಿಂಗ್ ಲೈಸೆನ್ಸ್ ಅಮಾನತಿಗೆ ಆರ್‌ಟಿಓ ಅಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು. ಅತೀ ವೇಗದ ಚಾಲನೆಯಿಂದ ಸಂಭವಿಸುವ ಸಾವು–ನೋವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸರು ಈ ಕ್ರಮ ಕೈಗೊಳ್ಳುತ್ತಿದ್ದಾರೆ. – ಅಲೋಕ್ ಕುಮಾರ್, ಎಡಿಜಿಪಿ



ಮೈಸೂರಲ್ಲಿ ಗ್ರ್ಯಾಂಡ್ ಜ್ಯುವೆಲ್ಲರಿ ಶಾಪಿಂಗ್ ಫೆಸ್ಟಿವಲ್ ಸ್ವರ್ಣೋತ್ಸವ

ಸೆ.9ರವರೆಗೆ ಆಕರ್ಷಕ ಬಹುಮಾನ, ಉಡುಗೊರೆ ಭಾಗ್ಯ



ಮೈಸೂರಲ್ಲಿ ಗುರುವಾರ ಗ್ರ್ಯಾಂಡ್ ಜ್ಯುವೆಲ್ಲರಿ ಶಾಪಿಂಗ್ ಫೆಸ್ಟಿವಲ್ 'ಸ್ವರ್ಣೋತ್ಸವ'ವನ್ನು ಬಿಡುಗಡೆ ಮಾಡಿದರು.

ಮೈಸೂರು: ಸರಾಫ್ ವರ್ತಕರ ಸಂಘ (ಮೈಸೂರು ಜ್ಯುವೆಲರ್ಸ್ ಅಸೋಸಿಯೇಷನ್) ಇಂದು ತನ್ನ ಗ್ರ್ಯಾಂಡ್ ಜ್ಯುವೆಲ್ಲರಿ ಶಾಪಿಂಗ್ ಫೆಸ್ಟಿವಲ್ 'ಸ್ವರ್ಣೋತ್ಸವ'ವನ್ನು ಆರಂಭಿಸಿದ್ದು ಸೆಪ್ಟೆಂಬರ್ 9ರವರೆಗೆ ಇರಲಿದೆ.

ಮೇಳದಲ್ಲಿ ಪಾಲ್ಗೊಳ್ಳುತ್ತಿರುವ ಯಾವುದೇ ಆಭರಣ ಮಳಿಗೆಗಳಲ್ಲಿ ವರ ಮಹಾಲಕ್ಷ್ಮಿ ಮತ್ತು ಗೌರಿ ಗಣೇಶ ಹಬ್ಬದ 40 ದಿನಗಳ ಮಂಗಳಕರ ಅವಧಿಯಲ್ಲಿ ಆಭರಣಗಳನ್ನು ಖರೀದಿಸುವ ಗ್ರಾಹಕರು ಬಂಪರ್ ಬಹುಮಾನ ಮತ್ತು ಆಕರ್ಷಕ ಉಡುಗೊರೆಗಳನ್ನು ಗೆಲ್ಲುವ ಅವಕಾಶವಿದೆ.

ಮೈಸೂರಿನ ಜ್ಯುವೆಲ್ಲರ್ಸ್ ಅಸೋಸಿಯೇಶನ್‌ನ 80ನೇ ವಾರ್ಷಿಕೋತ್ಸವದ ಸಂದರ್ಭವೂ ಇದಾಗಿರುವ ಕಾರಣ ಈ ವರ್ಷ ಸ್ವರ್ಣೋತ್ಸವ 2024ವನ್ನು ದೊಡ್ಡ ಮಟ್ಟದಲ್ಲಿ ನಡೆಸಲಾಗುತ್ತಿದೆ. ಅಸೋಸಿಯೇಶನ್ ಆಯೋಜಿಸುತ್ತಿರುವ ಈ ಕಾರ್ಯಕ್ರಮವನ್ನು ವಿಭಾ ಈವೆಂಟ್ಸ್ ನಿರ್ವಹಿಸುತ್ತಿದೆ. ಮೈಸೂರು ಜಿಲ್ಲಾ ವ್ಯಾಪ್ತಿಯ ನಗರ, ಸುತ್ತಮುತ್ತಲಿನ ಪ್ರದೇಶಗಳು ಮತ್ತು ಹತ್ತಿರದ ಪಟ್ಟಣಗಳಲ್ಲಿರುವ ಬಹುತೇಕ ಆಭರಣ ಮಳಿಗೆಗಳು ಈ ವಿಶೇಷ ಅಭಿಯಾನದಲ್ಲಿ ಪಾಲ್ಗೊಳ್ಳುತ್ತಿವೆ. ಭಾಗವಹಿಸುವ ಆಭರಣ ಮಳಿಗೆಗಳ ಒಟ್ಟು ಸಂಖ್ಯೆ ಸುಮಾರು 100 ಆಗಿದ್ದು ಗ್ರಾಹಕರು ಎಲ್ಲಾ ಮಳಿಗೆಗಳಲ್ಲಿ ಪ್ರತಿ 5000 ರೂ.ಗಳ ಖರೀದಿಗೆ ಸ್ವರ್ಣೋತ್ಸವ ಕೂಪನ್‌ಗಳನ್ನು ಪಡೆಯಲಿದ್ದಾರೆ.

ಸರಾಫ್ ವರ್ತಕರ ಸಂಘದ ಅಧ್ಯಕ್ಷ ಅಮರನಾಥ್ ಮಾತನಾಡಿ, ಈ ಮಂಗಳಕರ ಋತುವಿನಲ್ಲಿ ಆಭರಣಗಳನ್ನು ಖರೀದಿಸಲು ಬಯಸುವ ಎಲ್ಲಾ ಆಭರಣ ಪ್ರಿಯರಿಗೆ ಇದು ಒಂದು ಅನನ್ಯ ಅವಕಾಶವಾಗಿದೆ. ಅವರು ಮಾಡುವ ಪ್ರತಿ ಖರೀದಿಗೆ, ಬಿಲ್ ಮೌಲ್ಯಕ್ಕೆ ಅನುಗುಣವಾಗಿ ಕೂಪನ್‌ಗಳನ್ನು ಪಡೆಯುತ್ತಾರೆ ಮತ್ತು ಕೆಲವು ಅದ್ಭುತವಾದ ಬಹುಮಾನಗಳನ್ನು ಗೆಲ್ಲುವ ಅವಕಾಶವನ್ನು ಹೊಂದಿರುತ್ತಾರೆ ಎಂದಿದ್ದಾರೆ. ಸಂಘದ ಕಾರ್ಯದರ್ಶಿಗಳಾದ ಆದರ್ಶ ಮೂರ್ತಿಯವರು ವಿಶೇಷ ಕೊಡುಗೆಗಳು ಮತ್ತು ಬಂಪರ್ ಉಡುಗೊರೆಗಳನ್ನು ವಿವರಿಸಿದರು. ಅದೃಷ್ಟಶಾಲಿ ವಿಜೇತರಿಗೆ ಬಂಪರ್ ಬಹುಮಾನವು ಕಾರ್ ಆಗಿದ್ದು, ಇನ್ನೂ ಅನೇಕರು ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಗೆಲ್ಲುವ ಅವಕಾಶವನ್ನು ಪಡೆಯುತ್ತಾರೆ.

ಸಂಘದ ಕಾರ್ಯದರ್ಶಿಗಳಾದ ಹರ್ಷ ತೊಳಸಿಯವರು, ನಮ್ಮ ಎಲ್ಲಾ ಸಾಂಪ್ರದಾಯಿಕ ಹಬ್ಬಗಳು ಮತ್ತು ಆಚರಣೆಗಳಲ್ಲಿ ಆಭರಣಗಳು ಬಹಳ ಮುಖ್ಯವಾದ ಭಾಗವಾಗಿದೆ ಮತ್ತು ಹೆಚ್ಚಿನ ಕುಟುಂಬಗಳು ಹಬ್ಬದ ಸಂದರ್ಭದಲ್ಲಿ ಖರೀದಿಯನ್ನು ಮಾಡುತ್ತವೆ.

ಆದ್ದರಿಂದ, ಸ್ವರ್ಣೋತ್ಸವದಲ್ಲಿ ಶಾಪಿಂಗ್ ಮಾಡುವುದು ಗ್ರಾಹಕರಿಗೆ ಡಬಲ್ ಧಮಾಕಾ ಆಗಿರುತ್ತದೆ; ಏಕೆಂದರೆ ಅವರು ತಮ್ಮ ಮೆಚ್ಚಿನ ಆಭರಣಗಳನ್ನು ಖರೀದಿ ಮಾಡಿದ್ದಕ್ಕಾಗಿ ಅದೃಷ್ಟಶಾಲಿ ವಿಜೇತರಾಗುವ ಅವಕಾಶವನ್ನೂ ಪಡೆಯಲಿದ್ದಾರೆ ಎಂದರು. ವಿಭಾ ಇವೆಂಟ್ಸ್‌ನ ಮುಖ್ಯಸ್ಥೆ ರಕ್ಷಿತಾ ಲೋಕೇಶ್ ಸಹ ಮಾತನಾಡಿದರು.

ಆ.4, ಚಾಮುಂಡಿಬೆಟ್ಟದ 1001 ಮೆಟ್ಟಿಲು ಸ್ವಚ್ಛತಾ ಕಾರ್ಯ



ಮೈಸೂರು, ಆ.1(ಜಿಎ)–ಮೈಸೂರಿನ ಜ್ಯೋತಿನಗರದ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್ ವತಿಯಿಂದ ಆ.4ರಂದು ಬೆಳಗ್ಗೆ 8ಗಂಟೆಗೆ ನಗರದ ಚಾಮುಂಡಿಬೆಟ್ಟದ 1001 ಮೆಟ್ಟಿಲು ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗಿದೆ.

ಟ್ರಸ್ಟ್ ಅಧ್ಯಕ್ಷ ಎಂ.ಕೆ.ಮಹದೇವ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಆಷಾಢ ಮಾಸದ ಪ್ರಯುಕ್ತ ಸಾವಿರಾರು ಭಕ್ತಾದಿಗಳು ಮೆಟ್ಟಿಲು ಮೂಲಕ ಬೆಟ್ಟಕ್ಕೆ ಭೇಟಿ ನೀಡಿದ್ದು, ಈ ವೇಳೆ ಸಾಕಷ್ಟು ಪ್ರಮಾಣದಲ್ಲಿ ತ್ಯಾಜ್ಯವನ್ನು ಅಲ್ಲಲ್ಲಿ ಬಿಸಾಡಿರುತ್ತಾರೆ. ಹೀಗಾಗಿ ಟ್ರಸ್ಟ್ ವತಿಯಿಂದ ಈ ಕಾರ್ಯ ಹಮ್ಮಿಕೊಳ್ಳಲಾಗಿದೆ. ಮಾತಾ ಅಮೃತಾನಂದಮಯಿ ಮಠದ ಶ್ರೀ ಪ್ರಸಾದ ಅಮೃತ ಚೈತನ್ಯ ಸ್ವಾಮೀಜಿ, ಹಿರಿಯ ವಕೀಲರಾದ ಓ.ಶ್ಯಾಂಭಟ್, ಕಾಂಕ್ರೀಟ್ ರಾಜಣ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಗೋಪಮ್ಮ, ಚಿನ್ನಸ್ವಾಮಿ, ಅಶೋಕ್, ಮಣಿರಾಜ್, ರಾಜೇಶ್ವರಿ, ರಾಮು ಉಪಸ್ಥಿತರಿದ್ದರು.

ಭೂಮಿಪುತ್ರ ಸಿ.ಚಂದನ್‌ಗೌಡರ ಹುಟ್ಟುಹಬ್ಬದ ಸಂಭ್ರಮ...



ವಿವಿಧ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ರೈತ ಬಾಂಧವರು ಸೇರಿದಂತೆ ಹಲವರು ಶುಭಕೋರಿದರು. ಈ ವೇಳೆ ಸಂಘದ ಪದಾಧಿಕಾರಿಗಳಾದ ಹೇಮಂತ್‌ಕುಮಾರ್, ಪ್ರತಾಪ್, ಹರೀಶ್ ಪಿ.ಗೌಡ, ಕಣ್ಣೇನೂರು ಜಗದೀಶ್, ಕಂದಸ್ವಾಮಿ, ಸಂಜಯ್, ಅನಿಲ್, ಮಂಜುನಾಥ ಡಿ.ಎಸ್.ದೇವನೂರು, ಪುನೀತ್, ಲೋಕೇಶ್, ಆನಂದ್, ಮಾದೇಗೌಡ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಬೃಹತ್ ಉದ್ಯೋಗ ಮೇಳ

25ಕ್ಕೂ ಹೆಚ್ಚು ಕಂಪನಿಗಳು ಭಾಗಿ




ಮೈಸೂರು, ಆ.1(ಜಿಎ)–ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಂಯುಕ್ತಾಶ್ರಯದಲ್ಲಿ ಆ.3ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಕಾಲೇಜಿನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಕೇಂದ್ರೀಯ ಮುಖ್ಯಸ್ಥ ಪಿ.ವಿ.ಸುಭಾಷ್‌ಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಉದ್ಯೋಗ ಮೇಳಕ್ಕೆಂದು 25ಕ್ಕೂ ಹೆಚ್ಚು ಕಂಪನಿಗಳು ನೋಂದಾಯಿಸಿಕೊಂಡಿವೆ. ಅಲ್ಲದೆ, ಸುಮಾರು ಸಾವಿರದಿಂದ 1500 ಮಂದಿ ಉದ್ಯೋಗಾಕಾಂಕ್ಷಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇಲ್ಲಿ ಎಸ್‌ಎಸ್‌ಎಲ್‌ಸಿಯಿಂದ ಹಿಡಿದು ಉನ್ನತ ಶಿಕ್ಷಣ ಪಡೆದ ಯುವಕ, ಯುವತಿಯರು ಹಾಗೂ ವಿಶೇಷಚೇತನರು ಸಹಾ ಪಾಲ್ಗೊಳ್ಳಬಹುದಾಗಿದೆ ಎಂದರು.

ಉದ್ಯೋಗ ಮೇಳಕ್ಕೆ ಆಗಮಿಸುವವರು ತಮ್ಮ ಅಗತ್ಯ ದಾಖಲಾತಿ, ಭಾವಚಿತ್ರಗಳ ಐದು ಸೆಟ್ ತರಬೇಕು ಎಂದು ಸಲಹೆ ನೀಡಿದರು. ಹೆಚ್ಚಿನ ಮಾಹಿತಿಗೆ ದೂ. 96201 69867 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಮಂಜುನಾಥ್, ವೀರಭದ್ರಪ್ಪ, ಎಂ.ಶಿವರಾಜು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.08.2024 ಶುಕ್ರವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬಣ್ಣದ ಬಾನಾಡಿಗಳು'–ಬಾನುಲಿ ಸರಣಿ, ರಚನೆ: ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45–ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಕಾಂಬ್ಳೆ ಅಶೋಕ್, ಮುಖ್ಯಸ್ಥರು, ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 “KABHI”-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಕರ್ನಾಟಕ ಮೆದುಳು ಆರೋಗ್ಯ ಪ್ರಾಧಿಕಾರ, ಬೆಂಗಳೂರು, 9.00 ನಮ್ಮ ಆರೋಗ್ಯ: ವಿಶ್ವ ಸ್ತನ್ಯಪಾನ ಸಪ್ತಾಹದ ಸಂದರ್ಭದಲ್ಲಿ 'ಸ್ತನ್ಯಪಾನದ ಮಹತ್ವ ಮತ್ತು ಅಗತ್ಯ ಕುರಿತು ಮಾಹಿತಿ ನೀಡುತ್ತಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಕರ್ನಾಟಕ ಶಾಖೆಯ ಕಾರ್ಯದರ್ಶಿ ಡಾ.ಶಶಿಕಿರಣ್ ಕೆ.ಬಿ. ಮತ್ತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ.ಪ್ರಶಾಂತ್ ಎಂ.ಆರ್. ನಂತರ ಬಾಯಿ ಆರೋಗ್ಯ ದಿನಾಚರಣೆ ಸಂಬಂಧ ವಿಶೇಷ ಕಾರ್ಯಕ್ರಮ–'ಒಸಡುಗಳ ಆರೋಗ್ಯ ಮತ್ತು ಬಾಯಿಯ ಸ್ವಚ್ಛತೆ' ಕುರಿತು ಮೈಸೂರಿನ ಜೆಎಸ್‌ಎಸ್ ದಂತವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಒಸಡು ಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಸುಮನ್ ಬಸವರಾಜು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ.ಕೃಷ್ಣಸ್ವಾಮಿ–ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಭಾರತ ಹಾಗೂ ಶ್ರೀಲಂಕಾ ತಂಡಗಳ ನಡುವೆ ಶ್ರೀಲಂಕಾದ ಆರ್.ಪ್ರೇಮದಾಸ ಕ್ರಿಕೆಟ್ ಕ್ರೀಡಾಂಗಣ, ಕೊಲಂಬೊದಲ್ಲಿ ನಡೆಯಲಿರುವ ಮೊದಲ ಏಕದಿನ ಪಂದ್ಯದ ವೀಕ್ಷಕ ವಿವರಣೆ, 10.30 ಸವಿನೆನಪು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ರಿಂದ ಕರ್ಕಾಟಕ ಚಿಕಿತ್ಸಾ (ಮಾನ್‌ಸೂನ್) ವರ್ಷ ಋತುವಿನ ಕಾಲದ ವಿಶೇಷ ಚಿಕಿತ್ಸಾ ಶಿಬಿರ, ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ,

■ **ಶ್ರೀ ವ್ಯಾಸರಾಜ ಮಠ ಚಾತುರ್ಮಾಸ್ಯ ಸೇವಾ ಸಮಿತಿ, ಸೋಸಲೆ:** ಶ್ರೀ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದರಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ 4.30ಕ್ಕೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಆಷಾಢ ಮಾಸ ಪ್ರಯುಕ್ತ ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ಮತ್ತು ಶ್ರೀ ರಾಜರಾಜೇಶ್ವರಿ ದೇವಿಗೆ ವಿಶೇಷ ಅರ್ಚನೆ, ಸ್ಥಳ: ಶ್ರೀ ಅವಧೂತ ದತ್ತಪೀಠ, ಊಟಿ ರಸ್ತೆ.

■ **ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ:** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವ, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, ಬೆಳಗ್ಗೆ 8.30ಕ್ಕೆ ಚಂಡಿ ಹೋಮ, ಬೆಳಗ್ಗೆ 11.30ಕ್ಕೆ ಹೋಮ ಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ರಾಜರಾಜೇಶ್ವರಿ ಅಲಂಕಾರ, ವಿದ್ವಾನ್ ಮನಮೋಹನ್ ಕೃಷ್ಣನ್ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಕೆಎಂಪಿಕೆ ಚಾರಿಟಬಲ್ ಟ್ರಸ್ಟ್, ಚಾಮುಂಡಿಪುರಂ :** ಸರಸ್ವತಿಪುರಂನ ಕುಕ್ಕರಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಯೋಗ ಮ್ಯಾಟ್ ವಿತರಣೆ ಹಾಗೂ ಯೋಗದ ಬಗ್ಗೆ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ. ನಟರಾಜ್ ಜೋಯಿಸ್, ಯೋಗ ಸಾಧಕ ಡಾ.ರಾಘವೇಂದ್ರ ಪೈ, ಹಿರಿಯ ವಕೀಲ ಬಾರಕೋಲು ರಾಮಸ್ವಾಮಿ, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜ್, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಅಜಯ್ ಶಾಸ್ತ್ರಿ, ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆ, ಕುಕ್ಕರಹಳ್ಳಿ, ಬೆಳಗ್ಗೆ 11ಕ್ಕೆ.

■ **ಯಶೋಧಾ ಸೇವಾ ಟ್ರಸ್ಟ್ :** ಆಷಾಢ ಮಾಸದ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಪ್ರಸಾದ ವಿನಿಯೋಗ, ಸ್ಥಳ: ತ್ರಿವೇಣಿ ಸರ್ಕಲ್ ಹತ್ತಿರ, ಕಲ್ಯಾಣಗಿರಿ, ಮಧ್ಯಾಹ್ನ 12ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ:** ಅರಿವು ಸಂಶೋಧನಾ ವಿದ್ಯಾರ್ಥಿ ವೇದಿಕೆ ಪ್ರಬಂಧ ಮಂಡನಾ ಕಾರ್ಯಕ್ರಮ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ.ಲೋಲಾಕ್ಷಿ, ಮುಖ್ಯ ಅತಿಥಿಗಳು: ಕರ್ನಾಟಕ ಕೇಂದ್ರೀಯ ವಿವಿ ಪ್ರಾಧ್ಯಾಪಕ ಪ್ರೊ. ಅಪ್ಪಗೆರೆ ಸೋಮಶೇಖರ್, ಪ್ರಬಂಧ ಮಂಡನೆ: ಎಸ್.ನಟರಾಜ್, ಕೆ.ಸಿ.ಲೋಹಿತ್, ಡಾ.ಎಸ್. ರೇಣುಕಾ, ಡಾ.ಎಚ್.ಎಲ್.ಶೈಲಾ, ಡಾ.ಕೆ.ಎಂ.ವರದಾಜನ್, ಡಾ.ಕೆ.ಎಸ್.ಅಜಿ, ಸ್ಥಳ: ಸಮಿತಿ ಕೊಠಡಿ, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 2 ಶುಕ್ರವಾರ 2024
45
ಸಂಪುಟ: 45 | ಸಂಚಿಕೆ: 108 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ನೀಡಿರುವ

ಶೋಕಾಸ್ ನೋಟಿಸ್ ಹಿಂಪಡೆಯಿರಿ

ರಾಜ್ಯಪಾಲ ಗೆಹ್ಲೋಟ್‌ಗೆ ಮನವಿ ಸಲ್ಲಿಸಲು ಸಂಪುಟ ನಿರ್ಧಾರ

■ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆನ್ನಿಗೆ ನಿಲ್ಲುವ ಶಪಥ
■ ಸಿಎಂ ಅನುಪಸ್ಥಿತಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸಂಪುಟ ಸಭೆ



ಪತ್ರಿಕಾಗೋಷ್ಠಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್


ಬೆಂಗಳೂರು, ಆ.1–ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಟಿ.ಜೆ ಅಬ್ರಾಹಂ ಅವರ ದೂರಿನನ್ವಯ ಮುಖ್ಯಮಂತ್ರಿಗಳಿಗೆ ಜುಲೈ 26ರಂದು ನೀಡಿರುವ ಶೋಕಾಸ್ ನೋಟಿಸ್ ಅನ್ನು ಹಿಂಪಡೆಯಬೇಕು ಎಂದು ರಾಜ್ಯ ಸಚಿವ ಸಂಪುಟ ರಾಜ್ಯಪಾಲರಿಗೆ ಸಲಹೆ ನೀಡಲು ತೀರ್ಮಾನಿಸಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಚಿವ ಸಂಪುಟ ಸಭೆಯ ತೀರ್ಮಾನದ ಬಗ್ಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಗೆ ರಾಜ್ಯಪಾಲರು ನೀಡಿರುವ ಶೋಕಾಸ್ ನೋಟಿಸ್ ವಿಚಾರವಾಗಿ ವಿಸ್ತೃತವಾಗಿ ಚರ್ಚೆ ನಡೆಸಿದ್ದೇವೆ. ಬೇರೆ ರಾಜ್ಯಗಳಲ್ಲಿ ನಡೆದಿರುವ ಪ್ರಕರಣ, ಇತರೆ ಪ್ರಕರಣಗಳಲ್ಲಿ ನ್ಯಾಯಾಲಯದ ಮಾರ್ಗದರ್ಶನ ಹಾಗೂ ತೀರ್ಪು, ಇಂತಹ ಪರಿಸ್ಥಿತಿಯಲ್ಲಿ ಬೇರೆ ರಾಜ್ಯಗಳಲ್ಲಿ ಯಾವ ಸರ್ಕಾರಗಳು ಯಾವ ರೀತಿ ನಡೆದುಕೊಂಡಿವೆ ಎಂದು ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು.

ಈ ಪ್ರಕರಣದಲ್ಲಿ ಮುಖ್ಯಮಂತ್ರಿಗಳಿಂದ ಅಕ್ರಮ ನಡೆದಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳಾಗಲಿ, ತನಿಖಾ ಸಂಸ್ಥೆಗಳ ವಿಚಾರಣೆಯಾಗಲಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಗಳ ವಿಚಾರಣೆ ನಡೆಸಲು ಹೇಗೆ ಸಾಧ್ಯ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುದೊಡ್ಡ ಬಹುಮತದೊಂದಿಗೆ ಆಯ್ಕೆಯಾದ ರಾಜ್ಯದ ಮುಖ್ಯಮಂತ್ರಿಗಳನ್ನು ಕೆಳಗಿಳಿಸಲು ಷಡ್ಯಂತ್ರ ನಡೆಯುತ್ತಿದೆ. ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಕಿಡಿಕಾರಿದರು.

ಅಬ್ರಹಾಂ ಹಿನ್ನೆಲೆಯೇನು: ರಾಜ್ಯದ ಜನತೆ 136 ಸೀಟುಗಳನ್ನು ನೀಡಿ ನಮ್ಮ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ.





ಟಿ.ಜೆ. ಅಬ್ರಹಾಂ ಎಂಬಾತನ ಹಿನ್ನೆಲೆ ಎಲ್ಲರಿಗೂ ಗೊತ್ತಿದೆ. ಆತ ಯಾರ ವಿರುದ್ಧ ಕೇಸ್ ದಾಖಲಿಸಿದ್ದಾನೆ, ಆತನಿಗೆ ಸುಪ್ರೀಂಕೋರ್ಟ್ ಎಷ್ಟು ದಂಡ ವಿಧಿಸಿದೆ ಎಂಬುದು ನಿಮ್ಮೆಲ್ಲರಿಗೂ ಗೊತ್ತಿದೆ. ಆತ ನೀಡಿರುವ ದೂರನ್ನು ಇಟ್ಟುಕೊಂಡು ರಾಜ್ಯಪಾಲರನ್ನು ಬಳಸಿಕೊಂಡು ಕರ್ನಾಟಕ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 5ರಂದು ರಾಜ್ಯಪಾಲರು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿ ಆಧರಿಸಿ ಪ್ರಕರಣದ ಕುರಿತ ವರದಿ ನೀಡುವಂತೆ ರಾಜ್ಯ ಮುಖ್ಯಕಾರ್ಯದರ್ಶಿಗಳಿಗೆ ಕೇಳುತ್ತಾರೆ. ಜುಲೈ 15ರಂದು ರಾಜ್ಯಪಾಲರು ಮುಖ್ಯಕಾರ್ಯದರ್ಶಿಗಳಿಗೆ ಪತ್ರ ಬರೆದು, ಕರ್ನಾಟಕ ರಾಜ್ಯ ರೈತ ಒಕ್ಕೂಟವು ಮುಡಾದಲ್ಲಿ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿದ್ದು, ಈ ಪ್ರಕರಣವನ್ನು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಮನವಿ ಸಲ್ಲಿಸಿದ್ದು, ಆದಷ್ಟು ಬೇಗ ವರದಿ ನೀಡುವಂತೆ ಕೇಳಿದ್ದಾರೆ.

ಮುಖ್ಯಮಂತ್ರಿಗೆ ಶೋಕಾಸ್ ನೋಟಿಸ್: ರಾಜ್ಯಪಾಲರ ಪತ್ರವನ್ನು ಗಂಭೀರವಾಗಿ ಪರಿಗಣಿಸಿ ಗೌರವಿಸಬೇಕು ಎಂದು ಮುಖ್ಯಮಂತ್ರಿಗಳು ಈ ಪ್ರಕರಣದ ತನಿಖೆಯನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್ ದೇಸಾಯಿ ಅವರ ನೇತೃತ್ವದ ಸಮಿತಿ ರಚಿಸಿ, ನ್ಯಾಯಾಂಗ ತನಿಖೆಗೆ ಆದೇಶ ನೀಡುತ್ತಾರೆ. ಇದಾದ ನಂತರ ಅಬ್ರಹಾಂ ಅವರು ಜುಲೈ 26ರಂದು ದೂರು ನೀಡುತ್ತಾರೆ. ಅದೇ ದಿನ ಮುಖ್ಯ ಕಾರ್ಯದರ್ಶಿಗಳು ರಾಜ್ಯಪಾಲರಿಗೆ ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ಸಲ್ಲಿಸುತ್ತಾರೆ. ರಾಜ್ಯಪಾಲರು ದೂರು ಹಾಗೂ ಮುಖ್ಯ ಕಾರ್ಯದರ್ಶಿಗಳ ವರದಿಯನ್ನು ಸಂಪೂರ್ಣವಾಗಿ ಪರಿಶೀಲಿಸುವ ಮುನ್ನವೇ, ಮುಖ್ಯಮಂತ್ರಿಗಳಿಗೆ ಶೋಕಾಸ್ ನೋಟೀಸ್ ನೀಡಿದ್ದಾರೆ ಎಂದರು.



ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್

ಇಷ್ಟು ತರಾತುರಿಯಲ್ಲಿ ಇಂತಹ ತೀರ್ಮಾನ ಮಾಡುತ್ತಿರುವುದೇಕೆ? ನಮ್ಮ ಅನುಭವದ ಪ್ರಕಾರ ಯಾವುದೇ ದೂರು ದಾಖಲಾದರೂ ತನಿಖೆಗೆ ಆದೇಶ ನೀಡುವ ಮುನ್ನ ಆರೋಪ ಸಾಬೀತುಪಡಿಸಲು ಪೂರಕ ಸಾಕ್ಷ್ಯಾಧಾರಗಳು ಬೇಕು. ಅಥವಾ ಯಾವುದಾದರೂ ತನಿಖಾ ಸಂಸ್ಥೆಗಳು ಅನುಮತಿಗೆ ಮನವಿ ನೀಡುತ್ತಾರೆ. ಆದರೆ ಈ ಪ್ರಕರಣದಲ್ಲಿ ತನಿಖೆ ಮಾಡುವ ಮುನ್ನವೇ ಶೋಕಾಸ್ ನೋಟೀಸ್ ನೀಡಲಾಗಿದೆ. ಇದು ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಕಗ್ಗೊಲೆಯಲ್ಲವೇ? ಎಂದು ಪ್ರಶ್ನಿಸಿದರು. ■ 7ನೇ ಪುಟಕ್ಕೆ

ಪ್ಯಾರೀಸ್ ಒಲಿಂಪಿಕ್–2024

ಶೂಟಿಂಗ್‌ನಲ್ಲಿ ಭಾರತದ ಸ್ವಪ್ನಿಲ್‌ಗೆ ಕಂಚು

ಪ್ಯಾರಿಸ್, ಆ.1– ಬಹುನಿರೀಕ್ಷಿತ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಪುರುಷರ 50 ಮೀಟರ್ ರೈಫಲ್ 3 ಪೊಸಿಷನ್ ಶೂಟಿಂಗ್ ಸ್ಪರ್ಧೆಯಲ್ಲಿ ಭಾರತದ ಸ್ವಪ್ನಿಲ್ ಕುಶಾಲೆ ಕಂಚಿನ ಪದಕ ಬೇಟೆಯಾಡುವಲ್ಲಿ ಯಶಸ್ವಿಯಾಗಿದ್ದಾರೆ.



ಸಾಕಷ್ಟು ರೋಚಕತೆಯಿಂದ ಕೂಡಿದ್ದ ಫೈನಲ್‌ನಲ್ಲಿ ಅಮೋಘ ಪ್ರದರ್ಶನ ತೋರುವ ಮೂಲಕ ಕಂಚಿನ ಪದಕ ತಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇದರೊಂದಿಗೆ ಭಾರತ ಶೂಟಿಂಗ್ ಸ್ಪರ್ಧೆಯಲ್ಲಿ ಮೂರನೇ ಪದಕ ಜಯಿಸಿದೆ.

ಸ್ವಪ್ನಿಲ್ ತನ್ನ ಮೊದಲ ಶಾಟ್‌ನಲ್ಲಿ 9.6ಅಂಕಗಳನ್ನು ಕಲೆ ಹಾಕಿ ಉತ್ತಮ ಆರಂಭ ಪಡೆದರು. ನಂತರ ಮೊಣಕಾಲಿನ ಭಂಗಿಯ ಹಂತದ ಮೊದಲ ಸರಣಿಯ ಸುತ್ತುಗಳಲ್ಲಿ 10 ಕ್ಕೂ ಹೆಚ್ಚು ಹೊಡೆತಗಳನ್ನು ಹೊಡೆದರು. ಎರಡನೇ ಸರಣಿಯನ್ನು 10.1 ಪಾಯಿಂಟನೊಂದಿಗೆ ಪ್ರಾರಂಭಿಸಿದರು. ಆದರೆ ಇದೇ ವೇಗವನ್ನು ಕಾಯ್ದುಕೊಳ್ಳಲು ವಿಫಲರಾದ ಅವರು ಮುಂದಿನ ಹಂತದಲ್ಲಿ 9.9 ಪಾಯಿಂಟ್ ಅಂಕ ಗಳಿಸಿದರು. ಆದಾಗ್ಯೂ, ಮಂಡಿಯೂರಿ ಹಂತದ ಮೂರನೇ ಮತ್ತು ಅಂತಿಮ ಸರಣಿಯಲ್ಲಿ ಅವರು ಕಮ್‌ಬ್ಯಾಕ್ ಮಾಡಿದರು. ಈ ಸುತ್ತಿನ ಬಳಿಕ 153.3 ಅಂಕಗಳೊಂದಿಗೆ ಆರನೇ ಸ್ಥಾನಕ್ಕೇರಿ ಅರ್ಹತಾ ಹಂತದಲ್ಲೂ ಸ್ಥಾನ ಪಡೆದರು. ಆಟ ಮುಂದುವರೆದಂತೆ, ಅವರ ಹೊಡೆತಗಳ ನಿಖರತೆ ಸುಧಾರಿಸಿತು. ಮುಂದಿನ 15 ಪ್ರಯತ್ನಗಳಲ್ಲಿ ಸತತವಾಗಿ 10+ ಪಾಯಿಂಟ್ ಶಾಟ್‌ಗಳನ್ನು ಗಳಿಸಿ 310.1 ಅಂಕಗಳೊಂದಿಗೆ ಪ್ರೋನ್ ಹಂತಕ್ಕೆ ಎಂಟ್ರಿ ಪಡೆದರು. ಇದರಲ್ಲಿ ಮೊದಲ ಸುತ್ತಿನಲ್ಲಿ 52.7 ಅಂಕಗಳನ್ನು ಗಳಿಸಿ, ಎರಡನೇಯ ಸುತ್ತಿನಲ್ಲಿ 52.2 ಮತ್ತು ಮೂರನೇ ಸುತ್ತಿನಲ್ಲಿ 51.9 ಅಂಕಗಳನ್ನು ಗಳಿಸಿದರು. ಇದರಲ್ಲಿ ಅವರ ಅತ್ಯುತ್ತಮ ಹೊಡೆತ 10.8 ಆಗಿತ್ತು.

ಬಳಿಕ ಅಂತಿಮ ಹಂತದ ಮೊದಲ ಪ್ರಯತ್ನದಲ್ಲಿ 9.9–ಪಾಯಿಂಟ್ ಸಾಧಿಸಿದರು. ನಂತರ 10.7–ಪಾಯಿಂಟ್ ಶಾಟ್‌ನೊಂದಿಗೆ ಅದ್ಭುತ ಪುನರಾಗಮನ ಮಾಡಿದರು. ಅವರು ಮೊದಲ ಸುತ್ತಿನಿಂದ 51.1 ಅಂಕ ಮತ್ತು ನಂತರ ಎರಡನೇ ಸುತ್ತಿನಿಂದ 50.4 ಅಂಕ ಕಲೆ ಹಾಕಿದರು. ಒಟ್ಟಾರೇ 411.6 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದು ಎಲಿಮಿನೇಷನ್ ಸರಣಿ ಪ್ರವೇಶಿಸಿದರು. ಅಂತಿಮ ಎಲಿಮಿನೇಷನ್ ಸುತ್ತಿನಲ್ಲಿ ಅವರು ಮೊದಲ ಹಂತದಲ್ಲಿ 10.5 ಅಂಕ ಕಲೆಹಾಕಿ 3ನೇ ಸ್ಥಾನ ಭದ್ರಪಡಿಸಿಕೊಂಡರು. ಕೊನೆಯಲ್ಲಿ 451.4 ಅಂಕಗಳೊಂದಿಗೆ ಕಂಚಿನ ಪದಕವನ್ನು ವಶಪಡಿಸಿಕೊಂಡರು.

ಪರಿಶಿಷ್ಟ ಜಾತಿ, ಪಂಗಡಗಳ ಒಳಮೀಸಲಾತಿಗೆ ಸುಪ್ರೀಂ ಅಸ್ತು

ಶಿಕ್ಷಣ, ಉದ್ಯೋಗದಲ್ಲಿ ಈ ಮೀಸಲಾತಿ ಜಾರಿಗೆ ಏಳು ಸದಸ್ಯರ ಸಾಂವಿಧಾನಿಕ ಪೀಠ ಸಮ್ಮತಿ



ನವದೆಹಲಿ, ಆ.1– ಮಹತ್ವದ ಬೆಳವಣಿಗೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಒಳಮೀಸಲಾತಿಗೆ ಸುಪ್ರೀಂಕೋರ್ಟ್‌ನ ಏಳು ಸದಸ್ಯರ ಸಾಂವಿಧಾನಿಕ ಪೀಠದ ಒಪ್ಪಿಗೆ ಸಿಕ್ಕಿದೆ. ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ನ್ಯಾ.ಚಂದ್ರಚೂಡ್ ನೇತೃತ್ವದ ಏಳು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠವು, ಪರಿಶಿಷ್ಟ ಜಾತಿ ಹಾಗೂ ಪಂಗಡಗಳಲ್ಲಿಯೇ ತೀರಾ ಹಿಂದುಳಿದಿರುವ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಮಹತ್ವದ ತೀರ್ಪು ನೀಡಿದೆ. ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಈ ಮೀಸಲಾತಿ ಜಾರಿಗೆ ತರಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಒಬ್ಬರನ್ನು ಹೊರತುಪಡಿಸಿ (ನ್ಯಾ.ಬೇಲಾ ತ್ರಿವೇದಿ) ಉಳಿದ ಆರು ನ್ಯಾಯಮೂರ್ತಿಗಳ ತೀರ್ಪುಗಳು ಪರಿಶಿಷ್ಟ ಜಾತಿ, ಪಂಗಡಗಳ ಉಪ ವರ್ಗೀಕರಣಕ್ಕೆ ಹಾಗೂ ಆ ಮೂಲಕ ಒಳ ಮೀಸಲಾತಿಯ ಪರವಾಗಿದ್ದವು. ಹಾಗಾಗಿ, 6:1 ಅನುಪಾತ ದಡಿ, ಉಪ ವರ್ಗೀಕರಣ ಆಧಾರಿತ ಮೀಸಲಾತಿಗೆ ನ್ಯಾಯ ಪೀಠ ಅಸ್ತು ಎಂದಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳಲ್ಲೇ ಇದ್ದರೂ, ದಶಕಗಳಿಂದ ಮೀಸಲಾತಿಯ ಸೌಲಭ್ಯಗಳಿದ್ದರೂ ಕೆಲ ಜಾತಿಗಳೇ ಮೀಸಲಾತಿಯ ಸಕಲ ಸವಲತ್ತುಗಳನ್ನು ಪಡೆದು ಮುಂದುವರಿದಿದ್ದಾರೆ. ಹಾಗಾಗಿ ಮೀಸಲಾತಿಯ ಹೊರತಾಗಿಯೂ ಇನ್ನೂ ಅಭಿವೃದ್ಧಿಯಾಗದ ಜಾತಿಗಳಿಗೆ ಈಗಿರುವ ಶೇಕಡಾವಾರು ಮೀಸಲಾತಿಯಲ್ಲೇ (ಶೇ. 15) ಒಳ ಮೀಸಲಾತಿ ಕಲ್ಪಿಸಬೇಕು. ಅದಕ್ಕಾಗಿ, ಪರಿಶಿಷ್ಟ ಜಾತಿ, ಪಂಗಡಗಳ ಉಪ ವರ್ಗೀಕರಣ ಅಗತ್ಯವಾಗಿದೆ. ಹೀಗೆ ಉಪ ವರ್ಗೀಕರಣ ಮಾಡುವುದರಿಂದ ಸಂವಿಧಾನದ ■ 11ನೇ ಪುಟಕ್ಕೆ

ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ವಾಡಿಕೆಗಿಂತ ಅಧಿಕ ಮಳೆ

ಹವಾಮಾನ ಇಲಾಖೆ ಮುನ್ಸೂಚನೆ



ನವದೆಹಲಿ, ಆ.1– ಈ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ದೇಶದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬೀಳಲಿದೆ. ಆಗಸ್ಟ್ ಅಂತ್ಯದ ವೇಳೆಗೆ ಲಾ ನಿನಾ ಪರಿಸ್ಥಿತಿಗಳು ಏರ್ಪಡುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಗುರುವಾರ ತಿಳಿಸಿದೆ. ಕೃಷಿ ಪ್ರಧಾನ ದೇಶವಾದ ಭಾರತಕ್ಕೆ ಮುಂಗಾರು ಮಳೆ ನಿರ್ಣಾಯಕವಾಗಿದೆ, ನಿವ್ವಳ ಕೃಷಿ ಪ್ರದೇಶದ ಶೇ.52ರಷ್ಟು ಭಾಗ ಮಳೆಯ ಮೇಲೆ ಅವಲಂಬಿತವಾಗಿದೆ. ದೇಶದಾದ್ಯಂತ ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆಗೆ ನಿರ್ಣಾಯಕವಾದ ಜಲಾಶಯಗಳನ್ನು ಮರುಪೂರಣಗೊಳಿಸಲು ಪ್ರಾಥಮಿಕ ಮಳೆ ಸುರಿಯುವಿಕೆ ಸಹ ನಿರ್ಣಾಯಕವಾಗಿದೆ. ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಭಾರತದಾದ್ಯಂತ ಮಳೆಯು ದೀರ್ಘಾವಧಿಯ ಸರಾಸರಿ 422.8 ಮಿ.ಮೀನಷ್ಟು ಸುರಿಯಲಿದೆ, ಅಂದರೆ ಶೇ.106ರಷ್ಟು ■ 7ನೇ ಪುಟಕ್ಕೆ

ನೆರೆಪೀಡಿತ, ಬೆಟ್ಟಗುಡ್ಡ ಆಶ್ರಿತ

ಪ್ರವಾಸಿತಾಣಗಳಿಗೆ ಪ್ರವೇಶ ನಿರ್ಬಂಧ

ಮೈಸೂರು, ಆ.1(ಆರ್‌ಕೆ)–ಭಾರಿ ಮಳೆಯಿಂದಾಗಿ ಜಲಾಶಯಗಳು ತುಂಬಿ, ನದಿಗಳು ಉಕ್ಕಿ ಹರಿಯುತ್ತಿರುವುದರಿಂದ ನೆರೆಪೀಡಿತ ಹಾಗೂ ಬೆಟ್ಟ–ಗುಡ್ಡ ಆಶ್ರಿತ ಪ್ರವಾಸಿ ತಾಣಗಳಿಗೆ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಲಾಗಿದೆ.


ಕಾವೇರಿ ಜಲಾನಯನ ಪ್ರದೇಶದಲ್ಲಿ ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯ ಗರಿಷ್ಟ ಮಟ್ಟ ತಲುಪಿದ್ದು, ಹೆಚ್ಚುವರಿ ನೀರನ್ನು ಜಲಾಶಯದಿಂದ ನದಿಗೆ ಬಿಡುತ್ತಿರುವ ಕಾರಣ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ.



ಡಾ.ಕುಮಾರ್

ಸುಮಾರು 99,501 ಕ್ಯೂಸೆಕ್ ನೀರು ಬಿಟ್ಟಿರುವ ಕಾರಣ, ಮುನ್ನೆಚ್ಚರಿಕಾ ಕ್ರಮವಾಗಿ ಶ್ರೀರಂಗಪಟ್ಟಣ ತಾಲೂಕಿನ ಪ್ರವಾಸಿ ಕೇಂದ್ರಗಳಿಗೆ ಪ್ರವೇಶ ನಿರ್ಬಂಧಿಸಿ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಆದೇಶಿಸಿದ್ದಾರೆ.





ಅದರಂತೆ ಕೃಷ್ಣರಾಜಸಾಗರದ ಬೃಂದಾವನ ಗಾರ್ಡನ್, ಶ್ರೀರಂಗಪಟ್ಟಣ ಬಳಿಯ ಬಲಮುರಿ, ಎಡಮುರಿ, ರಂಗನತಿಟ್ಟು ಪಕ್ಷಿಧಾಮ, ಪಶ್ಚಿಮವಾಹಿನಿ, ವೆಲ್ಲೆಸ್ಲಿ ಸೇತುವೆ, ನಿಮಿಷಾಂಬ ದೇವಸ್ಥಾನ ಬಳಿ ನದಿ ತೀರಕ್ಕೆ ತೆರಳದಂತೆ ಬ್ಯಾರಿಕೇಡ್ ಅಳವಡಿಸಿ ನಿರ್ಬಂಧಿಸಲಾಗಿದೆ. ಇಂದು (ಆ.1) ಮತ್ತು ನಾಳೆ (ಆ.2) ಹೀಗೆ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಿ ಆದೇಶಿಸಿದ್ದು, ಮಳೆ ಪರಿಸ್ಥಿತಿ, ನದಿ ನೀರಿನ ಪ್ರಮಾಣ ಅವಲೋಕಿಸಿ ನಂತರ ಮುಂದಿನ ಆದೇಶ ಹೊರ ಬೀಳಲಿದ್ದು ಅಲ್ಲಿಯವರೆಗೆ ಕಾವೇರಿ ಆಜುಬಾಜಿನ ಪ್ರವಾಸಿತಾಣಗಳಿಗೆ ಪ್ರವೇಶ ನಿಷೇಧಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಗಗನಚುಕ್ಕಿ, ಭರಚುಕ್ಕಿ ಮತ್ತು ■ 11ನೇ ಪುಟಕ್ಕೆ



ಶಿಲ್ಪಾನಾಗ್

ರಾಜ್ಯ ಕಾಂಗ್ರೆಸ್ ಸರ್ಕಾರದ ವಾಲ್ಮೀಕಿ, ಮುಡಾ ಹಗರಣಗಳ ವಿರುದ್ಧ ಬಿಜೆಪಿ–ಜೆಡಿಎಸ್


ಬೆಂಗಳೂರಿಂದ ಮೈಸೂರಿಗೆ ನಾಳೆಯಿಂದ ಪಾದಯಾತ್ರೆ

● ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಸಿಎಂ ಯಡಿಯೂರಪ್ಪರಿಂದ ಶನಿವಾರ ಬೆಳಿಗ್ಗೆ 8.30ಕ್ಕೆ ಬೆಂಗಳೂರು ನೈಸ್ ರಸ್ತೆ ಜಂಕ್ಷನ್‌ನಲ್ಲಿ ಚಾಲನೆ ● ಬಿಜೆಪಿ, ಜೆಡಿಎಸ್ ಸಂಸದರು, ಶಾಸಕರು, ಮುಖಂಡರು, ಕಾರ್ಯಕರ್ತರು ಭಾಗಿ; ಸಾರ್ವಜನಿಕರಿಗೂ ಆಹ್ವಾನ

ಹೆಚ್‌ಡಿಕೆ ವಾರ್ನಿಂಗ್‌ಗೆ ಪ್ರೀತಂಗೌಡರನ್ನು ಹೊರಗಿಟ್ಟ ಬಿಜೆಪಿ

ನವದೆಹಲಿ, ಆ.1–ಕಾಂಗ್ರೆಸ್ ಸರ್ಕಾರದ ಹಗರಣಗಳ ವಿರುದ್ಧ ಆ.3ರಿಂದ ಆರಂಭಿಸಲಿರುವ ಬಿಜೆಪಿ–ಜೆಡಿಎಸ್ ಮೈತ್ರಿ ಪಾದಯಾತ್ರೆಯಲ್ಲಿ ಹಾಸನದ ಮಾಜಿ ಶಾಸಕ ಪ್ರೀತಂಗೌಡ ಪಾತ್ರವೂ ಇಲ್ಲ, ಮಹತ್ವವೂ ಇಲ್ಲ ಎಂದು ಕರ್ನಾಟಕ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರ್‌ವಾಲ್ ಮಾಹಿತಿ ನೀಡಿದರು.

ಕಾಂಗ್ರೆಸ್ ಸರ್ಕಾರದ ಹಗರಣಗಳನ್ನು ವಿರೋಧಿಸಿ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿ ಪಾದಯಾತ್ರೆ ಮಾಡುವುದಕ್ಕೆ ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ, ದೇವೇಗೌಡರ ಕುಟುಂಬವನ್ನು ಮುಗಿಸಲು ಮುಂದಾಗಿದ್ದ ಪ್ರೀತಂಗೌಡನನ್ನು ಪಕ್ಕದಲ್ಲಿಟ್ಟುಕೊಂಡು ಪಾದಯಾತ್ರೆ ಮಾಡಲು ಬರುವುದಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಖಡಕ್ ಸೂಚನೆ ರವಾನಿಸಿದ್ದರು. ಇದರ ಬೆನ್ನಲ್ಲೇ ದೆಹಲಿಯಲ್ಲಿ ಸಭೆ ನಡೆಸಿದ ಬಿಜೆಪಿ ಹೈಕಮಾಂಡ್



ದೆಹಲಿಯಲ್ಲಿ ಪಾದಯಾತ್ರೆ ಸಂಬಂಧ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್ ನೇತೃತ್ವದಲ್ಲಿ ಸಭೆ ನಡೆಯಿತು. ಈ ವೇಳೆ ಕೇಂದ್ರ ಸಚಿವ ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದಾರೆ.

ಪ್ರೀತಂಗೌಡನಿಗೆ ಮಹತ್ವ ನೀಡದೇ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಪಾದಯಾತ್ರೆ ಮಾಡಲು ತೀರ್ಮಾನಿಸಲಾಗಿದೆ.

ನವದೆಹಲಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಕರ್ನಾಟಕ ಉಸ್ತುವಾರಿ ರಾಧಾ ಮೋಹನ್ ಅಗರ್‌ವಾಲ್ ಅವರು, ರಾಜ್ಯದ ಎಲ್ಲಾ ಬಿಜೆಪಿ ಹಾಗೂ ಜೆಡಿಎಸ್ ನಾಯಕರು, ಶಾಸಕರು, ಸಂಸದರು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರ ಆಗಿರುವ ಬಗ್ಗೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಸದನದಲ್ಲಿ ಒಪ್ಪಿಕೊಂಡಿದ್ದಾರೆ. 6 ಕೋಟಿ ಕನ್ನಡಿಗರ ಪರವಾಗಿ ನಾವು ಮೈತ್ರಿಕೂಟ ಧ್ವನಿ ಎತ್ತುತ್ತಿದ್ದೇವೆ. ಆಗಸ್ಟ್ 3ರ ಶನಿವಾರ ಬೆಳಗ್ಗೆ 8.30ಕ್ಕೆ ಪಾದಯಾತ್ರೆಯನ್ನು ಬೆಂಗಳೂರಿನ ನೈಸ್ ರಸ್ತೆ ಜಂಕ್ಷನ್‌ನಿಂದ ಆರಂಭಿಸಲಾಗುತ್ತದೆ. ಜೆಡಿಎಸ್, ಬಿಜೆಪಿ ಪಕ್ಷಗಳು ಪಾದಯಾತ್ರೆ ಉಸ್ತುವಾರಿ ಹೊತ್ತುಕೊಳ್ಳಲಿವೆ. ಇನ್ನು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಾದಯಾತ್ರೆಯಲ್ಲಿ ಬಿಜೆಪಿಯ ಮಾಜಿ ಶಾಸಕ ಪ್ರೀತಂಗೌಡ ಅವರ ನೇತೃತ್ವ ಇರುವುದಿಲ್ಲ. ಮುಖ್ಯವಾಗಿ ಪಾದಯಾತ್ರೆಯಲ್ಲಿ ಪ್ರೀತಂಗೌಡ ಅವರ ಪಾತ್ರವೂ ಇಲ್ಲ, ಮಹತ್ವವೂ ಇಲ್ಲ ಎಂದು ಹೇಳಿದರು.

ಬಡವರ ಹಣ ಲೂಟಿ: ಬಡವರ ಹಣವನ್ನು ಲೂಟಿ ಮಾಡುವ ಕಾಂಗ್ರೆಸ್ ಸರ್ಕಾರ, ಸರ್ಕಾರಿ ಯೋಜನೆಯ ಹಣವನ್ನು ಚುನಾವಣೆಗೆ ಬಳಕೆ ಮಾಡಿಕೊಂಡಿದೆ. ಇದರ ಹಿನ್ನೆಲೆ ಲೋಕಸಭೆ ಚುನಾವಣೆಯಲ್ಲಿ ಜನರು ಉತ್ತರ ನೀಡಿದ್ದಾರೆ. ಚುನಾವಣೆಯ ನಂತರವು ಭ್ರಷ್ಟಾಚಾರ ಮುಂದುವರೆಸಿದ್ದಾರೆ. ಸಿಎಂ ಸಿದ್ದರಾಮಯ್ಯ ತಮ್ಮ ಬೆಲೆ ಬಾಳದ ಭೂಮಿಯ ಬದಲಾಗಿ, ಭ್ರಷ್ಟಾಚಾರದಿಂದ ಬೆಲೆ ಬಾಳುವ 14 ಸೈಟ್ ಪಡೆದಿದ್ದಾರೆ. ಇದು ಅತೀ ದೊಡ್ಡ ಭ್ರಷ್ಟಾಚಾರವಾಗಿದೆ. ಸ್ವತಃ ಇದರ ವಿರುದ್ಧ ನಮ್ಮ ■ 11ನೇ ಪುಟಕ್ಕೆ

ಬಿಜೆಪಿ ಪಾದಯಾತ್ರೆಗೂ ಮುನ್ನ ಕಾಂಗ್ರೆಸ್‌ನಿಂದ ನೈತಿಕತೆ ಪ್ರಶ್ನೆ ಸಭೆ

ಎನ್‌ಡಿಎ ಪಾದಯಾತ್ರೆ ಮಾರ್ಗದಲ್ಲೇ ಸರಣಿ ಸಭೆ ನಡೆಸಿ ಬಿಜೆಪಿ ಅಧಿಕಾರಾವಧಿಯ ಅಕ್ರಮಗಳ ಬಯಲು ಮಾಡಲು ತೀರ್ಮಾನ

ಬೆಂಗಳೂರು, ಆ.1–ಬಿಜೆಪಿ ಪಾದಯಾತ್ರೆಗೆ ಪ್ರತಿಯಾಗಿ ಕಾಂಗ್ರೆಸ್ ನಾಳೆ(ಆ.2)ಯಿಂದ ಬಿಜೆಪಿ ನಾಯಕರ ನೈತಿಕತೆ ಪ್ರಶ್ನಿಸುವ ಸಭೆ ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಬಿಜೆಪಿ ಕಾಲದ ಅಕ್ರಮ, ಕೇಂದ್ರದಿಂದ ರಾಜ್ಯಕ್ಕೆ ಆಗಿರುವ ಅನ್ಯಾಯ, ಸಂವಿಧಾನ ಸಂಸ್ಥೆಗಳ ದುರ್ಬಳಕೆ ಬಗ್ಗೆ ಪ್ರಶ್ನೆ ಮಾಡುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸದಾಶಿವನಗರ ನಿವಾಸದಲ್ಲಿ ಗುರುವಾರ ರಾತ್ರಿ ತುರ್ತು ಮಾಧ್ಯಮ ಗೋಷ್ಠಿ ನಡೆಸಿದ ಶಿವಕುಮಾರ್ ಅವರು, ನಾಳೆ (ಶುಕ್ರವಾರ) ಬಿಡದಿಯಲ್ಲಿ ಬೆಳಗ್ಗೆ 11 ಗಂಟೆಗೆ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ ನಡೆಯಲಿದೆ. ಬಿಜೆಪಿ ಅವಧಿಯಲ್ಲಿ ರಾಜ್ಯದಲ್ಲಿ ಆಗಿರುವ ಹಗರಣ, ಅನ್ಯಾಯಗಳ ಬಗ್ಗೆ ಪ್ರಶ್ನೆ ಮಾಡಿ ಜನರಿಗೆ ತಿಳಿಸುತ್ತೇವೆ. ನಮ್ಮ ಪ್ರಶ್ನೆಗಳಿಗೆ ಬಿಜೆಪಿ ನಾಯಕರು ಉತ್ತರ ನೀಡಬೇಕು ಎಂದು ತಿಳಿಸಿದರು. ಬಿಜೆಪಿ ನಾಯಕರು ಎಲ್ಲೆಲ್ಲಿ ಪಾದಯಾತ್ರೆ ಮಾಡುತ್ತಿದ್ದಾರೋ ಅಲ್ಲಿ ಒಂದೊಂದು ದಿನ ಮುಂಚಿತವಾಗಿ ಈ ಕಾರ್ಯಕ್ರಮ ಮಾಡುತ್ತೇವೆ. ಆಗಸ್ಟ್ 2ರಂದು ಬಿಡದಿ, 3ರಂದು ರಾಮನಗರ, 4ರಂದು ಚನ್ನಪಟ್ಟಣ, 5ರಂದು ಮದ್ದೂರು, 6ರಂದು ಮಂಡ್ಯದಲ್ಲಿ, 9ರಂದು ಮೈಸೂರಿನಲ್ಲಿ ಈ ಕಾರ್ಯಕ್ರಮ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ಇದೇ ವೇಳೆ ಬಿಜೆಪಿ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಯಾವ ರೀತಿ ಪ್ರಯತ್ನ ಮಾಡುತ್ತಿದ್ದಾರೆ ಎಂದು ಜನರಿಗೆ ತಿಳಿಸುತ್ತೇವೆ. ಪ್ರತಿನಿತ್ಯ ಸಚಿವರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಶಾಸಕರು ಹಾಗು ಕಾರ್ಯಕರ್ತರು ಭಾಗವಹಿಸಬೇಕು ಎಂದು ಮನವಿ ಮಾಡುತ್ತೇನೆ ಎಂದು ತಿಳಿಸಿದರು. ■ 11ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ : ಒಂದು ಕೆ.ಜಿ. ಚಿಪ್ಸ್‌ಗೆ ಎಷ್ಟು ರೂಪಾಯಿ?
ವ್ಯಾಪಾರಿ : 80 ರೂಪಾಯಿ
ಗುಂಡ : ಲೂಸ್ ತಗೊಂಡರೆ?
ವ್ಯಾಪಾರಿ : ಯಾರ್ ತಗೊಂಡ್ರು ಅಷ್ಟೇ!

ಮೈಸೂರು ಮಿತ್ರ

ಶುಕ್ರವಾರ, 2 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಮ್ಮವರೇ ನಮ್ಮನ್ನು ತಪ್ಪಾಗಿ ತಿಳಿದುಕೊಂಡಾಗ ಒಬ್ಬಂಟಿಯಾಗಿ ಇರುವುದೇ ಒಳ್ಳೆಯದು. ಏಕೆಂದರೆ, ನಮ್ಮ ಮಾತು, ನಮ್ಮ ಕಾಳಜಿ ಕೊನೆಗೆ ಅವರಿಗೆ ನಾಟಕ ಎನಿಸಿಬಿಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಓಡಿದವನಿಗೆ ಓಣಿ ಕಾಣಲಿಲ್ಲ,
ಹಾಡಿದವನಿಗೆ ಹಾದಿ ಕಾಣಲಿಲ್ಲ.

ನಿಮ್ಮ ಪತ್ರಗಳು

ಹಗರಣವೆಂಬ ನಾಟಕ!

ಮಾನ್ಯರೆ,

ವಾಲ್ಮೀಕಿ ನಿಗಮದ ಹಗರಣ, ಮುಡಾ ಹಗರಣ, ದೇವರಾಜ ಅರಸು ಟ್ರಕ್ ಟರ್ಮಿನಲ್ ಹಗರಣ.... ಎಂಬ ಸುದ್ದಿಯನ್ನು ಓದುವಾಗ, ನೋಡುವಾಗ 'ಹಗರಣ' ಎಂದರೇನು ಎಂಬ ಪ್ರಶ್ನೆ ಮೂಡುತ್ತದೆ!

ಹಗರಣ ಎಂದರೆ 'ನಾಟಕ' ಎಂದು ಅರ್ಥ. ಪುರಂದರದಾಸರು ರಚಿಸಿದ 'ನಗುವರಲೋ ರಂಗಯ್ಯ ನಿನ್ನಾಟವ ಕಂಡು ॥ ಹಗರಣವಾಗಿದೆ ಎನಗೆ ನಿಗಮಗೋಚರನೆ!' ಎಂಬ ದಾಸರ ಪದದಲ್ಲಿ ಇದನ್ನು ವಿವರಿಸಲಾಗಿದೆ.

ನಿಗಮಗೋಚರನೆ ಎಂದಾಗ ನಮ್ಮ ನಿಗಮಗಳು, ಪ್ರಾಧಿಕಾರಗಳು ಅವುಗಳ ಹಗರಣಗಳು ನೆನಪಾಗುತ್ತದೆ!

ಹಗರಣ ಎಂಬುದು ಮೂರೂ ಪಕ್ಷಗಳು ಸೇರಿ ಆಡಿದ ನಾಟಕವಾದರೆ, ಹಗರಣದ ತನಿಖೆ, ಪಾದಯಾತ್ರೆ, ಪ್ರತಿಭಟನೆ, ಹೋರಾಟ ಇತ್ಯಾದಿಗಳು ಆ ನಾಟಕದ ಬೇರೆ ಬೇರೆ ಅಂಕಗಳು! ನಾವು ಮೂಕಪ್ರೇಕ್ಷಕರು!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ವಿಶ್ವಮಾನವ ಜೋಡಿ ರಸ್ತೆಯಲ್ಲಿ ಸಂಚಾರಿ ಪೊಲೀಸರ ನಿಯೋಜಿಸಿ



ಮಾನ್ಯರೆ,

ಇದು ಮೈಸೂರು ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆಯಿಂದ ಮಾನಸ ಗಂಗೋತ್ರಿಯ ಮುಂದೆ ಹುಣಸೂರು ರಸ್ತೆ ತಲುಪಬೇಕಾದ ಬೋಗಾದಿ ಮುಖ್ಯ ರಸ್ತೆ ಮತ್ತು ಮಾನಸ ಗಂಗೋತ್ರಿಯ ಜಂಕ್ಷನ್.

ಈ ಜಂಕ್ಷನ್ ಮುಖಾಂತರವೇ, ಬೋಗಾದಿ ಮುಖ್ಯ ರಸ್ತೆಯ ಮೂಲಕ ಮೈಸೂರು ನಗರಕ್ಕೆ, ಕುವೆಂಪುನಗರದಿಂದ ಹುಣಸೂರು ರಸ್ತೆ ಮತ್ತು ಒಂಟಿಕೊಪ್ಪಲು ಹಾಗೂ ಗಂಗೋತ್ರಿ ಮೂಲಕ ಕುವೆಂಪುನಗರ ಮತ್ತು ಸರಸ್ವತಿಪುರಂಗೆ ಬರುವ ಈ ಜಂಕ್ಷನ್‌ನಲ್ಲಿ ಪ್ರತಿ ದಿನವೂ ಸಾವಿರಾರು ವಾಹನಗಳ ಸಂಚಾರ ದಟ್ಟಣೆ ಇದೆ. ಅದರಲ್ಲೂ ಬೆಳಿಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ಮತ್ತು ಸಂಜೆ 4 ರಿಂದ ಸಂಜೆ 7ರ ತನಕ ಆಫೀಸ್ ಮತ್ತು ಶಾಲಾ ಕಾಲೇಜುಗಳು ಮುಚ್ಚುವ ಸಮಯದಲ್ಲಂತೂ ಇಲ್ಲಿ ಹೋಗಿ – ಬರುವುದೇ ದೊಡ್ಡ ಸಾಹಸ ಎನಿಸುತ್ತದೆ. ಈ ಜಂಕ್ಷನ್ ಬಳಿ ಆಗಾಗ್ಗೆ ರಸ್ತೆ ಅಪಘಾತಗಳು ಸಂಭವಿಸುತ್ತಲೇ ಇವೆ. ಬೆಳಗ್ಗೆ ಮತ್ತು ಸಂಜೆ ಈ ಕೂಡಲೇ ಸಂಚಾರಿ ಪೊಲೀಸರನ್ನು ನಿಯೋಜಿಸಿ ಅಪಘಾತಗಳನ್ನು ತಪ್ಪಿಸಿ ಮತ್ತು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ ಮೈಸೂರು

ಪ್ರವಾಸಿತಾಣಗಳಿಗೆ ಪ್ರವೇಶ ನಿರ್ಬಂಧ ವಿಧಿಸಿ

ಮಾನ್ಯರೆ,

ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಉದ್ಯೋಗಿಗಳು ಮೋಜು ಮಸ್ತಿ ಮಾಡಲು ಸೆಲ್ಫಿ ತೆಗೆಯಲು, ರೀಲ್ಸ್ ಮಾಡಲು ಜಲಪಾತ ಹಾಗೂ ನಾಲೆಗಳ ಹತ್ತಿರ ಹೋಗಿ ತಮ್ಮ ಅಮೂಲ್ಯವಾದ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಇವರು ಹೋಗುವ ವಿಚಾರವೂ ಕೂಡ ಮನೆಯ ಪೋಷಕರಿಗೂ ಗೊತ್ತಿರುವುದಿಲ್ಲ. ಈ ರೀತಿ ದುರಂತಗಳಿಂದ ಹಲವಾರು ಕುಟುಂಬಗಳು ಅನಾಥವಾಗುತ್ತಿವೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಡಳಿತವು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ, ಅಪಾಯಕಾರಿ ಸ್ಥಳಗಳಿಗೆ ಪ್ರವೇಶ ನಿರ್ಬಂಧಿಸಬೇಕು. ಇತ್ತ ಯುವ ಜನಾಂಗವೂ ಕೂಡ ಭವಿಷ್ಯದ ದೃಷ್ಟಿಯಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮುನ್ನೆಚ್ಚರಿಕೆ ವಹಿಸಿ ಭವಿಷ್ಯ ರೂಪಿಸಿಕೊಳ್ಳುವ ಕಡೆ ಗಮನ ಹರಿಸುವುದು ಸೂಕ್ತ.

–ಪ್ರಮೋದ್, ಕಾನೂನು ವಿದ್ಯಾರ್ಥಿ, ಜೆಎಸ್‌ಎಸ್ ಕಾನೂನು ಕಾಲೇಜು, ಮೈಸೂರು.

ಋಣ

ಮಾನ್ಯರೆ,

(ಆಲೂರು ವೆಂಕಟರಾಯರನ್ನು ಕುರಿತು)
ಹಲವು ಋಣಗಳನು ನಮ್ಮವರೊಳೆದಿಹರು ಹಿಂದೆ:
ಋಷಿ ಋಣವ ಸೇರಿಸುವುದುಚಿತ ಆ ಪಟ್ಟಿಯಲಿ!
ಪ್ರಾಚೀನ ಕಾಲಕ್ಕೆ, ಅಂತೆ ಕಾಂತಾರಕ್ಕೆ
ಸೀಮಿತವೇ ಋಷಿ ಪರಂಪರೆ? ನೀತ ಆಧುನಿಕ
ಋಷಿ ಮುಖ್ಯರಲಿ ಒಬ್ಬರಹುದು ಆಲೂರರೇ!
ನಾಡು ನುಡಿಗಳ ಹಿತಕೆ 'ಕರ್ನಾಟಕ ಕುಲಪುರೋ
ಹಿತ'ರಾಗಿ ತಪವನೆಸಗಿದಿರಿ, ಬರಿ ನೆಪವಲ್ಲ!
ಭರತ ಖಂಡದ ಶ್ರೇಯಕಾಗಿ ಕರ್ನಾಟಕದ
ಸೇವೆ ನಿಮ್ಮ ಧ್ಯೇಯ; ನಾಡ 'ಗತಭ್ಯೈಭವ'ದ
ದೇದೀಪ್ಯಮಾನ ಪುಟಗಳ ತೆರೆದು ತೋರಿದಿರಿ;
ಹರಿದು ಹಂಚಿದ ನಾಡನೊಗ್ಗೂಡಿಸಲು ಬೆವರ
ಸುರಿಸಿದಿರಿ. ಕುಲಪುರೋಹಿತರಂತೆ ಕುಲಪತಿಯು
ಕೂಡ ! ಆಚಾರ್ಯ 'ಶ್ರೀ'ಯವರು ಕನ್ನಡ ಕಣ್ವ;
ನೀವೆಲ್ಲ ಕಣ್ಣುಗಳು ! ಮತ್ತೊಮ್ಮೆ ಪೊರೆಗಟ್ಟಿ,
ಮಬ್ಬು ಕನ್ನಡ ಜನರ ಕಣ್ಣು; ತಿಳಿಯಿಸಿ ಮತ್ತೆ
ಗತವೈಭವವೇ ನಿಮ್ಮ ಕೃತಿ? ಕೃತಾರ್ಥ, ನಮಸ್ತೇ!

ಉತ್ತಮ : ಮೈಸೂರು ಜನಕ್ಕೆ ಸೂರು ಕಲ್ಪಿಸಿದ ಶೂರ, 'ಮನೆ ಮಾದೇಗೌಡರ ಬಗೆಗಿನ ಎಸ್. ಪ್ರಕಾಶ್ ಬಾಬು ಅವರ ಲೇಖನ (ಜು.11) ಉತ್ತಮವಾಗಿತ್ತು.

–ಸಿಪಿಕೆ, ಮೈಸೂರು.



ಡಾ. ಎ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಚಿಂತೆ ಬಿಟ್ಟರೆ ಸಂತೇಲೂ ನಿದ್ರೆ ಬರುತ್ತೆ!



> **ನಮ್ಮ ಆಕಾಂಕ್ಷೆಗಳು ಹೆಚ್ಚುತ್ತಾ ಹೋದಂತೆ ನಮ್ಮ ಚಿಂತೆಗಳೂ ಹೆಚ್ಚುತ್ತಾ ಹೋಗುತ್ತವೆ. ಅತಿಯಾದ ಆಸೆಗಳಿಗೆ ಕಡಿವಾಣ ಹಾಕಲೇಬೇಕು. ಆಗ ನೆಮ್ಮದಿ ನಮ್ಮದಾಗುತ್ತದೆ. ನಾವು ಅತಿಯಾಸೆಯಿಂದ ಗತಿಸಿ ಹೋದವರನ್ನು ಸ್ಮರಿಸುವುದಿಲ್ಲ. ಬದಲಿಯಾಗಿ ಸಮಾಜಕ್ಕಾಗಿ ಬದುಕಿ, ಇತರರ ಕಷ್ಟ ತನ್ನ ಕಷ್ಟ ಎಂದು ಭಾವಿಸಿದವರನ್ನು ಮಾತ್ರ ನೆನೆಯುತ್ತೇವೆ. ಇತರರಿಗಾಗಿ ಬಾಳುವವರಿಗೆ ಚಿಂತೆಗಳು ಕಾಡುವುದಿಲ್ಲ. ಅಕಸ್ಮಾತ್ ಕಾಡಿದರೆ ಈ ಜನಕ್ಕಾಗಿ ನಾನು ಇನ್ನಷ್ಟು ಮಾಡಬೇಕಾಗಿತ್ತು ಎಂಬ ಚಿಂತೆ ಬರಬಹುದೇ ವಿನಃ, ಅಂತಹವರಲ್ಲಿ ಸ್ವಾರ್ಥದ ಚಿಂತೆಗಳು ಇರುವುದಿಲ್ಲ.**

ಚಿಂತೆಗಳೇ ಇಲ್ಲದವರು ಯಾರಾದರೂ ಇರಲು ಸಾಧ್ಯವೇ? ಎಂಬ ಪ್ರಶ್ನೆಗೆ ಉತ್ತರಿಸುವುದು ಸುಲಭ ಸಾಧ್ಯವಲ್ಲ. ಈ ಚಿಂತೆ ಏನೂ ಇಲ್ಲದವರಿಗೂ ಇದೆ, ಎಲ್ಲಾ ಇದ್ದವರಿಗೂ ಇದೆ. ಹಸಿವೆಯಿಂದ ಬಳಲುತ್ತಿರುವವನಿಗೆ ಆಹಾರದ ಚಿಂತೆ. ಅದೇ ಹೆಚ್ಚು ತಿಂದವನಿಗೆ ಅದನ್ನು ಅರಗಿಸಿಕೊಳ್ಳುವ ಚಿಂತೆ. ಬಾಯಾರಿಕೆಯಾದವನಿಗೆ ನೀರಿನ ಚಿಂತೆಯಾದರೆ, ನೀರು ತಯಾರಿಕಾ ಸಂಸ್ಥೆಯವನಿಗೆ ತನ್ನ ಕಂಪನಿಯ ನೀರು ಮಾರಾಟದ ಚಿಂತೆ. ಹಣವಿಲ್ಲದವನಿಗೆ ಹಣದ ಚಿಂತೆಯಾದರೆ, ಹಣವಿದ್ದವನಿಗೆ ಅದನ್ನು ಕಾಪಾಡಿಕೊಳ್ಳುವ ಚಿಂತೆ. ಹೀಗೆ ಎಲ್ಲರೂ ಚಿಂತಾಕ್ರಾಂತರೇ. ಹಾಗೆ ನೋಡಿದರೆ ಈ ಚಿಂತೆ ಸರ್ವಸಂಗ ಪರಿತ್ಯಾಗಿಗಳನ್ನೂ ಬಿಟ್ಟಿಲ್ಲ. ಅವರಿಗೆ ತಮ್ಮ ಆಶ್ರಮ ಬೆಳೆಸುವ, ತಮ್ಮವರನ್ನು ಬೆಳೆಸುವ ಚಿಂತೆ. ಇತ್ತೀಚೆಗೆ ಒಬ್ಬರು ಸನ್ಯಾಸಿ ತಮ್ಮ ಬೆಂಬಲಿಗರನ್ನು ಉನ್ನತ ಪದವಿಗೆ ಕೂರಿಸುವ ಕುರಿತಾಗಿ ಮಾತನಾಡಿದ್ದನ್ನು ಕಂಡಿದ್ದೇವೆ. ಹೀಗೆ ಈ ಚಿಂತೆ ಯಾರನ್ನೂ ಬಿಟ್ಟಿದ್ದಲ್ಲ.

ಒಂದು ಸುಭಾಷಿತವಿದೆ; 'ಚಿಂತಾಯಾಶ್ಚ ಚಿತಾಯಾಶ್ಚ ಬಿಂದು ಮಾತ್ರಂ ವಿಶೇಷತಃ, ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವನ್'. ಇದರ ಅರ್ಥ ಚಿತೆ ನಿರ್ಜೀವವಾದ ದೇಹವನ್ನು ಸುಟ್ಟರೆ ಚಿಂತೆ ಜೀವನವನ್ನೇ ಸುಡುತ್ತದೆ. ಮನದೊಳಗಿನ ಚಿಂತೆ ನಮ್ಮನ್ನು ಸಜೀವವಾಗಿ ದಹಿಸುತ್ತದೆ ಎಂಬುದು ಇದರ ಅರ್ಥ. ನಾವೇ ಸಾಮಾನ್ಯವಾಗಿ ಚಿಂತೆಗಳನ್ನು ಹಚ್ಚಿಕೊಂಡಿರುತ್ತೇವೆ. ಕೆಲವೊಮ್ಮೆ ಅದನ್ನು ಯಾರಲ್ಲಿಯೂ ಹೇಳುವುದಿಲ್ಲ. ಇದಕ್ಕೆ ಕಾರಣ ಹೇಳಿದರೆ ಏನು ಪ್ರಯೋಜನ ಎಂದೋ, ನನ್ನ ಚಿಂತೆ ನನಗೆ ಬಿಟ್ಟದ್ದು, ಅದನ್ನು ಯಾರಿಗೆ ಏಕೆ ಹೇಳಬೇಕು ಎಂದೋ, ನನ್ನೀ ಚಿಂತೆಗೆ ನಾನೇ ಪರಿಹಾರ ಕಂಡುಕೊಳ್ಳಬೇಕು ಎಂದೋ ಭಾವಿಸುತ್ತಾರೆ. ಹಾಗಾಗಿ ಅದನ್ನು ಇತರರಿಗೆ ಹೇಳುವುದಿಲ್ಲ. ಆದರೆ ಸಮಸ್ಯೆ ತಾನಾಗೆ ಬಗೆಹರಿಯುವುದಿಲ್ಲ, ಅದನ್ನು ಯಾರಲ್ಲಾದರೂ ಹೇಳಿಕೊಳ್ಳಬೇಕು. ಬೇರೆಯವರಲ್ಲಿ ಹೇಳಹೊರಟಾಗ ನಮಗೇ ಸಮಸ್ಯೆಯಿಂದ ಹೊರಬರಲು ಯಾವುದಾದರೂ ದಾರಿ ಗೋಚರವಾಗಬಹುದು. ಆದರೆ ನಮ್ಮ ಸ್ವಾಭಿಮಾನವೋ, ಬಿಗುಮಾನವೋ ಏನೋ ಹಾಗೆ ಮಾಡಲು ಬಿಡುವುದಿಲ್ಲ. ಇದರಿಂದಾಗಿ ಹಗಲು, ರಾತ್ರಿ ಆ ಬಗ್ಗೆ ಚಿಂತೆ ಮಾಡುತ್ತಾ, ಕೊರಗುತ್ತಾ ಹೋಗುತ್ತೇವೆ. ಅದನ್ನು ಕನಿಷ್ಠ ತಮ್ಮ ಆತ್ಮೀಯರಲ್ಲಿಯಾದರೂ ಹೇಳಿಕೊಳ್ಳಬೇಕು, ಇಲ್ಲದಿದ್ದರೆ ಅದು ಬೆಂಕಿಯಂತೆ ನಮ್ಮನ್ನು ನಿಧಾನವಾಗಿ ಸುಡುತ್ತಾ ಹೋಗುತ್ತದೆ.

ಹಾಗೆ ನೋಡಿದರೆ ಚಿಂತೆ ಎನ್ನುವುದು ನಾವೇ ಸೃಷ್ಟಿಸಿಕೊಂಡದ್ದಾಗಿರುತ್ತದೆ. ಸಾಮಾನ್ಯವಾಗಿ ನಾವು ಮಾಡಿದ ತಪ್ಪುಗಳೇ ನಮ್ಮ ಚಿಂತೆಗೆ ಕಾರಣವಾಗಿರುತ್ತದೆ. ಒಂದೋ ನಾವೇ ಸರಿಪಡಿಸಿಕೊಳ್ಳಬೇಕು, ನಮ್ಮಿಂದಲೇ ಸರಿಪಡಿಸಿಕೊಳ್ಳಲಾಗದಿದ್ದರೆ, ಯಾರಲ್ಲಿಯಾದರೂ ಹೇಳಿಕೊಳ್ಳಬೇಕು. ಇಲ್ಲದಿದ್ದರೆ ನಾವು ಅದರಿಂದ ಹೊರಬರಲಾಗುವುದಿಲ್ಲ.

ಚಿಂತೆಯೇ ಬರದಂತೆ ಜೀವನ ಮಾಡಲು ಸಾಧ್ಯವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬಹುಶಃ ಅದು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಏನಾದರೂ ಚಿಂತೆ ಇದ್ದೇ ಇರುತ್ತದೆ. ಹಸಿದವನು ತನಗೆ ಇಂದು ಎಲ್ಲಿ ಆಹಾರ ದೊರೆಕಬಹುದೋ ಎಂಬ ಚಿಂತೆಯಲ್ಲಿ ಇರುತ್ತಾನೆ. ನಮ್ಮ ಹಸಿವೆ ನೀರಡಿಕೆಗಳು ತಣಿದ ಮೇಲೆ, ಅಂದರೆ ನಮ್ಮ ಕನಿಷ್ಠ ಅವಶ್ಯಕತೆಗಳು ಈಡೇರಿದ ಮೇಲೆ, ನಾವು ಚಿಂತೆಯಿಂದ ಮುಕ್ತರಾಗುತ್ತೇವೆಯೇ? ಎಂದರೆ ಇಲ್ಲ, ನಂತರ ನಮಗೆ ಸಾಮಾಜಿಕ ಗೌರವ ಸಿಗಬೇಕು. ಆಸ್ತಿ ಅಂತಸ್ತು ಬೇಕು ಎಂದು ಚಿಂತಿಸುತ್ತೇವೆ. ಅದು ದೊರಕಿತೆಂದರೆ ಮತ್ತಷ್ಟರ ಕಡೆಗೆ ಮನಸ್ಸು ಎಳೆಯುತ್ತದೆ. ಹೀಗೆ ನಾವೇ ನಮ್ಮ ಚಿಂತೆಗೆ ಕಾರಣರಾಗಿರುತ್ತೇವೆ. ಸಂತೃಪ್ತಿಯು ಸಾಮಾನ್ಯವಾಗಿ ಚಿಂತೆಯಿಂದ ವಿರಾಮ ನೀಡುತ್ತದೆ.

ನಮ್ಮ ಇಂದಿನ ಜೀವನದಲ್ಲಿ ನಾನು ಸುಖವಾಗಿದ್ದರೆ ಸಾಕು ಎಂಬ ಮನೋಭಾವನೆ ಉಳ್ಳವರೇ ಹೆಚ್ಚು. ನಮ್ಮಂತೆ ಇತರರೂ ಚೆನ್ನಾಗಿರಬೇಕು, ಸುಖವಾಗಿರಬೇಕೆಂದು ಬಯಸುವವರು ಈಗ ಅಪರೂಪ. ಆದರೆ ನನ್ನ ಸುತ್ತಲಿನವರು ಸಮೃದ್ಧಿ, ಸುಭಿಕ್ಷತೆಯಿಂದ ಇದ್ದರೆ, ಎಲ್ಲರೂ ಆ ಸುಖಕ್ಕೆ ನಾವೇ ಕಾರಣರಾದರೆ ನಮ್ಮಲ್ಲಿ ಚಿಂತೆಯು ಸುಳಿಯುವುದಿಲ್ಲ. ಇಂತಹ ಮನೋಭಾವದ ಅಭಾವದಿಂದಾಗಿಯೇ ದಾಯಾದಿ, ಮತ್ಸರ, ಕಲಹಗಳು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿವೆ. ನಮಗೆ ಎಲ್ಲವೂ ಇದೆ, ಅಷ್ಟು ಸಾಕು ಎಂದು ಯೋಚಿಸದೆ, ನನಗೆ ಸಿಕ್ಕಿದಲ್ಲಿ ನನ್ನ ದಾಯಾದಿಗೆ ಸಿಗಬಾರದು ಎಂಬ ಮನೋಭಾವವೇ ದ್ವೇಷ, ಮತ್ಸರಕ್ಕೆ ನಾಂದಿಯಾಗಿ, ನಮ್ಮ ಚಿಂತೆಗೆ ಕಾರಣವಾಗುತ್ತದೆ. ಇದರಿಂದಾಗಿ ನನಗೆ ದೊರಕಿರುವುದನ್ನೂ ನಾನು ಅನುಭವಿಸಲಾಗುವುದಿಲ್ಲ.

ನಮ್ಮ ಜೀವನ ಎಂಬುದು ನಮ್ಮ ಕಲ್ಪನೆಯ ಮೇಲೆಯೇ ಆಧಾರಿತವಾಗಿರುತ್ತದೆ. ನಾನು ಸಮಾಜ ಜೀವಿ. ಸಮಾಜ ಸಮೃದ್ಧಿ, ಸುಭಿಕ್ಷತೆಯಿಂದ ಇದ್ದರೆ, ಎಲ್ಲರೂ ನೆಮ್ಮದಿಯಾಗಿದ್ದರೆ ನಾನೂ ನೆಮ್ಮದಿಯಾಗಿರಲು ಸಾಧ್ಯ ಎಂಬುದು ನಮ್ಮ ಅರಿವಿಗೆ ಬರಬೇಕು. ಎರಡೂ ದೇಶಗಳಲ್ಲಿ ಯುದ್ಧವಾದರೆ ಹಾಳಾಗುವುದು ಆ ಎರಡೂ ದೇಶಗಳು, ಅಲ್ಲಿನ ಜನರೇ. ಅದರ ಬದಲು ಅವರ ಪಾಡಿಗೆ ಅವರಿರಲಿ, ನಮ್ಮ ಪಾಡಿಗೆ ನಾವಿರೋಣ ಎಂಬ ಮನೋಭಾವ ಇದ್ದರೆ ಎರಡೂ ದೇಶಗಳು ನೆಮ್ಮದಿಯಿಂದ ಇರಲು ಸಾಧ್ಯ. ಅಂದರೆ ನನ್ನ ನೆರೆಹೊರೆ ಚೆನ್ನಾಗಿರಬೇಕು. ಇಂತಹುದು ದೇಶಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದಲ್ಲ, ಅದು ನಮ್ಮ ಊರು, ಕೇರಿ, ನಮ್ಮ ಕುಟುಂಬಕ್ಕೂ ಅನ್ವಯಿಸುತ್ತದೆ. ಊರು ಊರಿನ ನಡುವಿನ ಹಗೆ ಎರಡೂ ಊರುಗಳೂ ನೆಮ್ಮದಿಯಾಗಿರಲು ಬಿಡುವುದಿಲ್ಲ. ನಾವು ಸಹಕಾರಿ ಧೋರಣೆ ತೋರಿದರೆ ಸಾಮಾನ್ಯವಾಗಿ ಅವರೂ ಅದಕ್ಕೆ ಸ್ಪಂದಿಸಿ, ಪ್ರತಿ ಸಹಕಾರ ತೋರುತ್ತಾರೆ. ಇದೇನು ಅಸಾಮಾನ್ಯ ಸಂಗತಿಯೇನಲ್ಲ. ಸಾಮಾನ್ಯ ಜೀವನ ತತ್ವವಷ್ಟೆ.

ಇದನ್ನು ನಿರೂಪಿಸುವ ಒಂದು ಕಥೆ ಇದೆ. ಇದು ಕಥೆ, ಆದರೂ ವಾಸ್ತವಕ್ಕೆ ಹತ್ತಿರವೂ ಹೌದು. ಒಂದು ಗ್ರಾಮದಲ್ಲಿ ಒಬ್ಬ ಪ್ರಗತಿಪರ ರೈತನಿದ್ದ. ಅವನು ಯಾವುದೇ ಕೆಲಸ ಮಾಡಿದರೂ ಬಹಳ ಆಲೋಚನೆ ಮಾಡಿಯೇ ನಿರ್ಧರಿಸುತ್ತಿದ್ದ. ಅಲ್ಲದೆ ತಾನು ಮಾಡುವ ಕೆಲಸ ಸರಿಯೇ ಎಂದು ಗ್ರಾಮದವರ ಬಳಿ ಸಮಾಲೋಚಿಸುತ್ತಿದ್ದ, ಅಗತ್ಯ ಬಿದ್ದರೆ ಸಲಹೆ ಪಡೆಯುತ್ತಿದ್ದ. ಅವನು ಬೆಳೆದ ಬೆಳೆಯೂ ಉತ್ತಮ ಮಟ್ಟದ್ದಾಗಿರುತ್ತಿತ್ತು. ಅಲ್ಲದೆ ಪ್ರತಿ ವರ್ಷ ಅವನ ಬೆಳೆಗೆ ವಾರ್ಷಿಕ ಪ್ರಶಸ್ತಿಯೂ ಬರುತ್ತಿತ್ತು. ಆದರೆ ಆತ ಎಲ್ಲಿಂದ ಬಿತ್ತನೆ ಬೀಜ ತರುತ್ತಾನೆ ಎಂಬುದು ಯಾರಿಗೂ ತಿಳಿದಿರಲಿಲ್ಲ. ಪ್ರತಿವರ್ಷದಂತೆ ಅವನ ಬೆಳೆಗೆ ಪ್ರಶಸ್ತಿ ದೊರೆತಾಗ ಅವನ ಸಂದರ್ಶನಕ್ಕೆಂದು ಕೆಲವು ಪತ್ರಿಕಾ ವರದಿಗಾರರು ಬಂದರು. ಅವರಲ್ಲಿ ಒಬ್ಬ ಪತ್ರಕರ್ತ, ಆ ರೈತನಿಗೆ ಒಂದು ಪ್ರಶ್ನೆ ಕೇಳುತ್ತಾನೆ. 'ಪ್ರತಿವರ್ಷವೂ ನಿಮ್ಮ ಬೆಳೆಗೇ ಪ್ರಶಸ್ತಿ ದೊರಕುವುದಲ್ಲಾ, ಇದರ ಗುಟ್ಟೇನು'. ಅದಕ್ಕೆ ಆ ರೈತ ಅವನು ಲೋಕಾಭಿರಾಮವಾಗಿಯೇ ಇದಕ್ಕೆ ಕಾರಣ ಸತತ ದುಡಿಮೆ. ನನಗೆ ನನ್ನ ಪರಿಶ್ರಮದ ಬಗ್ಗೆ ನಂಬಿಕೆ ಇದೆ. ಆ ನಂಬಿಕೆಯೇ ನನ್ನನ್ನು ರಕ್ಷಿಸುತ್ತದೆ' ಎನ್ನುತ್ತಾನೆ.

ಆಗ ಆ ಪತ್ರಕರ್ತ 'ಹಾಗಾದರೆ ಇತರರೂ ಪರಿಶ್ರಮ ಹಾಕಿಯೇ ದುಡಿಯುತ್ತಾರೆ. ಆದರೆ ಅವರಿಗೆ ನಿಮಗೆ ದೊರೆತಂತಹ ಪ್ರತಿಫಲ ದೊರೆಯುತ್ತಿಲ್ಲ. ಬಹುಶಃ ನೀವು ತರುವ ಬಿತ್ತನೆ ಬೀಜ ನಿಮ್ಮ ಯಶಸ್ಸಿಗೆ ಕಾರಣವಾಗಿರಬಹುದು. ಹಾಗಿದ್ದರೆ ಅದನ್ನು ಎಲ್ಲಿಂದ ತರುತ್ತೀರಿ? ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಆ ರೈತ, ನಿಜ, ನಾನು ಹಲವು ಕಡೆ ಹುಡುಕಿಯೇ ಉತ್ತಮ ಬಿತ್ತನೆ ಬೀಜ ತರುತ್ತೇನೆ. ಹಾಗೆ ತರುವಾಗ ಕೇವಲ ನನ್ನ ಜಮೀನಿಗೆ ಮಾತ್ರ ಎಂದು ತರುವುದಿಲ್ಲ. ನನ್ನ ಅಕ್ಕಪಕ್ಕದ ಜಮೀನಿನವರಿಗೂ ನಾನು ತಂದು ಕೊಡುತ್ತೇನೆ' ಎನ್ನುತ್ತಾನೆ.

ಪತ್ರಕರ್ತನಿಗೆ ಆಶ್ಚರ್ಯವಾಗುತ್ತದೆ. ಆ ರೈತ ಮಾತು ಮುಂದುವರೆಸಿ, ಹೇಳುತ್ತಾನೆ; 'ನಾನು ಈ ರೀತಿ ಮಾಡುವುದು ಎರಡು ಕಾರಣಕ್ಕಾಗಿ. ಮೊದಲನೆಯದು ನನ್ನ ಬೆಳೆ ಮಾತ್ರ ಚೆನ್ನಾಗಿ ಬಂದು ಅವರಿಗೆ ಬೆಳೆ ಚೆನ್ನಾಗಿ ಬರದಿದ್ದರೆ ನನ್ನ ಬಗ್ಗೆ ಅವರಲ್ಲಿ ಅಸೂಯೆ ಮೂಡಬಹುದು. ಆಗ ಅವರು ನನ್ನ ಜಮೀನಿಗೆ ಜಾನುವಾರುಗಳನ್ನು ನುಗ್ಗಿಸಬಹುದು, ಬೆಳೆ ನಾಶಪಡಿಸಲು ಬೇರೆ ಬೇರೆ ರೀತಿಯಲ್ಲಿ ಆಲೋಚಿಸಬಹುದು. ಒಟ್ಟಾರೆ ನನ್ನ ಶತ್ರುಗಳಾಗಬಹುದು. ಎರಡನೇ ಮುಖ್ಯ ಕಾರಣ ಎಂದರೆ, ನನ್ನ ಜಮೀನಿನಲ್ಲಿ ಬೆಳೆದ ಬೆಳೆಯ ಹೂವು ಮೂಡಿದಾಗ, ಅಕ್ಕ-ಪಕ್ಕದ ಜಮೀನಿನ ಬೆಳೆಯೊಂದಿಗೆ ಪರಾಗಸ್ಪರ್ಶವೇರ್ಪಡುತ್ತದೆ. ಒಂದು ವೇಳೆ ಪಕ್ಕದ ಜಮೀನಿನಲ್ಲಿದ್ದ ಬೆಳೆ ಉತ್ತಮ ತಳಿಯದ್ದಾಗಿರದಿದ್ದರೆ ಅಲ್ಲಿನ ಹೂವಿನ ಪರಾಗಸ್ಪರ್ಶದಿಂದ ನನ್ನ ಜಮೀನಿನ ಬೆಳೆಯೂ ಹಾಳಾಗುತ್ತದೆ. ಆದ್ದರಿಂದಲೇ ಪಕ್ಕದ ಜಮೀನಿನವರಿಗೂ ಬಿತ್ತನೆ ಬೀಜ ತರಿಸಿಕೊಡುತ್ತೇನೆ. ನನ್ನ ಜಮೀನಿನಲ್ಲಿ ಉತ್ತಮ ಬೆಳೆ ಬೆಳೆಯಬೇಕಾದರೆ ನನ್ನ ಸುತ್ತಲಿನ ಜಮೀನಿನವರ ಬೆಳೆಯೂ ಉತ್ತಮ ತಳಿಯ ಬೀಜದಿಂದ ಕೂಡಿರುವುದು ಅವಶ್ಯ. ಹಾಗಾಗಿ, ಅವರೊಂದಿಗೆ ನಾನು ದ್ವೇಷ ಸಾಧಿಸಬೇಕಿಲ್ಲ. ಅಲ್ಲದೆ, ನಾನು ಅಧಿಕ ಪರಿಶ್ರಮ ಪಡುತ್ತೇನೆ. ಹಾಗಾಗಿ ಉತ್ತಮ ಬೆಳೆ ಬರುತ್ತದೆ. ಆದರೆ ಅವರ್‍ಯಾರು ನಿರೀಕ್ಷಿತ ಮಟ್ಟದಲ್ಲಿ ಶ್ರಮ ಹಾಕದೇ ಇರುವುದರಿಂದ ಅವರ ಬೆಳೆ ಅಷ್ಟಕಷ್ಟೆ; ಇಳುವರಿ, ಗುಣಮಟ್ಟವೂ ಕಡಿಮೆ ಎನ್ನುತ್ತಾನೆ. ಇದನ್ನು ಕೇಳಿದ ಆ ಪತ್ರಕರ್ತ ಹೌದು, ನಿಮ್ಮದು ನಿಜವಾದ ಬುದ್ಧಿವಂತಿಕೆ ಎನ್ನುತ್ತಾನೆ.

ಇದು ಕಥೆಯೇ ಆಗಿರಬಹುದು. ಆದರೆ ನಮ್ಮ ಜೀವನಕ್ಕೆ ಒಂದು ದಾರಿಯನ್ನಂತೂ ಇದು ತೋರಿಸುತ್ತದೆ. ನಾವು ಸುಖ, ಶಾಂತಿಯಿಂದ ಇರಬೇಕಾದರೆ, ನಮ್ಮ ಸುತ್ತಮುತ್ತಲೂ ಅಂತಹುದೇ ವಾತಾವರಣ ಇರಬೇಕು. ನಾವು ಸಂತೋಷವಾಗಿರಬೇಕಾದರೆ, ನನ್ನ ಅಕ್ಕ-ಪಕ್ಕದವರೂ ಸಂತೋಷವಾಗಿರಬೇಕು. ನಮಗೆ ಇರುವುದು ಒಂದೇ ಜೀವನ. ಅದು ಚಿಂತಾಮಯವಾದರೆ ನಮ್ಮ ಜೀವನ ವ್ಯರ್ಥ ಎನ್ನಿಸುತ್ತದೆ. ನಾನು ಸುಖ ಪಡಬೇಕಾದರೆ ನನ್ನವರೂ ಸುಖವಾಗಿರಬೇಕು. ಅದರಿಂದ ಎಲ್ಲರಿಗೂ ನೆಮ್ಮದಿ.

ನಮ್ಮ ಆಕಾಂಕ್ಷೆಗಳು ಹೆಚ್ಚುತ್ತಾ ಹೋದಂತೆ ನಮ್ಮ ಚಿಂತೆಗಳೂ ಹೆಚ್ಚುತ್ತಾ ಹೋಗುತ್ತವೆ. ಅತಿಯಾದ ಆಸೆಗಳಿಗೆ ಕಡಿವಾಣ ಹಾಕಲೇಬೇಕು. ಆಗ ನೆಮ್ಮದಿ ನಮ್ಮದಾಗುತ್ತದೆ. ನಾವು ಅತಿಯಾಸೆಯಿಂದ ಗತಿಸಿ ಹೋದವರನ್ನು ಸ್ಮರಿಸುವುದಿಲ್ಲ. ಬದಲಿಯಾಗಿ ಸಮಾಜಕ್ಕಾಗಿ ಬದುಕಿ, ಇತರರ ಕಷ್ಟ ತನ್ನ ಕಷ್ಟ ಎಂದು ಭಾವಿಸಿದವರನ್ನು ಮಾತ್ರ ನೆನೆಯುತ್ತೇವೆ. ಇತರರಿಗಾಗಿ ಬಾಳುವವರಿಗೆ ಚಿಂತೆಗಳು ಕಾಡುವುದಿಲ್ಲ. ಅಕಸ್ಮಾತ್ ಕಾಡಿದರೆ ಈ ಜನಕ್ಕಾಗಿ ನಾನು ಇನ್ನಷ್ಟು ಮಾಡಬೇಕಾಗಿತ್ತು ಎಂಬ ಚಿಂತೆ ಬರಬಹುದೇ ವಿನಃ, ಅಂತಹವರಲ್ಲಿ ಸ್ವಾರ್ಥದ ಚಿಂತೆಗಳು ಇರುವುದಿಲ್ಲ.

ಮನುಷ್ಯನ ಅಸಂತೋಷಕ್ಕೆ ಅತಿಯಾದ ಬಯಕೆಗಳು, ಬೇಡಿಕೆಗಳು, ಆಸೆ ಆಕಾಂಕ್ಷೆಗಳು ಕಾರಣ. ಅಂತಹ ಅತಿ ಬಯಕೆಗಳು ಈಡೇರದಿದ್ದಲ್ಲಿ ಸಹಜವಾಗಿಯೇ ನಿರಾಸೆ ಕಾಡುತ್ತದೆ. ಅಂತಹ ಚಿಂತೆಗಳು ಖಾಯಿಲೆಗಳನ್ನು ತಂದುಕೊಡುತ್ತವೆ. ಒಂದಂತೂ ನಿಜ. ಚಿಂತೆಯಿಲ್ಲದ ಜೀವನವಿಲ್ಲ. ಅನೇಕ ವೇಳೆ ನಮಗೆ ನಮ್ಮ ಚಿಂತೆಗಿಂತ ಇತರರ ಚಿಂತೆಯನ್ನು ನಮ್ಮ ತಲೆಯಲ್ಲಿ ಹಾಕಿಕೊಂಡು ಅದೇ ನಮ್ಮ ಚಿಂತೆ ಎಂದು ಭಾವಿಸಿಬಿಡುತ್ತೇವೆ. ಚಿಂತೆಗೆ ಕಾರಣವೇ ಬೇಡ ಎಂಬಂತೆ ಕಂಡುಬರುತ್ತದೆ. ಆದರೆ ಚಿಂತೆ ಎಂದಿಗೂ ಕೆಟ್ಟದ್ದೇ. ಚಿಂತೆ ಪರರ ಏಳಿಗೆಗೆ ಸಂಬಂಧಿಸಿದ್ದಾದರೆ ಅದನ್ನು ಒಪ್ಪಿಕೊಳ್ಳಬಹುದು. ಆಗುವಂತಹ ವಿಷಯಕ್ಕೆ ಚಿಂತೆ ಮಾಡುವುದು ಸೂಕ್ತ. ಆಗದಿರುವುದರ ಬಗೆಗಿನ ಚಿಂತೆ ನಮ್ಮ ಜೀವಕ್ಕೆ ಹಾನಿ ತರುವಂತಹುದು. ಈಗ ಹೇಳಿ ಚಿಂತೆ ಇಲ್ಲದ ಮನುಷ್ಯನಿಗೆ ಸಂತೆಲೂ ನಿದ್ದೆ ಬರುತ್ತೆ ಎಂಬ ನಮ್ಮ ಹಿರಿಯರ ಮಾತು ಅನುಭವದ ಮಾತಲ್ಲವೆ. ಹಾಗಾಗಿ ಚಿಂತೆ ದೂರ ಮಾಡಿದ್ದೇ ಆದರೆ ನಾವಿದ್ದಲ್ಲೇ ನೆಮ್ಮದಿಯಾಗಿರಬಹುದು.

ಸಬ್‌ಮರ್ಸಿಬಲ್ ಮೋಟಾರ್ ಪಂಪ್ ಕಳವು; ನಾಲ್ವರ ಬಂಧನ



ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು, ಬಂಧಿತ ಆರೋಪಿಗಳಿಂದ ವಶಪಡಿಸಿಕೊಂಡ ಸಬ್‌ಮರ್ಸಿಬಲ್ ಮೋಟಾರ್‌ಗಳು ಹಾಗೂ ವಾಹನಗಳನ್ನು ಕಾಣಬಹುದು.

ಮೈಸೂರು, ಆ.1(ಎಂಕೆ)– ಸರ್ವೀಸ್‌ಗೆ ಕೊಟ್ಟಿದ್ದ ಸಬ್‌ಮರ್ಸಿಬಲ್ ಮೋಟಾರ್(ಪಂಪ್)ಗಳನ್ನು ಕಳವು ಮಾಡುತ್ತಿದ್ದ ನಾಲ್ವರು ಖದೀಮರನ್ನು ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ನೆಹರು ನಗರದ 7ನೇ ಕ್ರಾಸ್ ನಿವಾಸಿ ಜಾಫರ್ ಸಾದೀಕ್ ಅಲಿಯಾಸ್ ಬಾಬ(24), ರಾಘವೇಂದ್ರನಗರ 7ನೇ ಕ್ರಾಸ್‌ನ ಮಹಮ್ಮದ್ ಮೊಹೀದ್ದಿನ್ ಅಲಿಯಾಸ್ ಬಿಹಾರಿ(35), ಭಾರತ್‌ನಗರದ ಅಬ್ದುಲ್ ಜಮೀಲ್ ಅಲಿಯಾಸ್ ಪಿ.ಕೆ(25) ಹಾಗೂ ತನ್ವೀರ್ ಸೇಠ್ ನಗರ 1ನೇ ಕ್ರಾಸ್‌ನ ನಯಾಜ್ ಖಾನ್ ಅಲಿಯಾಸ್ ಬೆಂಗಳೂರಿ ಬಂಧಿತ ಆರೋಪಿಗಳಾಗಿದ್ದು, ಗುರುವಾರ ಬೆಳಗ್ಗೆ ಠಾಣೆ ವ್ಯಾಪ್ತಿಯ ಭಾರತ್‌ನಗರದಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದ ವೇಳೆ ಸಿಕ್ಕಿ ಬಿದ್ದಿದ್ದಾರೆ.

ಅಶೋಕ ಲೈಲ್ಯಾಂಡ್ ಗೂಡ್ಸ್(ಕೆಎ–46–5438) ವಾಹನದಲ್ಲಿ ಅನುಮಾನಾಸ್ಪದವಾಗಿ ಕಂಡು ಬಂದ ಹಿನ್ನಲೆ ತಡೆದು ತಪಾಸಣೆ ನಡೆಸಿದಾಗ ವಾಹನದಲ್ಲಿದ್ದ 4 ಸಬ್‌ಮರ್ಸಿಬಲ್ ಮೋಟಾರ್ ಕಳ್ಳತನ ಮಾಡಿರುವುದೆಂದು ಗೊತ್ತಾಗಿದೆ. ನಂತರ ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಬಂಧಿತ ಆರೋಪಿಗಳು, ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 1, ಟಿ.ನರಸೀಪುರ ಠಾಣೆಯಲ್ಲಿ 2, ಹುಲ್ಲಹಳ್ಳಿ ಠಾಣೆಯಲ್ಲಿ 3, ಅರಕೆರೆ ಪೊಲೀಸ್ ಠಾಣೆಯಲ್ಲಿ 1 ಹಾಗೂ ಕವಲಂದೆ ಠಾಣೆ ವ್ಯಾಪ್ತಿ 1 ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದು ತಿಳಿದುಬಂದಿದೆ.

ಬಂಧಿತರಿಂದ 11 ಸಬ್‌ಮರ್ಸಿಬಲ್ ಮೋಟಾರ್‌ಗಳು, 18 ಸಾವಿರ ರೂ.ನಗದು, 1 ಅಶೋಕ ಲೈಲ್ಯಾಂಡ್ ಗೂಡ್ಸ್ ವಾಹನ, 1 ಅಪೇ ಆಟೋ, ಟಾಟಾ 1 ಇಂಡಿಕಾ ಕಾರ್, 1 ಪಾಸೆಂಜರ್ ಆಟೋ ಹಾಗೂ 1 ಕಮರ್ಷಿಯಲ್ ಸಿಲಿಂಡರ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಎಎಸ್‌ಪಿ ಎಲ್.ನಾಗೇಶ್ ನೇತೃತ್ವದಲ್ಲಿ ಪಿಐ ಡಾ.ಎಂ.ಎಲ್.ಶೇಖರ್, ಪಿಎಸ್‌ಐ ಕೆ.ಎ.ಚಂದ್ರ, ಎಎಸ್‌ಐ ಸತೀಶ್, ಸಿಬ್ಬಂದಿಗಳಾದ ಅಬ್ದುಲ್ ಲತೀಫ್, ಭಾಸ್ಕರ್, ಅಶೋಕ, ಸಿ.ಕೆ.ಮಹೇಶ್, ವಿಶ್ವನಾಥ್, ಸುನೀಲ್ ಕುಮಾರ್ ಮತ್ತು ಚಾಲಕ ಸಂಜಯ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಕರ್ನಾಟಕಕ್ಕೆ ಅಕ್ಕಿ ಕೊಡಲು ನಾವ್ ರೆಡಿ...





ಬೆಂಗಳೂರು, ಆ.1(ಕೆಎಂಶಿ)–ಕರ್ನಾಟಕ ರಾಜ್ಯಕ್ಕೆ ಅಕ್ಕಿ ಕೊಡಲು ಕೇಂದ್ರ ಸರ್ಕಾರ ಸಿದ್ಧವಿದೆ. ಮನವಿ ಬಂದರೆ ಹೆಚ್ಚುವರಿ ಅಕ್ಕಿ ಕೊಡಲಿದ್ದೇವೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

ಪ್ರತಿ ಕೆಜಿಗೆ 28 ರೂ.ನಂತೆ ಅಕ್ಕಿ ಕೊಡಲು ಕೇಂದ್ರ ಸಿದ್ಧವಿದೆ. ಎಷ್ಟು ಪ್ರಮಾಣದ ಅಕ್ಕಿ ಬೇಕಿದ್ದರೂ ಕೊಡುತ್ತೇವೆ ಎಂದರು. ಈ ಹಿಂದೆ ರಾಜ್ಯಕ್ಕೆ ಅಕ್ಕಿ ಕೊಡಲು ಕೇಂದ್ರ ಒಪ್ಪಿರಲಿಲ್ಲ. ಎಲ್ಲಾ ದಾಸ್ತಾನನ್ನೂ ರಾಜ್ಯಕ್ಕೆ ಮಾರಾಟ ಮಾಡಿ ಗೋದಾಮುಗಳು ಖಾಲಿಯಾದರೆ ತುರ್ತು ಸಂದರ್ಭಗಳಲ್ಲಿ ಅಕ್ಕಿ ವಿತರಣೆ ಕಷ್ಟವಾಗುತ್ತದೆ ಎಂಬುದು ಕೇಂದ್ರದ ವಾದವಾಗಿತ್ತು.

ಅನ್ನಭಾಗ್ಯ ಯೋಜನೆಯಡಿ ಕರ್ನಾಟಕ ಸರ್ಕಾರದ ಪಾಲಿನ ಉಚಿತ 5 ಕೆಜಿ ಅಕ್ಕಿ ನೀಡಲು ಕೇಂದ್ರದಿಂದ ಅಕ್ಕಿ ದೊರೆಯುತ್ತಿಲ್ಲ ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹಲವು ಸಚಿವರು ಆರೋಪಿಸುತ್ತಿದ್ದರು.

ಹಣ ಕೊಡುತ್ತೇವೆ ಎಂದರೂ ಕೇಂದ್ರ ಸರ್ಕಾರ ಅಕ್ಕಿ ಕೊಡಲು ಸಿದ್ಧವಿಲ್ಲ, ಬಡವರ ಅಕ್ಕಿ ವಿಚಾರದಲ್ಲೂ ರಾಜಕೀಯ ಮಾಡುತ್ತಿದೆ ಎಂದು ನಿರಂತರ ಆರೋಪ ಕೇಳಿಬಂದಿತ್ತು. ಕೇಂದ್ರ ಸರ್ಕಾರ ಬೇರೆಯದೇ ಕಾರಣ ನೀಡಿ ತನ್ನ ನಡೆಯನ್ನು ಸಮರ್ಥಿಸಿಕೊಂಡಿತ್ತು, ಇದೀಗ ಕೇಂದ್ರದಿಂದ ಅಕ್ಕಿ ದೊರೆತರೆ ರಾಜ್ಯ ಸರ್ಕಾರವು ಫಲಾನುಭವಿಗಳಿಗೆ ಹಣದ ಬದಲಿಗೆ ಅಕ್ಕಿಯನ್ನೇ ವಿತರಿಸಲು ಸಾಧ್ಯವಾಗಲಿದೆ.

ಕೃಷ್ಣ ಜನ್ಮಭೂಮಿ ವಿವಾದ ಪ್ರಕರಣ

ಮುಸ್ಲಿಂ ಪರ ಅರ್ಜಿ ವಜಾ

ನವದೆಹಲಿ, ಆ.1–ಮಥುರಾ ಶ್ರೀ ಕೃಷ್ಣ ಜನ್ಮಭೂಮಿ ವಿವಾದ ಪ್ರಕರಣದಲ್ಲಿ ಹಿಂದೂ ಅರ್ಜಿದಾರರು ಸಲ್ಲಿಸಿದ 15 ಮೊಕದ್ದಮೆಗಳನ್ನು ಪ್ರಶ್ನಿಸಿ ಶಾಹಿ ಈದ್ಗಾ ಮಸೀದಿಯ ಮನವಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿ ಮಹತ್ವದ ಆದೇಶವನ್ನು ಹೊರಡಿಸಿದೆ. ಈ ಪ್ರಕರಣದ ಕುರಿತು ನ್ಯಾಯಮೂರ್ತಿ ಮಯಾಂಕ್‌ಕುಮಾರ್ ಜೈನ್ ಅವರ ಏಕ ಸದಸ್ಯ ಪೀಠ ತೀರ್ಪು ನೀಡಿದೆ. ಕಳೆದ ತಿಂಗಳು ಅನಿರೀಕ್ಷಿತ ಬೆಳವಣಿಗೆಯಲ್ಲಿ ಹೈಕೋರ್ಟ್ ಈ ಪ್ರಕರಣದ ವಿಚಾರಣೆಯನ್ನು ಮರು ತೆರೆದ ನಂತರ ಇಂದು ಈ ಆದೇಶ ಹೊರಬಿದ್ದಿದೆ. ಈ ವೇಳೆ ಹಿಂದೂ ಪರ ವಕೀಲ ವಿಷ್ಣು ಶಂಕರ್ ಪ್ರಕರಣಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರೆ ಅದನ್ನೂ ವಾದಿಸಲು ನಾವು ಸಿದ್ಧರಿದ್ದೇವೆ ಎಂದು ಹೇಳಿದ್ದಾರೆ. ನ್ಯಾಯಮೂರ್ತಿ ಮಯಾಂಕ್ ಕುಮಾರ್ ಜೈನ್ ಅವರ ಈ ಆದೇಶವು ಹಿಂದೂಗಳ ಪಾಲಿಗೆ ದೊಡ್ಡ ಸಮಾಧಾನ ತಂದಿದೆ ಎಂದೇ ಹೇಳಬಹುದು. ಶಾಹಿ ಈದ್ಗಾ ಮಸೀದಿಯ ರಚನೆಯನ್ನು ತೆಗೆದು ಹಾಕುವುದು, ಭೂಮಿಯನ್ನು ಹಸ್ತಾಂತರಿಸುವುದು ಮತ್ತು ದೇವಾಲಯದ ಪುನರ್ನಿರ್ಮಾಣಕ್ಕಾಗಿ ಒತ್ತಾಯಿಸಿ ಹಿಂದೂ ಅರ್ಜಿದಾರರು ಮೊಕದ್ದಮೆ ದಾಖಲಿಸಿದ್ದರು. ಇದಕ್ಕೆ ಪ್ರತಿಯಾಗಿ ಅದೇ ಸಮಯದಲ್ಲಿ ಶಾಹಿ ಈದ್ಗಾ ಮಸೀದಿ ವಕ್ಫ್ ಕಾಯಿದೆ ಇತ್ಯಾದಿಗಳನ್ನು ಉಲ್ಲೇಖಿಸಿ ಹಿಂದೂ ಕಡೆಯ ಅರ್ಜಿಗಳನ್ನು ತಿರಸ್ಕರಿಸಲು ವಾದ ಮಂಡಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ರಿಂಗ್ ರಸ್ತೆಯ ನಾಲ್ಕು ಕಡೆ ರಸ್ತೆ ಕೆಳಸೇತುವೆ ನಿರ್ಮಾಣ ತ್ವರಿತ ಕಾಮಗಾರಿ

ಕೇಂದ್ರ ಸರ್ಕಾರದ 100 ಕೋಟಿ ರೂ. ಅನುದಾನದ ಈ ಕಾಮಗಾರಿ ವರ್ಷದಲ್ಲಿ ಪೂರ್ಣ





ಮೈಸೂರಿನ ರಿಂಗ್ ರಸ್ತೆಯಲ್ಲಿ ರೈಲು ಮಾರ್ಗ ಹಾದು ಹೋಗಿರುವ ನಾಲ್ಕು ಕಡೆಗಳಲ್ಲಿ ರಸ್ತೆ ಕೆಳಸೇತುವೆ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ.


ಮೈಸೂರು, ಆ.1(ಆರ್‌ಕೆ)– ಮೈಸೂರಿನ ರಿಂಗ್ ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕಾಗಿ ರೈಲು ಮಾರ್ಗ ಹಾದು ಹೋಗಿರುವ ನಾಲ್ಕು ಕಡೆಗಳಲ್ಲಿ ರಸ್ತೆ ಕೆಳಸೇತುವೆ (Road Under Bridge) ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ.

ಮೈಸೂರಿನ ರಿಂಗ್ ರಸ್ತೆಯ ಆರ್‌ಬಿಐ ಜಂಕ್ಷನ್ ಬಳಿ, ಬೆಲವತ್ತ ಸಮೀಪದ ಮೈಸೂರು–ಬೆಂಗಳೂರು ಜೋಡಿ ರೈಲು ಹಳಿ, ಕೆಆರ್‌ಎಸ್ ರಸ್ತೆ–ರಿಂಗ್ ರೋಡ್‌ನ ರಾಯಲ್ ಇನ್ ಜಂಕ್ಷನ್ ಬಳಿಯ ಮೈಸೂರು–ಅರಸೀಕೆರೆ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಹಾಗೂ ಹೆಚ್.ಡಿ.ಕೋಟೆ ರಸ್ತೆ ಮತ್ತು ನಂಜನಗೂಡು ರಸ್ತೆ ನಡುವೆ ಜೆ.ಪಿ.ನಗರ ಬಳಿ ರೋಡ್ ಅಂಡರ್ ಬ್ರಿಡ್ಜ್ ನಿರ್ಮಾಣ ಕಾಮಗಾರಿಗಳು ನಡೆಯುತ್ತಿವೆ. ಕೇಂದ್ರ ಸರ್ಕಾರದ 100 ಕೋಟಿ ರೂ. ಅನುದಾನದಲ್ಲಿ ರಾಜ್ಯ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗ (National Highway Division)ವು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಬೆಂಗಳೂರು ಮೂಲದ ಸಿದ್ಧಾರ್ಥ ಕನ್‌ಸ್ಟ್ರಕ್ಷನ್ ಕಂಪನಿಗೆ ಟೆಂಡರ್ ಮೂಲಕ ನಾಲ್ಕೂ ರಸ್ತೆ ಕೆಳಸೇತುವೆ ಕಾಮಗಾರಿಗಳ ವಹಿಸಲಾಗಿದೆ. ಕಳೆದ ಒಂದೂವರೆ ವರ್ಷಗಳ ಹಿಂದೆಯೇ ಸಂಸದರಾಗಿದ್ದ ಪ್ರತಾಪ್ ಸಿಂಹ ಅವರು, ರಿಂಗ್ ರಸ್ತೆಯ ಕೆಳಸೇತುವೆಗಳಲ್ಲಿ ಏಕಪಥ ಸಂಚಾರದಿಂದ ಉಂಟಾಗುತ್ತಿದ್ದ ಸಂಚಾರ ಸಮಸ್ಯೆ ನೀಗಿಸಲು ಇಲ್ಲಿಯೂ ದ್ವಿಪಥ ಯೋಜನೆಗೆ ಡಿಪಿಆರ್ ತಯಾರಿಸಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದು ಒಂದು ವರ್ಷದ ಹಿಂದೆಯೇ ಕಾಮಗಾರಿಗಳನ್ನು ಆರಂಭಿಸಲಾಗಿತ್ತು.

ರೈಲ್ವೇ ಇಲಾಖೆ, ಸಂಬಂಧಪಟ್ಟ ರಾಜ್ಯ ಸರ್ಕಾರದ ಇಲಾಖೆಗಳಿಂದ ಕ್ಲಿಯರೆನ್ಸ್ ಪಡೆಯುವುದು, ಮಳೆ ಹಾಗೂ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟು ಕಾಮಗಾರಿ ನಡೆಸಬೇಕಾಗಿರುವುದರಿಂದ ಕೆಲಸ ಮಂದಗತಿಯಲ್ಲಿ ಸಾಗಿದ್ದು, ಪೂರ್ಣಗೊಳ್ಳಲು ಇನ್ನೂ 1 ವರ್ಷ ಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಂದೊಂದು ಆರ್‌ಯುಬಿಗಳಲ್ಲೂ ನಿತ್ಯ 40 ರಿಂದ 50 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರಾದರೂ, ಪ್ರಸ್ತುತ ರಿಂಗ್ ರಸ್ತೆಯಲ್ಲಿರುವ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ವ್ಯವಸ್ಥೆ ಕಲ್ಪಿಸಬೇಕಾಗಿರುವುದರಿಂದ ವಿಳಂಬವಾಗುತ್ತಿದೆ ಎಂದು ರಾಷ್ಟ್ರೀಯ ಹೆದ್ದಾರಿ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕೂ ಕಡೆಯಲ್ಲೂ ಆರ್‌ಯುಬಿಗಳು ನಿರ್ಮಾಣವಾದಲ್ಲಿ ರಿಂಗ್ ರಸ್ತೆಯಲ್ಲಿ ಅಡಚಣೆಯಾಗುತ್ತಿದ್ದ ಸಂಚಾರ ಸಮಸ್ಯೆ ಪರಿಹಾರವಾಗುವುದಲ್ಲದೆ, ಆರ್‌ಬಿಐ ಪೇಪರ್ ಮಿಲ್‌ಗೆ ಕಚ್ಚಾ ಸಾಮಗ್ರಿ ಕೊಂಡೊಯ್ಯುವ ಗೂಡ್ಸ್ ರೈಲು ಹಳಿ ಮಾರ್ಗದಲ್ಲಿನ ವಾಹನ ಸಂಚಾರಕ್ಕೂ ಮುಕ್ತಿ ಸಿಗಲಿದೆ.





ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ನೌಕರ ನಾರಾಯಣ್ ಅವರಿಗೆ ಅಭಿನಂದನೆ




ಸಮಾಜ ಸೇವಕರೂ ಆದ ಮೈಸೂರು ವಿಶ್ವವಿದ್ಯಾನಿಲಯದ ನೌಕರರಾದ ನಾರಾಯಣ್ ನಿವೃತ್ತಿ ಹಿನ್ನೆಲೆಯಲ್ಲಿ ಅವರನ್ನು ನಿವೃತ್ತ ಡಿ.ಸಿ.ಪಿ ಬಸವರಾಜ್ ಮಾಲಗತ್ತಿ, ಎಸಿಪಿಗಳಾದ ಗಜೇಂದ್ರ ಪ್ರಸಾದ್, ಪರಶುರಾಮಪ್ಪ, ಶಾಂತಮಲ್ಲಪ್ಪ, ಅಶ್ವಥ್ ನಾರಾಯಣ್, ವೀರಣ್ಣ ಹಾಗೂ ಇಂಡಿಯನ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಎಸ್.ವೆಂಕಟೇಶ್‌ಕುಮಾರ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಅವರ ನಿವೃತ್ತಿ ಜೀವನ ಸುಖಕರವಾಗಿರಲೆಂದು ಹಾರೈಸಿದರು

ಶಿಮ್ಲಾ ಮೇಘಸ್ಫೋಟಕ್ಕೆ ಇಬ್ಬರು ಸಾವು, 50ಕ್ಕೂ ಹೆಚ್ಚು ಮಂದಿ ನಾಪತ್ತೆ

ಶಿಮ್ಲಾ: ಹಿಮಾಚಲ ಪ್ರದೇಶದ ಕುಲು, ಶಿಮ್ಲಾ ಮತ್ತು ಮಂಡಿ ಜಿಲ್ಲೆಗಳಲ್ಲಿ ಗುರುವಾರ ಸಂಭವಿಸಿದ ಬಹು ಮೇಘಸ್ಫೋಟದಲ್ಲಿ ಸುಮಾರು 50 ಮಂದಿ ನಾಪತ್ತೆಯಾಗಿದ್ದಾರೆ. ಇಬ್ಬರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ದುರಂತದಲ್ಲಿ ಮನಾಲಿ ಪ್ರದೇಶ ದೇಶದ ಇತರ ಭಾಗಗಳಿಂದ ಸಂಪರ್ಕ ಕಡಿತಗೊಳಿಸಿದೆ, ರಾಜ್ಯ ಸರ್ಕಾರವು ಸೇನೆ ಮತ್ತು ವಾಯು ಪಡೆಯನ್ನು ಸನ್ನದ್ಧ ಸ್ಥಿತಿಯಲ್ಲಿರಲು ವಿನಂತಿ ಮಾಡಿಕೊಂಡಿದೆ. ಶಿಮ್ಲಾ ಜಿಲ್ಲೆಯ ರಾಮ್‌ಪುರದ ಜಕ್ರಿಯ ಸಮೇಜ್ ಖುದ್‌ನಲ್ಲಿ ಮೇಘಸ್ಫೋಟದ ನಂತರ 32ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದಾರೆ. ರಾಜ್ಯದ ಮಂಡಿ ಜಿಲ್ಲೆಯ ಟಿಕ್ಕನ್ ತಾಲುಕೋಟ್ ಗ್ರಾಮದ ಬಳಿ ರಾಜ್‌ಬಾನ್ ಹಳ್ಳಿಯಲ್ಲಿ ಮೇಘಸ್ಫೋಟ ಸಂಭವಿಸಿದ್ದು, ಇದರಲ್ಲಿ ಒಬ್ಬರು ಮೃತಪಟ್ಟು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.





ಜೆಡಿಎಸ್ ಪ್ರಾಬಲ್ಯವುಳ್ಳ ಕ್ಷೇತ್ರಗಳ ಉಳಿಸಿಕೊಳ್ಳುವ ವಿಚಾರಕ್ಕೆ ಮೈತ್ರಿ ತಿಕ್ಕಾಟ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ



ಬೆಂಗಳೂರು, ಆ.1(ಕೆಎಂಶಿ)– ಜೆಡಿಎಸ್ ಪ್ರಾಬಲ್ಯ ಕ್ಷೇತ್ರಗಳಲ್ಲಿನ ಅಸ್ತಿತ್ವ ಉಳಿಸಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ಜೊತೆ ಮೈತ್ರಿ ತಿಕ್ಕಾಟ ನಡೆಯುತ್ತಿರಬಹುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯವರು ಜೆಡಿಎಸ್ ಬೆಂಬಲದೊಂದಿಗೆ ಸುಮಾರು 10 ಕ್ಷೇತ್ರಗಳನ್ನು ಗೆದ್ದಿದ್ದಾರೆ, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಜೆಡಿಎಸ್ ನೆಲೆ ಇರುವ ಪ್ರದೇಶ, ಈ ಭಾಗದಲ್ಲಿ ಮಿತ್ರಪಕ್ಷವನ್ನು ಪರಿಗಣಿಸದೇ ತಮಟೆ ಬಾರಿಸಿಕೊಂಡು ನಾಯಕತ್ವ ಅಪಹರಿಸಲು ಹೋದರೆ ಸಹಿಸಿಕೊಳ್ಳಲು ಸಾಧ್ಯವೇ ಎಂದರು.

ಜೆಡಿಎಸ್ ಹಾಗೂ ಬಿಜೆಪಿ ವಿಲೀನವಾಗುವುದಾದರೆ ಒಟ್ಟಿಗೆ ಪಾದಯಾತ್ರೆ ಮಾಡಬಹುದು. ಕುಮಾರಸ್ವಾಮಿಯಾಗಲಿ, ನಾನಾಗಲಿ, ಬಿಜೆಪಿಯವರಾಗಲಿ ಅವರವರ ಪಕ್ಷದ ರಾಜಕಾರಣ ಮಾಡುತ್ತಾರೆ. ಕುಮಾರಸ್ವಾಮಿ ತಮ್ಮ ಪಕ್ಷ ಹಾಗೂ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡುತ್ತಿರಬಹುದು. ಬಿಜೆಪಿ ಪಾದಯಾತ್ರೆಗೆ ತಿರುಗೇಟು ನೀಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ, ಪಾದಯಾತ್ರೆಯ ಅಂತಿಮ ರೂಪುರೇಷೆ ಪ್ರಕಟಗೊಂಡ ನಂತರ ಕಾಂಗ್ರೆಸ್ ಕಾರ್ಯಸೂಚಿ ತೀರ್ಮಾನ ಮಾಡುತ್ತೇವೆ. ಬಿಜೆಪಿ ಸರ್ಕಾರದ ಕಾಲದ 30 ಹಗರಣಗಳಿವೆ. ಪಾದಯಾತ್ರೆ ವೇಳೆ ದಿನಕ್ಕೊಂದು ಹಗರಣ ಬಿಚ್ಚಿಡುತ್ತೇವೆ, ಪೆನ್‌ಡ್ರೈವ್ ವಿಚಾರ ಈಗ ಬೇಡ, ಪಾದಯಾತ್ರೆ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದರು.

ಆ.14ರವರೆಗೆ ದರ್ಶನ್‌ಗೆ ನ್ಯಾಯಾಂಗ ಬಂಧನ ; ಪವಿತ್ರಾ ಗೌಡ ಸೇರಿದಂತೆ 17 ಮಂದಿಗೂ ಸೆರೆವಾಸ ಅನಿವಾರ್ಯ




ಬೆಂಗಳೂರು: ಚಿತ್ರದುರ್ಗ ಮೂಲದ ರೇಣುಕಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಹಾಗೂ ಸಹಚರರಿಗೆ ಸದ್ಯಕ್ಕೆ ಜಾಮೀನು ಸಿಗುವ ಯಾವುದೇ ಲಕ್ಷಣಗಳಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಕೋರ್ಟ್ ವಿಸ್ತರಿಸಿದ್ದು, ದಾಸನ ಗ್ಯಾಂಗ್ ಆಗಸ್ಟ್ 14ರವರೆಗೆ ಪರಪ್ಪನ ಅಗ್ರಹಾರದಲ್ಲಿ ಕಾಲ ಕಳೆಯುವುದು ಅನಿವಾರ್ಯವಾಗಿದೆ.

ಆರೋಪಿಗಳಿಗೆ ಈ ಹಿಂದೆ ವಿಧಿಸಲಾಗಿದ್ದ ನ್ಯಾಯಾಂಗ ಬಂಧನ ಅವಧಿ ಮುಕ್ತಾಯವಾದ ಬೆನ್ನಲ್ಲೇ ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಮುಂದಿನ 14 ದಿನಗಳ ಕಾಲ ಅಂದರೆ ಆ.14ರವರೆಗೆ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿ ಆದೇಶಿಸಿದ್ದಾರೆ.

ದಾಸನ ಗ್ಯಾಂಗ್‌ಗೆ ಜಾಮೀನು ಸಿಗುವುದು ಕಷ್ಟವಾಗಿದ್ದು, ಇನ್ನೂ 14 ದಿನಗಳ ಕಾಲ ಜೈಲಿನಲ್ಲಿ ಕಾಲ ಕಳೆಯಬೇಕಾಗಿದೆ. ಪರಪ್ಪನ ಅಗ್ರಹಾರದಿಂದ 13 ಆರೋಪಿಗಳು ಹಾಗೂ ತುಮಕೂರಿನಿಂದ 4 ಆರೋಪಿಗಳು ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ 24ನೇ ಎಸಿಎಂಎಂ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು.





ಅಪಾಯದ ಸ್ಥಿತಿಯಲ್ಲಿ ವೆಲ್ಲೆಸ್ಲಿ ಸೇತುವೆ

ಸೇತುವೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ತಡೆಗೋಡೆ ಕುಸಿತ, ಕೊಚ್ಚಿಹೋದ ರಸ್ತೆ




ವೆಲ್ಲೆಸ್ಲಿ ಸೇತುವೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ತಡೆಗೋಡೆ ಮತ್ತು ರಸ್ತೆ ಸಂಪೂರ್ಣ ಕೊಚ್ಚಿ ಹೋಗಿದ್ದು ಜಿಲ್ಲಾಧಿಕಾರಿ ಡಾ.ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

ಶ್ರೀರಂಗಪಟ್ಟಣ, ಆ.1(ವಿನಯ್ ಕಾರೇಕುರಾ)–ಕಾವೇರಿ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿದ ಪರಿಣಾಮ ಎರಡು ಶತಮಾನಗಳಷ್ಟು ಹಳೆದಾದ ಶ್ರೀರಂಗಪಟ್ಟಣ ವೆಲ್ಲೆಸ್ಲಿ ಸೇತುವೆ ಮುಳುಗಿದ್ದರಿಂದ ಸೇತುವೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ತಡೆಗೋಡೆ ಹಾಗೂ ರಸ್ತೆ ಸಂಪೂರ್ಣ ಕೊಚ್ಚಿ ಹೋಗಿ ಸೇತುವೆಯು ಅಪಾಯದ ಸ್ಥಿತಿಯಲ್ಲಿದೆ.

ಬುಧವಾರ ರಾತ್ರಿ ಜಲಾಶಯದಿಂದ 1.72ಲಕ್ಷ ಕ್ಯೂಸೆಕ್ ನೀರನ್ನು ಕಾವೇರಿ ನದಿಗೆ ಹರಿಬಿಡಲಾಗಿತ್ತು ಇದರ ಪರಿಣಾಮ ಕಾವೇರಿ ನದಿಯಲ್ಲಿ ಉಂಟಾದ ಪ್ರವಾಹದಿಂದಾಗಿ, ಪಟ್ಟಣದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಐತಿಹಾಸಿಕ ವೆಲ್ಲೆಸ್ಲಿ ಸೇತುವೆ ಮುಳುಗಡೆಯಾಗಿತ್ತು. ಇದರಿಂದ ಸೇತುವೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ತಡೆಗೋಡೆ ಅಲ್ಲಲ್ಲಿ ಕುಸಿದು ಬಿದ್ದಿದೆ. ಜೊತೆಗೆ ರಸ್ತೆ ಸಂಪೂರ್ಣ ಕೊಚ್ಚಿ ಹೋಗಿದ್ದು, ಇದೇ ಪರಿಸ್ಥಿತಿ ಮುಂದುವರೆದರೆ ಸೇತುವೆಗೆ ಅಪಾಯ ಸಂಭವಿಸಲಿದೆ ಎಂದು ನೀರಾವರಿ ಇಲಾಖೆಯ ಮೂಲಗಳು ತಿಳಿಸಿವೆ.

ಸೇತುವೆ ಮಾರ್ಗವಾಗಿ ಕಿರಂಗೂರು ಸಂಪರ್ಕ ಕಲ್ಪಿಸುವ ರಸ್ತೆ ಮೇಲೆ ನೀರು ಹರಿಯುತ್ತಿದೆ. ಇದರಿಂದ ಮಂಡಿಯಷ್ಟು ನೀರು ನಿಂತು ಸಮಸ್ಯೆ ಉಂಟಾಗಿದೆ. ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣ ಕಾರ್ಯ ಆರಂಭವಾದ 13 ವರ್ಷಗಳ ಬಳಿಕ, ಕಾವೇರಿ ಕಣಿವೆಯಲ್ಲಿ ಭಾರಿ ಮಳೆ ಸುರಿದು ನದಿಯಲ್ಲಿ ಭೀಕರ ಸ್ವರೂಪದ ಪ್ರವಾಹ ಉಂಟಾಗಿ, ಆ ವರ್ಷ ನದಿಯಲ್ಲಿ 2 ಲಕ್ಷದ 90 ಸಾವಿರ ಕ್ಯುಸೆಕ್ ನೀರು ಹೊರಬಿಡಲಾಗಿತ್ತು. ಇದು ಅಣೆಕಟ್ಟೆ ನಿರ್ಮಾಣ ಕಾರ್ಯ ಶುರುವಾದ ಬಳಿಕ ಕಾವೇರಿ ನದಿಯಲ್ಲಿ ಉಂಟಾದ ಇದುವರೆಗಿನ ಅತಿ ದೊಡ್ಡ ಪ್ರವಾಹ ಎನಿಸಿದೆ. ಆ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿದ್ದ ಕನ್ನಂಬಾಡಿ ಕಟ್ಟೆಯ ಮೇಲೆ 11 ಅಡಿಗಳಷ್ಟು ನೀರು ಹರಿದಿತ್ತು. ಜೊತೆಗೆ ವೆಲ್ಲೆಸ್ಲಿ ಸೇತುವೆಯು ಕೂಡ ಮುಳುಗಡೆಯಾಗಿತ್ತು.

ನಿರಂತರ ಮಳೆಯಿಂದ ಹಲವು ದಿನಗಳಿಂದ ನದಿ ಉಕ್ಕಿ ಹರಿಯುತ್ತಿದೆ ಇದರಿಂದ ನೂರಾರು ವರ್ಷಗಳ ಹಳೆಯ ಶ್ರೀರಂಗಪಟ್ಟಣದ ಕೋಟೆ, ಕಂದಕ ಹಾಗೂ ತಡೆಗೋಡೆಗಳು ಒಂದರ ಹಿಂದೆ ಒಂದರಂತೆ ಬೀಳತೊಡಗಿವೆ.

2019ರಲ್ಲಿ ಅಂದಿನ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಪ್ರವಾಹ ಭೀತಿ ಹಿನ್ನೆಲೆಯಲ್ಲಿ ವೆಲ್ಲೆಸ್ಲಿ ಸೇತುವೆಯ ಒಂದು ತಡೆಗೋಡೆ ಮೇಲೆ ನಿಂತು ವೀಕ್ಷಿಸಿದ್ದರು. ಮಾರನೇ ದಿನವೇ ಅದೇ ತಡೆಗೋಡೆ ನೀರಿನ ರಭಸಕ್ಕೆ ಕೊಚ್ಚಿ ಹೋಗಿತ್ತು. ತದನಂತರ ಇಲ್ಲಿಯವರೆಗೂ ಯಾವ ಅಧಿಕಾರಿಗಳು ಕೂಡ ಕುಸಿತ ಕಂಡ ತಡೆಗೋಡೆಯ ಮರು ನಿರ್ಮಾಣಕ್ಕೆ ಮುಂದಾಗಲಿಲ್ಲ. ಇದರ ಪರಿಣಾಮ ಇಂದು ಸಂಪೂರ್ಣ ವೆಲ್ಲೆಸ್ಲಿ ಸೇತುವೆ ತಡೆಗೋಡೆ ಕುಸಿದು ಆತಂಕ ಸೃಷ್ಟಿಸಿದೆ.

ಇಂದು ಜಿಲ್ಲಾಧಿಕಾರಿ ಕುಮಾರ್ ವೆಲ್ಲೆಸ್ಲಿ ಸೇತುವೆ ಬಳಿ ಕುಸಿದಿದ್ದ ತಡೆಗೋಡೆ ಹಾಗೂ ಕೊಚ್ಚಿ ಹೋಗಿರುವ ರಸ್ತೆಯನ್ನು ಪರಿಶೀಲನೆ ನಡೆಸಿದರು.

ಹಲಗೂರು ಬಳಿ ಯುವಕನ ಕಗ್ಗೊಲೆ

ಗುಂಪಿನಿಂದ ಅಟ್ಟಹಾಸ; ಮತ್ತೊಬ್ಬನಿಗೆ ಗಾಯ



ಕಾಂತರಾಜು

ಹಲಗೂರು,ಆ.1– ಯುವಕರಿಬ್ಬರ ಮೇಲೆ ಮಚ್ಚು, ಲಾಂಗ್‌ಗಳಿಂದ ದಾಳಿ ಮಾಡಿರುವ ದುಷ್ಕರ್ಮಿಗಳ ಗುಂಪೊಂದು ಒಬ್ಬನನ್ನು ಭೀಕರವಾಗಿ ಕೊಚ್ಚಿ ಕೊಲೆಗೈದು ಮತ್ತೊಬ್ಬನನ್ನು ತೀವ್ರವಾಗಿ ಗಾಯಗೊಳಿಸಿ ಪರಾರಿಯಾಗಿರುವ ಆಘಾತಕಾರಿ ಕೃತ್ಯವೊಂದು ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿ ಜರುಗಿದೆ.

ಗ್ರಾಮದ 28 ವರ್ಷದ ಕಾಂತರಾಜು ಎಂಬಾತನೇ ಹತ್ಯೆಗೀಡಾದ ಯುವಕನಾಗಿದ್ದು, ದುಷ್ಕರ್ಮಿಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡಿರುವ ಇದೇ ಗ್ರಾಮದ ವಿನೋದ್ ಕುಮಾರ ಅಲಿಯಾಸ್ ಕುಮ್ಮಿ ಎಂಬಾತನನ್ನು ಸಾತನೂರಿನ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ.

ಬುಧವಾರ ರಾತ್ರಿ 9 ಗಂಟೆ ಸಮಯದಲ್ಲಿ ಮಳೆಯಿಂದಾಗಿ ಮನೆಯೊಂದರ ಮುಂದೆ ಕುಳಿತಿದ್ದ ಕಾಂತರಾಜು ಹಾಗೂ ವಿನೋದ್ ಕುಮಾರನ ಮೇಲೆ ಏಕಾಏಕಿ ದಾಳಿ ಮಾಡಿದ 3–4 ಮಂದಿ ಯುವಕರ ಗುಂಪು ಮಚ್ಚು, ಲಾಂಗ್‌ಗಳಿಂದ ಕೊಚ್ಚಿ ಕಾಂತರಾಜನನ್ನು ಕೊಲೆಗೈದಿದ್ದು, ದುಷ್ಕರ್ಮಿಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡಿರುವ ವಿನೋದ್ ಕುಮಾರ ದಾಳಿಯಿಂದ ತಪ್ಪಿಸಿಕೊಂಡು ಮನೆಯೊಂದಕ್ಕೆ ಸೇರಿಕೊಂಡು ಹತ್ಯೆಯಿಂದ ಪಾರಾಗಿದ್ದಾನೆ ಎಂದು ಗೊತ್ತಾಗಿದೆ.

ಗಾಯಾಳುವಿಗೆ ಹಲಗೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಹಾರೋಹಳ್ಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿರುವ ಹಲಗೂರು ಸಿಪಿಐ ಶ್ರೀಧರ್, ಪಿಎಸ್‌ಐ ಮಹೇಂದ್ರ ಅವರು ಘಟನೆಯ ಪರಿಶೀಲನೆ ನಡೆಸಿದ್ದಾರೆ. ಮೃತನ ಶವವನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಸಾಗಿಸಲಾಗಿದೆ.

ಹತ್ಯೆಗೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲವಾದರೂ ಹಳೇ ವೈಷಮ್ಯದಿಂದ ಈ ಕೊಲೆ ನಡೆದಿರಬಹುದು ಎಂದು ಶಂಕಿಸಲಾಗಿದೆ. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ಕೃಷ್ಣಪ್ಪ ಸೇರಿದಂತೆ ಅಧಿಕಾರಿಗಳ ತಂಡ ಘಟನೆಯ ಪರಿಶೀಲನೆ ನಡೆಸಿದ್ದಾರೆ. ಹಲಗೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ತನಿಖೆ ಕೈಗೊಂಡಿದ್ದಾರೆ.

ಆ.11, ಅರಳಕುಪ್ಪೆಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಗದ್ದೆನಾಟಿ



ಪಾಂಡವಪುರ,ಆ.1– ತಾಲೂಕಿನ ಅರಳಕುಪ್ಪೆ ಗ್ರಾಮದ ಹೊರವಲಯದಲ್ಲಿ ಆ.11 ರಂದು ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಅವರು ಗದ್ದೆ ನಾಟಿ ಮಾಡಲಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ತಿಳಿಸಿದರು.

ಎಚ್.ಡಿ.ಕುಮಾರಸ್ವಾಮಿ ಅವರು ಗದ್ದೆ ನಾಟಿ ಮಾಡಲು ಸಿದ್ಧಗೊಂಡಿರುವ ತಾಲೂಕಿನ ಅರಳಕುಪ್ಪೆ ಗ್ರಾಮದ ಲಕ್ಷ್ಮಣ ಅವರ ಜಮೀನು ವೀಕ್ಷಿಸಿದ ಬಳಿಕ ಮಾತನಾಡಿದರು.

ಎಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅರಳಕುಪ್ಪೆ ಗ್ರಾಮದ ಹೊರವಲಯದಲ್ಲಿ ಗದ್ದೆನಾಟಿ ಮಾಡಿದ್ದರು. ಅದೇ ರೀತಿ ಇದೀಗ ಕೇಂದ್ರ ಸಚಿವರಾಗಿದ್ದಾರೆ. ಹಾಗಾಗಿ ಜಿಲ್ಲಾ ನಾಯಕರಾದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಆ.11ರಂದು ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ಗದ್ದೆನಾಟಿ ಮಾಡಲಿದ್ದಾರೆ. ಗದ್ದೆ ನಾಟಿಗೂ ಮೊದಲೇ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಬಳಿಕ ನಾಟಿ ಮಾಡಲಿದ್ದಾರೆ ಎಂದರು. ಜಿಲ್ಲೆಯ ಜನತೆ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸಂಸದರಾಗಿ ಆಯ್ಕೆ ಮಾಡುವ ಮೂಲಕ ಕೇಂದ್ರದಲ್ಲಿ ಸಚಿವರಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಕಳೆದ ವರ್ಷ ಭೀಕರವಾದ ಬರಗಾಲ ಎದುರಾಗಿತ್ತು. ಇದೀಗ ಕಾವೇರಿಕೊಳ್ಳದಲ್ಲಿ ಉತ್ತಮವಾದ ಮಳೆಯಾದ ಹಿನ್ನೆಲೆಯಲ್ಲಿ ಜಿಲ್ಲೆಯ ಜನತೆ ಸಂವೃದ್ಧಿಯಾಗಿ ಕೃಷಿ ಚಟುವಟಿಕೆ ಆರಂಭಿಸಿದ್ದಾರೆ ಎಂದು ತಿಳಿಸಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಈ ಹಿಂದೆ ಕುಮಾರಸ್ವಾಮಿ ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅರಳಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ ಭತ್ತದ ನಾಟಿ ಹಾಕುವ ಕಾರ್ಯಕ್ಕೆ ಚಾಲನೆ ನೀಡಿ ರಾಜ್ಯಕ್ಕೆ ಮಾದರಿಯಾಗಿದ್ದರು ಎಂದರು.

ವಯನಾಡು ದುರಂತದಲ್ಲಿ ತಾಯಿ-ಮೊಮ್ಮಗು ಸಾವು

ಕೆ.ಆರ್.ಪೇಟೆಯ ಕತ್ತರಘಟ್ಟ ತಲುಪಿದ ಮೃತದೇಹಗಳು: ರಾತ್ರಿಯೇ ಅಂತ್ಯಕ್ರಿಯೆ

ಕೆ.ಆರ್.ಪೇಟೆ, ಆ.1– ಕೇರಳದ ವಯನಾಡಿನಲ್ಲಿ ಸಂಭವಿಸಿದ ಭೀಕರ ಗುಡ್ಡ ಕುಸಿತ ದುರಂತದಲ್ಲಿ ಸಾವನ್ನಪ್ಪಿದ ತಾಯಿ ಮತ್ತು ಮೊಮ್ಮಗನ ಅಂತ್ಯಕ್ರಿಯೆ ಶುಕ್ರವಾರ ಮುಂಜಾನೆ ನೆರವೇರಿಸಲಾಯಿತು. ಮಂಗಳವಾರ ಮುಂಜಾನೆ ಕೇರಳದ ವಯನಾಡಿನಲ್ಲಿ ಭಾರೀ ಮಳೆಯಿಂದ ಸಂಭವಿಸಿದ ಗುಡ್ಡಗಳ ಕುಸಿತದಿದ ಕೆ.ಆರ್.ಪೇಟೆ ತಾಲೂಕು ಕತ್ತರಘಟ್ಟದ ನಿವಾಸಿ ಲೀಲಾವತಿ (55) ಮತ್ತು ಎರಡೂವರೆ ವರ್ಷದ ಮೊಮ್ಮಗು ನಿಹಾಲ್ ಸಾವನ್ನಪ್ಪಿದ್ದರು.




ರಕ್ಷಣಾ ಕಾರ್ಯ ಪಡೆಯ ನಿರಂತರ ಶೋಧ ಕಾರ್ಯಾಚರಣೆಯಿಂದ ಮಣ್ಣಿನಲ್ಲಿ ಹುದುಗಿದ್ದ ಲೀಲಾವತಿ ಮೃತದೇಹ ಮತ್ತು ಕಸದ ರಾಶಿಯ ಪೊದೆಯೊಂದರ ಬಳಿ ಬಿದ್ದಿದ್ದ ನಿಹಾಲ್ ಮೃತದೇಹವನ್ನು ಪತ್ತೆ ಹಚ್ಚಿ ಗುರುವಾರ ರಾತ್ರಿ ಗ್ರಾಮಕ್ಕೆ ಕಳುಹಿಸಿಕೊಡಲಾಯಿತು. ಮೊದಲೇ ವಿಷಯ ತಿಳಿದು ಸಿದ್ದತೆ ಮಾಡಿಕೊಂಡಿದ್ದ ಗ್ರಾಮಸ್ಥರು ರಾತ್ರಿಯೇ ಅಂತ್ಯಕ್ರಿಯೆ ನೆರವೇರಿಸಿದರು.

ಮೃತದೇಹಗಳು ಛಿದ್ರಗೊಂಡು ಸಂಪೂರ್ಣ ಕೊಳೆತ ಸ್ಥಿತಿಯಲ್ಲಿದ್ದುದರಿಂದ ರಾತ್ರಿಯೇ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಮೂಲಗಳು ತಿಳಿಸಿವೆ. ದುರಂತದಲ್ಲಿ ಗಾಯಗೊಂಡಿರುವ ಲೀಲಾವತಿ ಅವರ ಪತಿ ದೇವರಾಜ್, ಪುತ್ರಿ ಝಾನ್ಸಿರಾಣಿ ಮತ್ತು ಅಳಿಯ ಅನಿಲ್ ಕುಮಾರ್ ಅವರುಗಳು ಕೇರಳದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೇರಳದ ವಯನಾಡಿನ ಟೀ ಎಸ್ಟೇಟ್‌ನಲ್ಲಿ ಅನಿಲ್‌ಕುಮಾರ್ ಕೆಲಸ ಮಾಡುತ್ತಿದ್ದು ಇಡೀ ಕುಟುಂಬ ಇವರ ಜೊತೆ ವಾಸವಾಗಿತ್ತು.

ಸಹಾಯ ಮಾಡುವ ನೆಪದಲ್ಲಿ ಮಹಿಳೆಯ ಮಾಂಗಲ್ಯ ಸರ ಎಗರಿಸಿ ವ್ಯಕ್ತಿ ಪರಾರಿ

ಭಾರತೀನಗರ,ಆ.1–ತಾನೊಬ್ಬ ಪೊಲೀಸ್ ಎಂದು ಸಹಾಯ ಮಾಡುವ ನೆಪದಲ್ಲಿ ಮಹಿಳೆಯ ಮಾಂಗಲ್ಯ ಸರ ಎಗರಿಸಿ ಪರಾರಿಯಾಗಿರುವ ಘಟನೆ ಭಾರತೀನಗರದ ಮಂಡ್ಯ ರಸ್ತೆಯಲ್ಲಿ ನಡೆದಿದೆ.

ಮಂಡ್ಯ ಮೂಲದ 73 ವರ್ಷದ ಮಹದೇವಮ್ಮ 40 ಗ್ರಾಂ ಮಾಂಗಲ್ಯ ಸರ ಕಳೆದುಕೊಂಡ ಮಹಿಳೆ. ಈಕೆ ಮಂಡ್ಯದಿಂದ ಭಾರತೀನಗರಕ್ಕೆ ಬಂದ ಸಂದರ್ಭದಲ್ಲಿ ನಾನು ಪೊಲೀಸ್ ನಿಮಗೆ ತಿಳುವಳಿಕೆ ನೀಡುತ್ತಿದ್ದೇನೆ. ಮಾಂಗಲ್ಯ ಸರವನ್ನು ಎಲ್ಲರೂ ಕಾಣುವಂತೆ ಹಾಕಿಕೊಳ್ಳಬಾರದು. ಅದನ್ನು ತೆಗೆದುಕೊಡಿ ನಾನು ಪೇಪರ್‌ನಲ್ಲಿ ಸುತ್ತಿಕೊಡುತ್ತೇನೆಂದು ಕತ್ತಿನಲ್ಲಿದ್ದ ಮಾಂಗಲ್ಯ ಸರವನ್ನು ಪಡೆದು ಪೇಪರ್‌ನಲ್ಲಿ ಸುತ್ತುವಂತೆ ಸುತ್ತಿ ಜೇಬಿನಲ್ಲಿಟ್ಟುಕೊಂಡು ಮಹಿಳೆಗೆ ಪೇಪರ್‌ನಲ್ಲಿ ಕಲ್ಲು ಸುತ್ತಿಕೊಟ್ಟು ಯಾಮಾರಿಸಿ ಸರವನ್ನು ಎಗರಿಸಿ ಪರಾರಿಯಾಗಿದ್ದಾನೆ. ಮಹಿಳೆ ಮನೆಗೆ ಬಂದು ನೋಡಿದಾಗ ತಾನು ಮೋಸ ಹೋಗಿರುವುದು ತಿಳಿದು ಕೆಎಂ.ದೊಡ್ಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ಮಹಿಳೆ ದೂರು ನೀಡಿದ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಿಜೆಪಿ–ಜೆಡಿಎಸ್ ನಡುವೆ ಭಿನ್ನಾಭಿಪ್ರಾಯವಿಲ್ಲ, ಬಿಜೆಪಿ ಪಾದಯಾತ್ರೆ ನಡೆಸಿದರೆ ಬೆಂಬಲಿಸುತ್ತೇವೆ

ಪಾಂಡವಪುರ, ಆ.1– ರಾಜ್ಯದಲ್ಲಿ ನೆರೆ ಪರಿಸ್ಥಿತಿ ಇರುವುದರಿಂದ ಪಾದಯಾತ್ರೆ ಮುಂದೂಡಿ ಎಂದಿದ್ದೇವೆ ಹೊರತು ಬಿಜೆಪಿ–ಜೆಡಿಎಸ್‌ನಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅದಾಗ್ಯೂ ಪಾದಯಾತ್ರೆ ನಡೆಸಿದರೆ ಬೆಂಬಲಿಸುತ್ತೇವೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಎಣ್ಣೆಹೊಳೆಕೊಪ್ಪಲು ಗ್ರಾಮದ ನೆರೆಪೀಡಿತ ಪ್ರದೇಶಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.


ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಭ್ರಷ್ಟ ಕಾಂಗ್ರೆಸ್ ಪಕ್ಷವನ್ನು ತೊಲಗಿಸುವರೆಗೂ ಜೆಡಿಎಸ್–ಬಿಜೆಪಿ ಒಗ್ಗಟ್ಟಿನಿಂದ ಹೋರಾಟ ಮಾಡುತ್ತೇವೆ. ಪ್ರಾಕೃತಿಕ ವಿಕೋಪದಿಂದ ಜನತೆ ಸಂಕಷ್ಟದಲ್ಲಿದ್ದಾರೆ. ಮತ್ತೊಂದೆಡೆ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪಾದಯಾತ್ರೆ ಬೇಡ ಎಂದು ಕೋರ್ ಕಮಿಟಿ ಅಧ್ಯಕ್ಷರ ನೇತೃತ್ವದಲ್ಲಿ ಪಕ್ಷದ ಶಾಸಕರು, ಮುಖಂಡರು ಚರ್ಚಿಸಿ ಪಾದಯಾತ್ರೆ ಮುಂದೂಡಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಲಹೆ ನೀಡಿದ್ದೇವೆ ಹೊರತು ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅದಾಗ್ಯೂ ಬಿಜೆಪಿಯವರು ಪಾದಯಾತ್ರೆ ಮಾಡುತ್ತೇವೆ ಎಂದರೆ ನಾವು ಸಹ ಬೆಂಬಲ ನೀಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ–ಜೆಡಿಎಸ್ ಪಕ್ಷಗಳು ಸದನದ ಒಳಗೆ–ಹೊರಗೆ ಮುಡಾ, ವಾಲ್ಮೀಕಿ ಹಗರಣ ಸೇರಿದಂತೆ ಭ್ರಷ್ಟ ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸುತ್ತಿದೆ. ಸಿಎಂ ಸಿದ್ದರಾಮಯ್ಯ ಅವರೇ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಭ್ರಷ್ಟಚಾರವನ್ನು ಒಪ್ಪಿಕೊಂಡಿದ್ದಾರೆ. ದೇಶದ ಇತಿಹಾಸದಲ್ಲಿ ಬ್ಯಾಂಕ್ ವ್ಯವಹಾರದ ಮೂಲಕ ದೊಡ್ಡಮಟ್ಟದಲ್ಲಿ ಭ್ರಷ್ಟಚಾರ ನಡೆಸಿರುವುದು ಇದೇ ಮೊದಲು ಎಂದ ಅವರು ಹಾಲು ಉತ್ಪಾದಕ ರೈತರಿಗೆ 1200 ಕೋಟಿ ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿದೆ ಎಂದು ಆಕ್ರೋಶ ಹೊರಹಾಕಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಶಾಸಕ ಎಚ್.ಟಿ.ಮಂಜು ಇತರಿದ್ದರು.

ಇಂದಿನಿಂದ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಗಾಂಧಿ ಶಿಲ್ಪ ಬಜಾರ್

ಹಸ್ತಶಿಲ್ಪ ಪ್ರದರ್ಶನ, ಮಾರಾಟ



ಮೈಸೂರು, ಆ. 1– ಭಾರತೀಯ ಹಸ್ತಶಿಲ್ಪ ಕಲೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಭಾರತ ಸರ್ಕಾರದ ವಸ್ತ್ರ ಮಂತ್ರಾಲಯದ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿ ವತಿಯಿಂದ ಆ. 2 ರಿಂದ 8 ರವರೆಗೆ ಗಾಂಧಿ ಶಿಲ್ಪ ಬಜಾರ್ ಆಯೋಜಿಸಲಾಗಿದೆ.

ದೇಶದ ಹಲವು ರಾಜ್ಯಗಳಿಂದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಕುಶಲ ಕರ್ಮಿಗಳು ಸೇರಿದಂತೆ ಸುಮಾರು 50 ರಿಂದ 60 ಕುಶಲಕರ್ಮಿಗಳು, ಕೈಮಗ್ಗ ನೇಕಾರರು ತಮ್ಮ ಉತ್ಕೃಷ್ಟ ಕಲಾವಸ್ತುಗಳನ್ನು ಮೈಸೂರಿನಲ್ಲಿ ನಡೆಯುವ ಪ್ರದರ್ಶನದಲ್ಲಿ ಅನಾವರಣಗೊಳಿಸಲಿದ್ದಾರೆ.ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಅಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಒಡಿಶಾ ರಾಜ್ಯದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಬಿದಿರು–ಬೆತ್ತದ ವಸ್ತುಗಳು, ಚಿಕನ್ ಎಂಬ್ರಾಯ್ಡರಿ, ಡ್ರೈ ಫ್ಲವರ್‌ಗಳು, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್ ರಾಜ್ಯದ ಫುಲ್ಕಾರಿ ಬಟ್ಟೆ ಗಳು ಈ ಮೇಳ ದಲ್ಲಿ ಒಂದೇ ಸೂರಿನಡಿ ಖರೀದಿಗೆ ಸಿಗಲಿದೆ ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಜಿ.ಟಿ. ದೇವೇಗೌಡ ಆ. 02 ರಂದು ಶುಕ್ರವಾರ ಸಂಜೆ 4 ಗಂಟೆಗೆ ನೆರವೇರಿಸುವರು. ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ ಸಿ.ಜಿ. ಬೆಟಸೂರಮಠ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ, ಮೈಸೂರು, ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ನಿರ್ದೇಶಕ ಬಿ.ಕೆ. ಶಿವಕುಮಾರ್,ಅಭಿವೃದ್ಧಿ ಆಯುಕ್ತರ ಕಛೇರಿ ಪ್ರಾಂತೀಯ ನಿರ್ದೇಶಕ ಎಂ. ಪ್ರಭಾಕರನ್, ಕರಕುಶಲ ಸೇವಾ ಕೇಂದ್ರ ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕ ಕೆ.ಎಸ್. ಸುನಿಲ್‌ಕುಮಾರ್ ಭಾಗವಹಿಸುವರು. ಈ ಪ್ರದರ್ಶನ ಹಾಗೂ ಮಾರಾಟ 2024ರ ಆಗಸ್ಟ್ 02 ರಿಂದ 08 ರವರೆಗೆ ಬೆಳಗ್ಗೆ ಗಂಟೆ 10.30ರಿಂದ ರಾತ್ರಿ 9ರವರೆಗೆ ಉಚಿತವಾಗಿ ತೆರೆದಿರುತ್ತದೆ.

ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟ–2024

ಬಾಕ್ಸರ್ ನಿಖತ್ ಜರೀನ್‌ಗೆ ಸೋಲು: ಒಲಿಂಪಿಕ್‌ನಿಂದ ಔಟ್



ಪ್ಯಾರಿಸ್: ಭಾರತದ ಸ್ಟಾರ್ ಬಾಕ್ಸರ್ ನಿಖತ್ ಜರೀನ್ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಒಲಿಂಪಿಕ್ಸ್‌ನಿಂದ ಹೊರ ಬಿದ್ದಿದ್ದಾರೆ. ನಿಖತ್ ಜರೀನ್ ಪ್ಯಾರಿಸ್ ಒಲಿಂಪಿಕ್‌ನ ಮಹಿಳೆಯರ 50 ಕೆಜಿ ಸುತ್ತಿನ 16ನೇ ಪಂದ್ಯದಲ್ಲಿ ಚೀನಾದ ವು ಯು ವಿರುದ್ಧ 5–0 ಅಂತರದಿಂದ ಸೋಲನುಭವಿಸಿದರು. ಈ ಸೋಲಿನೊಂದಿಗೆ ಚೊಚ್ಚಲ ಒಲಿಂಪಿಕ್‌ನಲ್ಲಿ ಜರೀನ್ ಅಭಿಯಾನ ಅಂತ್ಯಗೊಂಡಿತು.

ಪಂದ್ಯದಲ್ಲಿ ಮೊದಲ ಶ್ರೇಯಾಂಕದ ಚೀನಾದ ವು ಯು ಆಕ್ರಮಣಕಾರಿ ಆಟ ಪ್ರಾರಂಭಿಸಿದರು ಮತ್ತು ಮೊದಲ ಸುತ್ತಿನಲ್ಲಿಯೇ ಜರೀನ್ ಮೇಲೆ ಪ್ರಾಬಲ್ಯ ಸಾಧಿಸಿದರು. ಆದಾಗ್ಯೂ, 2 ಬಾರಿಯ ವಿಶ್ವ ಚಾಂಪಿಯನ್ ಭಾರತದ ನಿಖತ್ ಜರೀನ್ ಎರಡನೇ ಸುತ್ತಿನಲ್ಲಿ ಆರಂಭಿಕ ಹಂತದ ಪುನರಾಗಮನ ಮಾಡಿದರಾದರೂ ವು ಯು ವಿರುದ್ಧ ಗೆಲ್ಲಲು ಸಾಧ್ಯವಾಗಲಿಲ್ಲ.

ನಂತರ 3ನೇ ಸುತ್ತು ಏಕಪಕ್ಷೀಯವಾಗಿ ಚೀನಾದ ಬಾಕ್ಸರ್ ವು ಯು ಪರವಾಯಿತು. ಪ್ರಸ್ತುತ 52 ಕೆಜಿ ವಿಶ್ವ ಚಾಂಪಿಯನ್ ಹಾಗೂ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ಚೀನಾದ ವು ಯು ಈ ಗೆಲುವಿನೊಂದಿಗೆ ಕ್ವಾರ್ಟರ್ ಫೈನಲ್‌ಗೆ ತಲುಪಿದ್ದಾರೆ. ಅವರು ತಮ್ಮ ಮೊದಲ ಒಲಿಂಪಿಕ್ ಪದಕವನ್ನು ಪಡೆಯಲು ಕೇವಲ ಒಂದು ಗೆಲುವಿನ ಅಂತರದಲ್ಲಿದ್ದಾರೆ. ಈ ಸೋಲಿನ ಮೊದಲು, ಅರೆನಾ ಪ್ಯಾರಿಸ್ ನಾರ್ಡ್‌ನಲ್ಲಿ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಜರ್ಮನಿಯ ಮ್ಯಾಕ್ಸಿ ಕ್ಯಾರಿನಾ ಕ್ಲೋಟ್ಜರ್ ಅವರನ್ನು ಸೋಲಿಸುವ ಮೂಲಕ ಭಾರತದ 28 ವರ್ಷದ ಜರೀನ್ 16ನೇ ಸುತ್ತಿಗೆ ಪ್ರವೇಶಿಸಿದ್ದರು.

ಕ್ವಾರ್ಟರ್ ಫೈನಲ್‌ಗೆ ನಿಶಾಂತ್: ಇದಕ್ಕೂ ಮೊದಲು ನಡೆದ ಪುರುಷರ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಭಾರತದ ಸ್ಟಾರ್ ಬಾಕ್ಸರ್ ನಿಶಾಂತ್ ದೇವ್ ತಮ್ಮ ಅತ್ಯುತ್ತಮ ಪ್ರದರ್ಶನ ತೋರಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆದಿದ್ದಾರೆ. ನಿಶಾಂತ್ ದೇವ್ ಪುರುಷರ 71 ಕೆಜಿ ವಿಭಾಗದ 16ನೇ ಸುತ್ತಿನ ಪಂದ್ಯದಲ್ಲಿ 7ನೇ ಶ್ರೇಯಾಂಕದ ಈಕ್ವೆಡಾರ್‌ನ ಜೋಸ್ ಗೇಬ್ರಿಯಲ್ ರೊಡ್ರಿಗಸ್ ಟೆನೊರಿಯೊ ಅವರನ್ನು 3–2 ಅಂತರದಿಂದ ಮಣಿಸಿದರು.

ನಿಶಾಂತ್ ಪಂದ್ಯದ ಆರಂಭದಿಂದಲೂ ಎದುರಾಳಿ ಮೇಲೆ ಪ್ರಾಬಲ್ಯ ಸಾಧಿಸಿದರು. ಮತ್ತು ಮೊದಲ ಸುತ್ತಿನಲ್ಲಿ 4 ತೀರ್ಪುಗಾರರಿಂದ 10 ಅಂಕಗಳನ್ನು ಪಡೆದರು. ಎರಡನೇ ಸುತ್ತಿನಲ್ಲೂ ಇದೇ ಟ್ರೆಂಡ್ ಮುಂದುವರೆಯಿತು. ಮೂರನೇ ಸುತ್ತಿನಲ್ಲಿ ಗೆದ್ದು ಜೋಸ್ ರೋಡ್ರಿಗಾಸ್ ಕಮ್ ಬ್ಯಾಕ್ ಮಾಡಿದರು. ಇದರಲ್ಲಿ ನಿಶಾಂತ್ ಕೇವಲ 1 ತೀರ್ಪುಗಾರರಿಂದ 10 ಅಂಕಗಳನ್ನು ಪಡೆದರು ಮತ್ತು ಅತ್ತು ಅಂತಿಮ ಸುತ್ತಿನ ರೋಚಕ ಪಂದ್ಯದಲ್ಲಿ ಜೋಸ್ ರೋಡ್ರಿಗಾಸ್ ಅನ್ನು ಮಣಿಸಿದ ನಿಶಾಂತ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.



ಒಲಿಂಪಿಕ್ ಅಭಿಯಾನ ಅಂತ್ಯಗೊಳಿಸಿದ ಪಿ.ವಿ.ಸಿಂಧು

ಪ್ಯಾರಿಸ್: ಗುರುವಾರ ರಾತ್ರಿ ನಡೆದ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಪಿ.ವಿ.ಸಿಂಧು ಅವರು ಚೀನಾದ ಹಿ ಬಿಂಗ್ ಜಿಯಾವೊ ವಿರುದ್ಧ ಸೋಲು ಅನುಭವಿಸಿ ಪ್ಯಾರಿಸ್ ಒಲಿಂಪಿಕ್‌ನಲ್ಲಿ ತಮ್ಮ ಅಭಿಯಾನ ಅಂತ್ಯಗೊಳಿಸಿದ್ದಾರೆ.

ಈಗಾಗಲೇ 2 ಒಲಿಂಪಿಕ್ಸ್ ಪದಕಗಳನ್ನು ಗೆದ್ದು, ಹ್ಯಾಟ್ರಿಕ್‌ನತ್ತ ದೃಷ್ಟಿ ನೆಟ್ಟಿದ್ದ 13ನೇ ರ್‍ಯಾಂಕಿಂಗ್‌ನ ಸಿಂಧು ಅವರಿಗೆ ಚೀನಾದ ಆಟಗಾರ್ತಿ ಶಾಕ್ ನೀಡಿದರು. ಮೊದಲ ಸುತ್ತಿನಲ್ಲಿ ತೀವ್ರ ಪೈಪೋಟಿ ನೀಡಿದ್ದ ಸಿಂಧು 21–19, 21–14 ಸೆಟ್‌ಗಳಿಂದ ಸೋಲು ಅನುಭವಿಸಿದರು.

ಪಿವಿ ಸಿಂಧು ಅವರು ಟೋಕಿಯೊ 2020 ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆಲ್ಲಲು ಹಿ ಬಿಂಗ್ ಜಿಯಾವೊ ಅವರನ್ನು ಸೋಲಿಸಿದ್ದರು. ಆ ಸೋಲಿನ ಸೇಡು ಈಗ ತೀರಿಸಿಕೊಂಡಿದ್ದಾರೆ.

1992ರಲ್ಲಿ ಬಾರ್ಸಿಲೋನಾದಲ್ಲಿ ತನ್ನ ಒಲಿಂಪಿಕ್ಸ್‌ಗೆ ಬ್ಯಾಡ್ಮಿಂಟನ್ ಸೇರ್ಪಡೆ ಮಾಡಿದ ನಂತರ ಭಾರತ 3 ಪದಕಗಳನ್ನು ಗೆದ್ದಿದೆ. ಸಿಂಧು ರಿಯೊ 2016 ರಲ್ಲಿ ಬೆಳ್ಳಿ ಮತ್ತು ಟೋಕಿಯೊ 2020 ರಲ್ಲಿ ಕಂಚು ಗೆದ್ದಿದ್ದಾರೆ. ಸೈನಾ ನೆಹ್ವಾಲ್ ಲಂಡನ್ 2012 ರಲ್ಲಿ ಕಂಚಿನ ಪದಕ ಗೆದ್ದಿದ್ದರು.

20 ಕಿಮೀ ರೇಸ್ ವಾಕ್‌ನಲ್ಲಿ ಭಾರತಕ್ಕೆ ನಿರಾಸೆ



ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನ 20 ಕಿಮೀ ಪುರುಷ ಮತ್ತು ಮಹಿಳೆಯರ ರೇಸ್ ವಾಕ್ ಸ್ಪರ್ಧೆಯಲ್ಲಿ ಭಾರತ ನಿರಾಸೆ ಅನುಭವಿಸಿತು. ಇಂದು ಟ್ರೊಕಾಡೆರೊದಲ್ಲಿ ನಡೆದ ಪುರುಷರ 20 ಕಿಮೀ ನಡಿಗೆ ಸ್ಪರ್ಧೆಯಲ್ಲಿ ವಿಕಾಸ್ ಸಿಂಗ್ 30 ಮತ್ತು ಪರಮ್‌ಜಿತ್ ಸಿಂಗ್ ಬಿಶ್ತ್ 37ನೇ ಸ್ಥಾನ ಪಡೆದರು.

ವಿಕಾಸ್ ಭಾರತದ ಬೆಸ್ಟ್ ಫಿನಿಷರ್: ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಮೂವರು ಭಾರತೀಯ ಅಥ್ಲೀಟ್‌ಗಳ ಪೈಕಿ ವಿಕಾಸ್ 1:22:36 ಸಮಯದೊಂದಿಗೆ 30ನೇಯವ ರಾಗಿ ಗುರಿ ತಲುಪಿದರು. ಇವರು ಕಳೆದ ವರ್ಷ ಏಷ್ಯನ್ ಗೇಮ್ಸ್‌ನಲ್ಲಿ 20 ಕಿಮೀ ಓಟದ ರೇಸ್ ವಾಕ್ ಸ್ಪರ್ಧೆಯಲ್ಲಿ 5ನೇ ಸ್ಥಾನ ಗಳಿಸಿದ್ದರು.

ರೇಸ್ ವಾಕ್‌ನಲ್ಲಿ ಮತ್ತೆ ಸಿಗದ ಪದಕ: ಇನ್ನು ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಪರಮ್‌ಜೀತ್ 1:23:48 ಗುರಿ ತಲುಪಿದರು. ಆದರೆ, ರಾಷ್ಟ್ರೀಯ ದಾಖಲೆ ಹೊಂದಿರುವ ಅಕ್ಷದೀಪ್ ಸಿಂಗ್ ಕೇವಲ 6 ಕಿಮೀ ದೂರದಲ್ಲಿ ಓಟದಿಂದ ಹೊರಗುಳಿದರು. ಒಲಿಂ ಪಿಕ್ಸ್‌ನಲ್ಲಿ ಇದುವರೆಗೂ 20 ಕಿಮೀ ರೇಸ್ ವಾಕ್ ಸ್ಪರ್ಧೆಯಲ್ಲಿ ಭಾರತ ಯಾವುದೇ ಪದಕ ಗೆದ್ದಿಲ್ಲ. ಮಹಿಳೆಯರ 20 ಕಿಮೀ ರೇಸ್ ವಾಕ್ ಸ್ಪರ್ಧೆಯಲ್ಲಿ ಪ್ರಿಯಾಂಕಾ 41ನೇ ಸ್ಥಾನ ಪಡೆದರು. ಅವರು 1:45:55 ನಿಮಿಷಗಳಲ್ಲಿ ಗುರಿ ತಲುಪಿದರು. ಒಟ್ಟು 43 ಸ್ಪರ್ಧಿಗಳು ಭಾಗವಹಿಸಿದ್ದರು.

ಈಕ್ವೆಡಾರ್ ಸ್ಪರ್ಧಿಗೆ ಚಿನ್ನ: ಈಕ್ವೆಡಾರ್‌ನ ಬ್ರಿಯಾನ್ ಡೇನಿಯಲ್ ಪಿಂಟಾಡೊ ಚಿನ್ನ ಗೆದ್ದರೆ, ಬ್ರೆಜಿಲ್‌ನ ಕೈಯೊ ಬೊನ್‌ಫಿಮ್ ಮತ್ತು ಸ್ಪೇನ್‌ನ ಅಲ್ವಾರೊ ಮಾರ್ಟಿನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಕ್ಕೆ ಕೊರಳೊಡ್ಡಿದರು.

2023ರ ವಿಶ್ವ ಪದಕ ವಿಜೇತ ಪಿಂಟಾಡೊ 1:18:55 ನಿಮಿಷದಲ್ಲಿ ಗುರಿ ತಲುಪಿದರು. ಇದು ಈಕ್ವೆಡಾರ್‌ಗೆ ಲಭಿಸಿದ ಮೊದಲ ಪದಕ. ಇನ್ನುಳಿದಂತೆ, ಬ್ರೆಜಿಲ್‌ನ ಕೌಯಿ ಬೊನ್‌ಫಿಮ್ 1:19:09 ಮತ್ತು ಸ್ಪೇನ್‌ನ ಅಲ್ವಾರೊ ಮಾರ್ಟಿನ್ ಗುರಿ ತಲುಪಲು 1:19:11 ಸಮಯ ತೆಗೆದುಕೊಂಡರು.

ಹಾಕಿ: ಬೆಲ್ಜಿಯಂ ವಿರುದ್ಧ ಭಾರತಕ್ಕೆ ಸೋಲು



ಪ್ಯಾರಿಸ್: ಭಾರತದ ಪುರುಷರ ಹಾಕಿ ತಂಡ ಪ್ಯಾರಿಸ್ ಒಲಿಂಪಿಕ್‌ನಲ್ಲಿ ಸೋಲು ಅನುಭವಿಸಿದೆ. ಗುರುವಾರ ನಡೆದ ಪೂಲ್–ಬಿ ಗುಂಪಿನ ಹಂತದ ಪಂದ್ಯದಲ್ಲಿ ಬೆಲ್ಜಿಯಂ 2–1 ಗೋಲುಗಳ ಅಂತರದಿಂದ ಭಾರತವನ್ನು ಸೋಲಿಸಿತು.

ಬೆಲ್ಜಿಯಂ ಪರ ತಿಬ್ಯು ಸ್ಟಾಕ್‌ಬ್ರೋಕ್ಸ್ (33ನೇ ನಿಮಿಷ) ಮತ್ತು ಜಾನ್–ಜಾನ್ ಡೊಹ್ಮೆನ್ (44ನೇ ನಿಮಿಷ) ಗೋಲು ಗಳಿಸಿದರೆ, ಭಾರತದ ಪರ 18ನೇ ನಿಮಿಷದಲ್ಲಿ ಅಭಿಷೇಕ್ ಏಕೈಕ ಗೋಲು ಹೊಡೆದರು.

ಪ್ರಸಕ್ತ ಒಲಿಂಪಿಕ್‌ನಲ್ಲಿ ಭಾರತದ ಪುರುಷರ ಹಾಕಿ ತಂಡಕ್ಕೆ ಇದು ಮೊದಲ ಸೋಲು. ಕಳೆದ ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತ ಭಾರತ ಪ್ಯಾರಿಸ್‌ನಲ್ಲಿ ತನ್ನ ಕೊನೆಯ 3 ಪಂದ್ಯಗಳ ಪೈಕಿ 2ರಲ್ಲಿ ಗೆದ್ದಿದೆ. ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಅನ್ನು 3–2 ಗೋಲುಗಳ ಅಂತರದಿಂದ ಸೋಲಿಸಿತ್ತು. ಎರಡನೇ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ 2–0ರ ಅಂತರದಿಂದ ಜಯಿಸಿತ್ತು. ಅರ್ಜೆಂಟೀನಾ ವಿರುದ್ಧದ ಪಂದ್ಯ 1–1ರಿಂದ ಡ್ರಾನಲ್ಲಿ ಕೊನೆಗೊಂಡಿತ್ತು.

ಬೆಲ್ಜಿಯಂ ವಿರುದ್ಧದ ಇಂದಿನ ಪಂದ್ಯದಲ್ಲಿ ಭಾರತ ಮೊದಲಾರ್ಧದಲ್ಲಿ 1–0 ಅಂತರದಿಂದ ಮುನ್ನಡೆ ಕಾಯ್ದುಕೊಂಡಿತು. ಸ್ಟಾರ್ ಫಾರ್ವರ್ಡ್ ಆಟಗಾರ ಅಭಿಷೇಕ್ 18ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ಮುನ್ನಡೆ ತಂದುಕೊಟ್ಟರು. ಇದಾದ ನಂತರ ತಂಡ ಮುನ್ನಡೆ ಕಾಯ್ದುಕೊಳ್ಳುವಲ್ಲಿ ವಿಫಲವಾಯಿತು.

ಬೆಲ್ಜಿಯಂ ತನ್ನ ಮೊದಲ ಪಂದ್ಯದಲ್ಲಿ ಐರ್ಲೆಂಡ್ ಅನ್ನು 2–0 ಅಂತರದಿಂದ ಸೋಲಿಸಿದೆ. ಎರಡನೇ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 2–1 ಅಂತರದಿಂದ ಗೆಲುವು ದಾಖಲಿಸಿದರೆ, ಮೂರನೇ ಪಂದ್ಯದಲ್ಲಿ ಟೋಕಿಯೊ ಒಲಿಂಪಿಕ್ಸ್‌ನ 2020ರ ಬೆಳ್ಳಿ ಪದಕ ವಿಜೇತ ಆಸ್ಟ್ರೇಲಿಯಾ ವಿರುದ್ಧ 6–2 ಅಂತರದಿಂದ ಭರ್ಜರಿ ಗೆಲುವು ಸಾಧಿಸಿತ್ತು.

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್‌ಗೆ ಲಕ್ಷ್ಯ ಸೇನ್



ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್‌ನ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಲಕ್ಷ್ಯ ಸೇನ್ 21–12, 21–6 ಸೆಟ್‌ಗಳಿಂದ ಭಾರತದ ಪ್ರಣಯ್ ಅವರನ್ನು ಸೋಲಿಸುವ ಮೂಲಕ ಕ್ವಾರ್ಟರ್ ಫೈನಲ್ ಪ್ರವೇಶಿದ್ದಾರೆ. ಆ ಮೂಲಕ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ 2ನೇ ಭಾರತೀಯ ಎನಿಸಿಕೊಂಡರು. ಇವರಿಗಿಂತ ಮೊದಲು ಪಿ.ಕಶ್ಯಪ್ 2012ರಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಇದೀಗ 12 ವರ್ಷಗಳ ನಂತರ ಭಾರತದ ಷಟ್ಲರ್ ಈ ಸಾಧನೆ ಮಾಡಿದ್ದಾರೆ. ಸೇನ್ ತಮ್ಮ ಮುಂದಿನ ಪಂದ್ಯದಲ್ಲಿ 12ನೇ ಶ್ರೇಯಾಂಕದ ಚೀನಾದ ತೈಪೆಯ ಚೌ ತಿಯೆನ್ ಚೆನ್ ಅವರನ್ನು ಎದುರಿಸಲಿದ್ದಾರೆ.

ಮೊದಲ ಸೆಟ್‌ನಲ್ಲಿ ಅತ್ಯಂತ ಆಕ್ರಮಣಕಾರಿಯಾಗಿ ಆಟವಾಡಿದ ಲಕ್ಷ್ಯ ಸೇನ್ ಪ್ರಣಯ್‌ಗೆ ಯಾವುದೇ ಅವಕಾಶ ನೀಡದೆ ಮೊದಲಿಂದಲೂ ಮುನ್ನಡೆ ಸಾಧಿಸಿದರು. ಮೊದಲ ಸೆಟ್ ಅನ್ನು 21–12 ರಿಂದ ಏಕಪಕ್ಷೀಯ ರೀತಿ ಗೆದ್ದು ಪಂದ್ಯದಲ್ಲಿ 1–0 ಮುನ್ನಡೆ ಸಾಧಿಸಿದರು. ಎರಡನೇ ಸೆಟ್‌ನಲ್ಲೂ ತಮ್ಮ ಆಟ ಮುಂದುವರೆಸಿದ ಲಕ್ಷ್ಯ ಅಂತಿಮವಾಗಿ 21–6 ಅಂತರಿಂದ ಗೆಲುವು ಸಾಧಿಸಿದರು. ಇದಕ್ಕೂ ಮುನ್ನ ಜೊನಾಥನ್ ಕ್ರಿಸ್ಟಿ ಅವರನ್ನು ಸೋಲಿಸುವ ಮೂಲಕ ಲಕ್ಷ್ಯ ಪ್ರೀ ಕ್ವಾರ್ಟರ್ ಫೈನಲ್ ತಲುಪಿದ್ದರು.

ಲಕ್ಷ್ಯ ಸೇನ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನ ಮೊದಲ ಪಂದ್ಯದಲ್ಲಿ ಕೆವಿನ್ ಕಾರ್ಡೆನ್ ಅವರನ್ನು ಸೋಲಿಸಿದ್ದರು. ಎರಡನೇ ಪಂದ್ಯ ಡ್ರಾ ಅಂತ್ಯ ಕಂಡಿತ್ತು. ನಂತರ ಪುರುಷರ ಸಿಂಗಲ್ಸ್‌ನ ಎಲ್ ಗುಂಪಿನಲ್ಲಿ ಬೆಲ್ಜಿಯಂನ ಜೂಲಿಯನ್ ಕ್ಯಾರೇಜ್ ಅವರನ್ನು ಸೋಲಿಸಿದರು.

ಮೂರನೇ ಪುಟದಿಂದ

ಶೋಕಾಸ್ ನೋಟೀಸ್ ಹಿಂಪಡೆಯಿರಿ

ಮುಖ್ಯಮಂತ್ರಿಗಳ ಧರ್ಮಪತ್ನಿ ಪಾರ್ವತಿ ಅವರ ಸಹೋದರ ಡಿನೋಟಿಫಿಕೇಷನ್ ಆದ ಐದಾರು ವರ್ಷಗಳ ನಂತರ ಜಮೀನು ಖರೀದಿ ಮಾಡಿ ಅದನ್ನು ತವರು ಮನೆಯ ಅರಿಷಿನ ಕುಂಕುಮದ ಕಾಣಿಕೆಯಾಗಿ ದಾನ ಪತ್ರದ ಮೂಲಕ ನೀಡಿದ್ದಾರೆ. ಈ ಜಮೀನನ್ನು ಮುಡಾ ಮರುನೋಟಿಫಿಕೇಶನ್ ಮಾಡದೇ, ಬಳಸಿಕೊಳ್ಳುವ ಮೂಲಕ ಈ ಜಾಗವನ್ನು ಮುಡಾ ಒತ್ತುವರಿ ಮಾಡಿಕೊಂಡಿದೆ. ಆಗ ಪಾರ್ವತಿ ಅವರು ಅಕ್ರಮವಾಗಿ ನಮ್ಮ ಜಾಗ ಒತ್ತುವರಿ ಮಾಡಿ ಬೇರೆಯವರಿಗೆ ಹಂಚಿಕೆ ಮಾಡಲಾಗಿದೆ ಹೀಗಾಗಿ ನಮಗೆ ಪರಿಹಾರ ನೀಡಿ ಎಂದು ಕೇಳುತ್ತಾರೆ.

ಮುಡಾಗೆ ತಪ್ಪಿನ ಅರಿವು: ಮುಡಾ ಅವರು ತಮ್ಮ ತಪ್ಪಿನ ಅರಿವಾಗಿ ಪಾರ್ವತಮ್ಮನವರ ಜತೆ ಚರ್ಚೆ ಮಾಡಿ 50:50 ಅನುಪಾತದಲ್ಲಿ ಪರಿಹಾರ ನೀಡಲು ತೀರ್ಮಾನಿಸಿದ್ದಾರೆ. ಮುಡಾದ ಮನವಿ ಆಧಾರದ ಮೇಲೆ ಪಾರ್ವತಮ್ಮನವರು ತಮ್ಮ ಜಮೀನನ್ನು ಮುಡಾಕ್ಕೆ ಬಿಟ್ಟುಕೊಡುತ್ತಾರೆ. ಈ ತೀರ್ಮಾನ ಮಾಡಿದಾಗ ಮುಡಾದಲ್ಲಿ ಕಾಂಗ್ರೆಸ್ ಪಕ್ಷದ ಒಂದಿಬ್ಬರು ಸದಸ್ಯರ ಹೊರತಾಗಿ ಉಳಿದಂತೆ ಜಿ.ಟಿ.ದೇವೇಗೌಡ, ರಾಮದಾಸ್ ಸೇರಿ ಎಲ್ಲಾ ಸದಸ್ಯರು ವಿರೋಧ ಪಕ್ಷದವರಾಗಿದ್ದರು. ಇದೆಲ್ಲವೂ ಬಿಜೆಪಿ ಸರ್ಕಾರದ ಆಡಳಿತ ಅವಧಿಯಲ್ಲಿ ನಡೆದಿರುವ ಪ್ರಕ್ರಿಯೆ. ಆಗ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಇರಲಿಲ್ಲ ಎಂದು ವಿವರಿಸಿದರು. ಮೈಸೂರಿನ ಮತ್ತೊಂದು ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಕೂಡ ಶೇ.50ರಷ್ಟು ಪರಿಹಾರ ನೀಡಬೇಕು ಎಂದು ತೀರ್ಪು ನೀಡಿತ್ತು. ನಗರಾಭಿವೃದ್ಧಿ ಇಲಾಖೆ ಕೂಡ ಈ ವಿಚಾರದಲ್ಲಿ ಉಪಕಾನೂನು ಮಾಡಿಕೊಂಡಿದ್ದು, ಅದೂ ಜಾರಿಯಲ್ಲಿದೆ. ಖಾಸಗಿಯವರ ಭೂಮಿಯನ್ನು ಮುಡಾ ಅಕ್ರಮವಾಗಿ ಒತ್ತುವರಿ ಮಾಡಿಕೊಂಡರೆ ಶೇ.100ರಷ್ಟು ಪರಿಹಾರ ನೀಡುವ ಅವಕಾಶವೂ ಕಾನೂನಿನಲ್ಲಿದೆ. ಪಾರ್ವತಿ ಅವರು ತಮ್ಮ ಅರ್ಜಿಯಲ್ಲಿ ಇಂತಹುದೇ ಜಾಗದಲ್ಲಿ ಪರಿಹಾರ ನೀಡಿ ಎಂದು ಎಲ್ಲಿಯೂ ಕೇಳಿಲ್ಲ. ಇದು ಮುಡಾ ತೀರ್ಮಾನ. ಇದರಲ್ಲಿ ಅವರ ತಪ್ಪೇನಿದೆ? ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರು ಸಹಿ ಹಾಕಿದ್ದಾರಾ? ಅಥವಾ ಯಾರ ಮೇಲಾದರೂ ಒತ್ತಡ ಹಾಕಿದ್ದಾರಾ? ಪಾರ್ವತಮ್ಮನವರು ತಮ್ಮ ಜಮೀನು ಕಳೆದುಕೊಂಡಿದ್ದಕ್ಕೆ ಪರಿಹಾರ ಪಡೆಯುವ ಹಕ್ಕು ಹೊಂದಿಲ್ಲವೇ? ಇಲ್ಲಿ ಆಗಿರುವ ಅಪರಾಧವಾದರೂ ಏನು? ಎಂದು ಪ್ರಶ್ನಿಸಿದರು.

ಈ ಪ್ರಕರಣವನ್ನು ರಾಜಕೀಯ ಪ್ರಚಾರಕ್ಕೆ ಬಳಸಿಕೊಂಡು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲಾಗಿದೆ. ಅವರು ಕೇವಲ ರಾಜಕೀಯ ಮಾಡುತ್ತಿದ್ದು, ಅವರು ರಾಜಕೀಯ ಮಾಡಲಿ ನಮ್ಮ ಅಭ್ಯಂತರವಿಲ್ಲ. ಅಂತಿಮವಾಗಿ ದೇಶದಲ್ಲಿ ಸಂವಿಧಾನ ಹಾಗೂ ಕಾನೂನು ಇದೆ. ನಾವು ಅದರಂತೆ ನಡೆಯುತ್ತೇವೆ ಎಂದು ತಿಳಿಸಿದರು.

ಬಿಜೆಪಿ ಅವರ ಕಾಲದಲ್ಲಿ ಸಾವಿರಾರು ನಿವೇಶನಗಳನ್ನು ಹಂಚಿಕೆ ಮಾಡಿದ್ದು ಯಾರು? ಅವರು ಕಾನೂನುಬಾಹಿರವಾಗಿ ಮಾಡಿದ್ದರೇ? ಈ ಪ್ರಕರಣದ ಬಗ್ಗೆ ಎರಡು ವರ್ಷಗಳ ಹಿಂದೆಯೇ ಮಾಧ್ಯಮಗಳಲ್ಲಿ ಬಂದಾಗ, ಅಧಿಕಾರದಲ್ಲಿದ್ದ ಬಿಜೆಪಿ ಯಾಕೆ ಮಾತನಾಡಲಿಲ್ಲ? ಇಲ್ಲಿ ಮುಖ್ಯಮಂತ್ರಿಗಳಿಂದ ಆಗಿರುವ ಅಕ್ರಮ ವೇನು? ಈ ರೀತಿ ಸುಳ್ಳು ಪ್ರಕರಣವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿಯನ್ನು ಕೆಳಗಿಳಿಸಿ, ಸರ್ಕಾರವನ್ನೇ ತೆಗೆಯಲು ಮುಂದಾಗುವುದು ಎಷ್ಟು ಸರಿ? ರಾಜ್ಯದ ಜನ ಆಶೀರ್ವಾದ ಮಾಡಿದ ಸರ್ಕಾರವನ್ನು ಅಲುಗಾಡಿಸಲು ಹೊರಟಿದ್ದಾರೆ, ಇದು ಸಾಧ್ಯವಿಲ್ಲ. ಇದು ಜನರ ಆಶೀರ್ವಾದದ ಮೇಲೆ ರಚಿತವಾಗಿರುವ ಸರ್ಕಾರ ಎಂದು ತಿಳಿಸಿದರು.

ಅಬ್ರಹಾಂ ಎಂಬಾತ ನನ್ನ ವಿರುದ್ಧ ಸೇರಿದಂತೆ ಯಡಿಯೂರಪ್ಪ ಹಾಗೂ ಇತರ ನಾಯಕರ ವಿರುದ್ಧ ದೂರು ನೀಡಿದ್ದಾರೆ. ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯ ಅವರ ವಿರುದ್ಧ ತೀರ್ಪು ನೀಡಿದೆ. ಮುಡಾ ಅವರು ಪಾರ್ವತಿ ಅವರ ಬಳಿ ಒಪ್ಪಂದ ಮಾಡಿಕೊಂಡಿರುವುದೇಕೆ? ಇಲ್ಲಿ ಮುಖ್ಯಮಂತ್ರಿಗಳಿಂದ ಅಕ್ರಮ ನಡೆದಿರುವುದಕ್ಕೆ ಒಂದು ಸಣ್ಣ ದಾಖಲೆ ಇದೆಯೇ? ಹೀಗಾಗಿ ಈ ವಿಚಾರವಾಗಿ ಇಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ, ಸರ್ಕಾರದ ವತಿಯಿಂದ ರಾಜ್ಯಪಾಲರಿಗೆ ಶೋಕಾಸ್ ನೋಟೀಸ್ ಹಿಂಪಡೆದು, ಅಬ್ರಾಹಂ ಅವರ ದೂರನ್ನು ವಜಾಗೊಳಿಸುವಂತೆ ಸಲಹೆ ನೀಡಲು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

ರಾಜ್ಯಪಾಲರು ನಮ್ಮ ಸಲಹೆ ಸ್ವೀಕರಿಸುವ ವಿಶ್ವಾಸವಿದೆ

ರಾಜ್ಯಪಾಲರು ನಿಮ್ಮ ಸಲಹೆಗಳ ವಿರುದ್ಧವಾಗಿ ನಡೆದುಕೊಂಡರೆ ನಿಮ್ಮ ಮುಂದಿನ ನಡೆ ಏನು ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿ, ರಾಜ್ಯಪಾಲರು ಈ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಗಣಿಸಲಿದ್ದಾರೆ ಎಂಬ ಭರವಸೆ ನಮಗಿದೆ. ನಾವು ಅವರಿಗೆ ಎಲ್ಲಾ ಮಾಹಿತಿಯನ್ನು ವಿವರವಾಗಿ ನೀಡಿದ್ದೇವೆ. ಬೇರೆ ರಾಜ್ಯಗಳ ಪ್ರಕರಣ ನ್ಯಾಯಾಲಯದ ತೀರ್ಪುಗಳು ನಮ್ಮ ಮುಂದಿವೆ. ಇಲ್ಲಿ ಕಾನೂನು, ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಅಡಗಿದ್ದು, ರಾಜ್ಯಪಾಲರು ಬಹಳ ಲೆಕ್ಕಾಚಾರದಿಂದ ಹೆಜ್ಜೆ ಇಡಬೇಕಾಗುತ್ತದೆ. ಹೀಗಾಗಿ ರಾಜ್ಯಪಾಲರು ಏನೇ ಒತ್ತಡ ಇದ್ದರೂ ತಮ್ಮ ಸ್ಥಾನದ ಘನತೆ ಹಾಳಾಗದಂತೆ ಜವಾಬ್ದಾರಿ ನಿರ್ವಹಿಸಲಿದ್ದಾರೆ. ನಮ್ಮ ಮುಖ್ಯ ಕಾರ್ಯದರ್ಶಿಗಳು ಈಗಾಗಲೇ ವಿಸ್ತೃತ ವರದಿ ನೀಡಿದ್ದು, ಮುಖ್ಯ ಮಂತ್ರಿಗಳು ವಿವರವಾಗಿ ಉತ್ತರ ನೀಡಲಿದ್ದಾರೆ ಎಂದು ತಿಳಿಸಿದರು.

ವಿಚಾರಣೆಗೆ ಅನುಮತಿ ನೀಡು ವುದು ರಾಜ್ಯಪಾಲರ ವಿವೇಚನೆಗೆ ಬಿಟ್ಟಿರುವ ವಿಚಾರವೋ, ಅಥವಾ ಸಚಿವ ಸಂಪುಟ ತೀರ್ಮಾನದ ವಿಚಾರವೋ ಎಂಬ ಪ್ರಶ್ನೆಗೆ, ಈ ಪ್ರಕರಣದಲ್ಲಿ ವಿಚಾರಣೆಗೆ ಅವ ಕಾಶವೇ ಇಲ್ಲ. ಈ ಪ್ರಕರಣದಲ್ಲಿ ವರದಿ ಕೇಳಿ ಪಡೆಯಬಹುದಾಗಿದೆ. ತನಿಖೆ ನಡೆದು ಅದರಲ್ಲಿ ಮುಖ್ಯಮಂತ್ರಿಗಳ ಕೈವಾಡವಿದೆ ಎಂಬುದು ಸಾಬೀತಾದರೆ ಆಗ ವಿಚಾರಣೆಗೆ ನೀಡಬಹುದು. ಯಾರೋ ದೂರು ನೀಡಿದ ಕಾರಣಕ್ಕೆ ವಿಚಾರಣೆಗೆ ನೀಡಲು ಬರುವುದಿಲ್ಲ ಎಂದು ತಿಳಿಸಿದರು. ದೆಹಲಿಯಲ್ಲಿ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿದಾಗ ಈ ವಿಚಾರವಾಗಿ ಸ್ಪಷ್ಟನೆ ನೀಡಲಾಯಿತೇ ಎಂದು ಕೇಳಿ ದಾಗ, ಈ ಪ್ರಕರಣದಲ್ಲಿ ಯಾವುದೇ ರೀತಿಯ ಅಕ್ರಮ ನಡೆದಿಲ್ಲ ಎಂದು ನಮ್ಮ ನಾಯಕರಿಗೆ ತಿಳಿದಿದೆ. ಹೀಗಾಗಿ ಈ ವಿಚಾರವನ್ನು ನಾವು ಚರ್ಚೆ ಮಾಡಿಲ್ಲ. ನಾವು ಕೇವಲ ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ಮಾಡಿದೆವು. ಪಕ್ಷ ಸಂಘಟನೆ, ರಾಜ್ಯದ ಜನರಲ್ಲಿ ಬಿಜೆಪಿ ಸೃಷ್ಟಿಸು ತ್ತಿರುವ ಗೊಂದಲದ ಬಗ್ಗೆ ಚರ್ಚೆ ಮಾಡಿದೆವು ಎಂದು ತಿಳಿಸಿದರು.

ಮುಖ್ಯಮಂತ್ರಿ ಪತ್ನಿ ಎಂಬ ಕಾರಣಕ್ಕೆ ತಮ್ಮ ಹಕ್ಕನ್ನು ಕಳೆದುಕೊಳ್ಳಬೇಕಾ?

ಪಾರ್ವತಿ ಅವರು ಸಾಮಾನ್ಯ ಹೆಣ್ಣು ಮಗಳಲ್ಲ, ಆಕೆ ಮುಖ್ಯಮಂತ್ರಿಗಳ ಧರ್ಮಪತ್ನಿಯಾಗಿದ್ದು, ಈ ಪ್ರಕರಣದಲ್ಲಿ ಸ್ವಜನಪಕ್ಷಪಾತವಾಗಿಲ್ಲವೇ ಎಂದು ಕೇಳಿದಾಗ, ಮುಖ್ಯಮಂತ್ರಿ ಗಳ ಪತ್ನಿಯಾದ ಮಾತ್ರಕ್ಕೆ ತನ್ನ ಹಕ್ಕನ್ನು ಕಳೆದುಕೊಳ್ಳಬೇಕಾ? ತನ್ನ ಅಣ್ಣ ಕೊಟ್ಟ ಜಮೀನನ್ನು ಉಳಿಸಿಕೊಂಡು ತನ್ನ ಮಕ್ಕಳ ಭವಿಷ್ಯ ರಕ್ಷಣೆ ಮಾಡಿ ಕೊಳ್ಳುವುದು ತಪ್ಪಾ? ಸಿದ್ದರಾಮಯ್ಯ ಅವರು 40 ವರ್ಷಗಳ ರಾಜಕಾರಣ ಮಾಡಿದ್ದು, ಮಂತ್ರಿ, ಉಪಮುಖ್ಯ ಮಂತ್ರಿಯಾಗಿದ್ದಾರೆ, 7 ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಆದರೂ ಅವರ ಪತ್ನಿ ಎಂದಿಗೂ ಸಾರ್ವಜನಿಕವಾಗಿ ಗುರುತಿಸಿಕೊಂಡಿಲ್ಲ. ತಮ್ಮ ಅಧಿಕಾರವನ್ನು ಬಳಸಿಕೊಂಡು ವೇದಿಕೆ ಹಂಚಿಕೊಂಡಿಲ್ಲ. ಅವರಿಗೆ ಅಧಿಕಾರ ಇದ್ದರೂ ಅದನ್ನು ಬಳಸಿ ಕೊಂಡಿಲ್ಲ. ನಾವು ಅವಕಾಶ ಸಿಕ್ಕಾಗ ನಮ್ಮ ಮನೆಯವರನ್ನು ಕರೆದುಕೊಂಡು ಹೋಗಿದ್ದೇವೆ. ಆದರೆ ಪಾರ್ವತಿ ಅವರು ಎಂದಿಗೂ ಅಧಿಕಾರವನ್ನು ಬಳಸಿಕೊಂಡವರಲ್ಲ. ಈ ವಿಚಾರವಾಗಿ ಆಕೆಯನ್ನು ಪ್ರತಿಯೊಬ್ಬರೂ ಪ್ರಶಂಸಿಸಬೇಕು. ಆಕೆ ತನ್ನ ತವರಿ ನಿಂದ ಬಂದ ಆಸ್ತಿಯನ್ನು ಉಳಿಸಿಕೊಳ್ಳುವ ಎಲ್ಲಾ ಹಕ್ಕು ಇದೆ" ಎಂದು ತಿಳಿಸಿದರು.

ವಾಡಿಕೆಗಿಂತ ಅಧಿಕ ಮಳೆ

ಇರುತ್ತದೆ ಎಂದು ಹವಾಮಾನ ಇಲಾಖೆ ಹೇಳಿದೆ. ಜೂನ್ 1 ರಿಂದ ಸಾಮಾನ್ಯ 445.8 ಮಿಮೀ ವಿರುದ್ಧ ದೇಶವು ಇಲ್ಲಿಯವರೆಗೆ 453.8 ಮಿಮೀ ಮಳೆ ಕಂಡಿದೆ. ಜೂನ್ 1 ರಿಂದ ಎರಡು ಶೇ. ಹೆಚ್ಚುವರಿ, ತೇವದ ವಾತಾವರಣ ಕೂಡ ಇರುತ್ತದೆ.

ದೇಶದ ಬಹುತೇಕ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಇದೆ. ಈಶಾನ್ಯ ಭಾಗಗಳು, ಪಕ್ಕದ ಪೂರ್ವ ಭಾರತ, ಲಡಾಖ್, ಸೌರಾಷ್ಟ್ರ ಕಚ್, ಮಧ್ಯ ಮತ್ತು ಪರ್ಯಾಯ ಭಾರತದ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯನ್ನು ನಿರೀಕ್ಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುಖ್ಯಸ್ಥ ಮೃತ್ಯುಂಜಯ್ ಮೊಹಾಪಾತ್ರ ಆನ್‌ಲೈನ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಪಶ್ಚಿಮ ಹಿಮಾಲಯದ ಭಾಗದಲ್ಲಿ ಮಳೆ ಕೊರತೆಯುಂಟಾಗಬಹುದು. ದೇಶದ ಬಹುತೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನವನ್ನು ನಿರೀಕ್ಷಿಸಲಾಗಿದೆ ಎಂದು ಅವರು ಹೇಳಿದರು.

ಗಂಗಾ ಬಯಲು ಪ್ರದೇಶ, ಮಧ್ಯ ಭಾರತ, ಭಾರತದ ಆಗ್ನೇಯ ಕರಾವಳಿಯ ಕೆಲವು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಗರಿಷ್ಠ ತಾಪಮಾನದ ಸಾಧ್ಯತೆಯಿದೆ ಎಂದು ಮೊಹಾಪಾತ್ರ ಹೇಳಿದರು.

ಜುಲೈನಲ್ಲಿ ಭಾರತವು ಸಾಮಾನ್ಯಕ್ಕಿಂತ ಶೇಕಡಾ 9ರಷ್ಟು ಹೆಚ್ಚು ಮಳೆಯನ್ನು ಕಂಡಿದೆ. ಮಧ್ಯ ಪ್ರದೇಶದಲ್ಲಿ ಶೇಕಡಾ 33ರಷ್ಟು ಅಧಿಕ ಮಳೆಯಾಗಿದೆ.

ಕೃಷಿಗೆ ಮುಂಗಾರು ಮಳೆಯನ್ನೇ ಹೆಚ್ಚು ಅವಲಂಬಿಸಿರುವ ಮಧ್ಯ ಭಾರತದಲ್ಲಿ ಸತತ ಮೂರನೇ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕೃಷಿಗೆ ಅನುಕೂಲವಾಗಿದೆ. ಪೂರ್ವ ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಗಂಗಾ ಪಶ್ಚಿಮ ಬಂಗಾಳ ಮತ್ತು ಈಶಾನ್ಯದ ಭಾಗಗಳಲ್ಲಿ ಮಳೆ ಕೊರತೆ ಕಾಣಲಿದೆ. ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಮಳೆಯ ಕೊರತೆಯು ಶೇ.35 ರಿಂದ ಶೇ.45 ರಷ್ಟಿದೆ. ಭಾರತೀಯ ಮಾನ್ಸೂನ್ ವಿವಿಧ ನೈಸರ್ಗಿಕ ಅಂಶಗಳಿಂದಾಗಿ ಕಾಲಾನಂತರದಲ್ಲಿ ಸಂಭವಿಸುವ ಅಂತರ್ಗತ ಏರಿಳಿತಗಳು ಮತ್ತು ಬದಲಾ ವಣೆಗಳಿಂದ ನಿರೂಪಿಸಲ್ಪಟ್ಟಿದೆ. ಇದನ್ನು ನೈಸರ್ಗಿಕ ವ್ಯತ್ಯಾಸ ಎಂದು ಕರೆಯಲಾಗುತ್ತದೆ.

ಮೈಸೂರು ನಗರ ನಿರ್ವಹಣೆ ಅತ್ಯಂತ ಹೀನಾಯ ಪರಿಸ್ಥಿತಿ ತಲುಪಿದೆ

● ಪಾಲಿಕೆ ಆಯುಕ್ತರಿಗೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಸವಿವರ ಪತ್ರ; ಶೀಘ್ರ ಕ್ರಮಕ್ಕೆ ಆಗ್ರಹ ● ನಾನಾ ಸಾಂಕ್ರಾಮಿಕ ರೋಗಗಳ ಭೀತಿಯಿಂದ ಜನರು ತಲ್ಲಣ ● 65 ವಾರ್ಡ್‌ಗಳಿಗೂ ದಿಢೀರ್ ಭೇಟಿ ನೀಡಿ; ಅಧಿಕಾರಿಗಳು, ಸಿಬ್ಬಂದಿ ಕಾರ್ಯದ ಮೇಲೆ ನಿಗಾ ವಹಿಸಲು ಮನವಿ

ಮೈಸೂರು,ಆ.1(ಜಿಎ)-ಮೈಸೂರಿನಲ್ಲಿ ಸ್ವಚ್ಛತೆ, ಯುಜಿಡಿ ಸಮಸ್ಯೆಯಿಂದಾಗಿ ಸಾಂಕ್ರಾಮಿಕ ರೋಗಗಳ ಭೀತಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಹಾನಗರಪಾಲಿಕೆ ಆಯುಕ್ತರು 65 ವಾರ್ಡ್‌ಗಳಿಗೂ ಆಗಾಗ ದಿಢೀರ್ ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವಂತೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಈ ಕುರಿತು ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಸ್ವಚ್ಛತೆ, ಚರಂಡಿ ಹಾಗೂ ಯುಜಿಡಿ ಸಮಸ್ಯೆ ಬಗ್ಗೆ ದೂರುಗಳು ಹೆಚ್ಚಾಗಿವೆ. ಮೈಸೂರು ಸೇರಿದಂತೆ ರಾಜ್ಯಾದ್ಯಂತ ಅಧಿಕ ಮಳೆಯಾಗುತ್ತಿದ್ದು ಡೆಂಗ್ಯೂ ಸೇರಿದಂತೆ ಸಾಂಕ್ರಾಮಿಕ ರೋಗಗಳ ಭೀತಿಯೂ ಹೆಚ್ಚಾಗಿದೆ. ಆದರೆ ಸಾರ್ವಜನಿಕ ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಯಾರೂ ಸ್ಪಂದಿಸುತ್ತಿಲ್ಲ. ಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವುದು ಬಹಳ ಮುಖ್ಯ ಎಂಬ ಅರಿವು ಹಲವರಿಗಿಲ್ಲ. ಪಾಲಿಕೆಯಲ್ಲಿ ವಿವಿಧ ಹುದ್ದೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ಮೈಸೂರು ನಗರ ನಿರ್ವಹಣೆ ಅತ್ಯಂತ ಹೀನಾಯ ಸ್ಥಿತಿ ತಲುಪಿರುವುದು ಗಂಭೀರ ವಿಚಾರವೇ ಸರಿ ಎಂದು ತಿಳಿಸಿದ್ದಾರೆ.


ಸಂದೇಶ್ ಸ್ವಾಮಿ

ತಾವು ನಗರದ ಎಲ್ಲಾ 65 ವಾರ್ಡ್‌ಗಳಿಗೂ ಒಂದೊಂದು ದಿನ ದಿಢೀರ್ ಭೇಟಿ ನೀಡಬೇಕು. ವಲಯ ಕಚೇರಿ ಆಯುಕ್ತರು, ಅಭಿವೃದ್ಧಿ ಅಧಿಕಾರಿ, ಇಂಜಿನಿಯರ್‌ಗಳು, ಕಂದಾಯ ಅಧಿಕಾರಿಗಳು, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ನಿರೀಕ್ಷಕರು, ಸ್ವಚ್ಛತೆ ಹಾಗೂ ಯುಜಿಡಿ ವಿಭಾಗದ ನೌಕರರು ಸೇರಿದಂತೆ ಸಂಬಂಧಪಟ್ಟವರನ್ನೆಲ್ಲಾ ಜೊತೆಯಲ್ಲಿ ಕರೆದೊಯ್ಯಬೇಕು. ವಾರ್ಡ್ ಪರಿವೀಕ್ಷಣೆ ನಡೆಸಿ, ವಾಸ್ತವ ಸ್ಥಿತಿಯನ್ನು ಕಣ್ಣಾರೆ ಕಂಡು ಮುಂದಿನ ಕ್ರಮ ಕೈಗೊಳ್ಳಬೇಕು. ಸಮರೋಪಾದಿ ನಿರ್ವಹಣೆಗೆ ನಿರ್ದೇಶನ ನೀಡಬೇಕು ಎಂದು ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಖಾತೆ ವರ್ಗಾವಣೆಗೆ ಅರ್ಜಿ ಹಾಕಿದರೆ ಅಧಿಕಾರಿಗಳು ಕನಿಷ್ಠ 2-4 ತಿಂಗಳು ಸತಾಯಿಸುತ್ತಾರೆ. ಕಂದಾಯ ಪಾವತಿಗೆ ಹೋದಾಗ ಮತ್ತೊಂದು ರೀತಿಯ ತೊಂದರೆ ಅನುಭವಿಸಬೇಕಿದೆ. ಮೊದಲು ಹೆಚ್ಚು ಕಂದಾಯ ಹೇಳಿ, ಅಧಿಕಾರಿಗಳಲ್ಲಿ ಮನವಿ ಮಾಡಿದರಷ್ಟೇ ಮೊತ್ತ ಕಡಿಮೆ ಮಾಡುತ್ತಾರೆ ಎಂದು ಜನ ದೂರುತ್ತಿದ್ದಾರೆ.

ನಿಮ್ಮ ಉಸ್ತುವಾರಿಯಲ್ಲಿ ಸಮರ್ಪಕ ನಿರ್ವಹಣೆ ಜೊತೆಗೆ ಸಾರ್ವಜನಿಕರನ್ನು ಕಾಯಿಸದೆ ನಿಗದಿತ ಅವಧಿಯಲ್ಲಿ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡುವ ಜನಸ್ನೇಹಿ ವ್ಯವಸ್ಥೆ ಬರಬೇಕು ಎಂಬುದು ನಮ್ಮ ಆಶಯ. ಸರ್ಕಾರದ ಆದೇಶವಿಲ್ಲದೆ ಕೇವಲ ಸುತ್ತೋಲೆ ಆಧಾರದಲ್ಲಿ ರಾಜ್ಯದಲ್ಲೇ ಅತೀ ಹೆಚ್ಚು ತೆರಿಗೆ ಸಂಗ್ರಹಿಸಲಾಗುತ್ತಿದೆ. ಕಾನೂನಾತ್ಮಕವಾಗಿ ಇದು ಸರಿಯಾದ ಕ್ರಮವಲ್ಲ. ಈ ಸಂಬಂಧ ಯಾರಾದರೂ ನ್ಯಾಯಾಲಯದ ಮೊರೆ ಹೋದರೆ ಪಾಲಿಕೆಗೆ ಸಮಸ್ಯೆಯಾಗಬಹುದು. ಹಾಗಾಗಿ ಆಸ್ತಿ ತೆರಿಗೆ, ಖಾತೆ ವರ್ಗಾವಣೆ ಶುಲ್ಕ ಸೇರಿದಂತೆ ಎಲ್ಲಾ ಶುಲ್ಕಗಳನ್ನೂ ಸರ್ಕಾರದ ಆದೇಶದನ್ವಯ ಸಂಗ್ರಹಿಸುವುದು ಸೂಕ್ತ ಎಂಬುದನ್ನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಾರ್ವಜನಿಕ ಹಿತಾಸಕ್ತಿಯ ಈ ಮನವಿಗೆ ಸ್ಪಂದಿಸಿ, ಶೀಘ್ರ ಕ್ರಮವಹಿಸುವ ವಿಶ್ವಾಸವಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮೈಸೂರು ಪ್ರಾದೇಶಿಕ ಆಯುಕ್ತರಾಗಿ ಡಿ.ಎಸ್.ರಮೇಶ್ ಅಧಿಕಾರ ಸ್ವೀಕಾರ



ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಿರ್ಗಮಿತ ಆಯುಕ್ತ ಜಿ.ಸಿ.ಪ್ರಕಾಶ್ ಅವರಿಂದ ಡಿ.ಎಸ್. ರಮೇಶ್ ಅಧಿಕಾರ ವಹಿಸಿಕೊಂಡರು.

ಮೈಸೂರು, ಆ.1 (ಆರ್‌ಕೆ)-ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾಗಿ ಹಿರಿಯ ಐಎಎಸ್ ಅಧಿಕಾರಿ, ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್.ರಮೇಶ್ ಅವರನ್ನು ನಿಯೋಜಿಸಲಾಗಿದೆ. ಮೈಸೂರಿನ ಕಲಾಮಂದಿರದ ಎದುರು ಹುಣಸೂರು ರಸ್ತೆಯಲ್ಲಿರುವ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಿರ್ಗಮಿತ ಆಯುಕ್ತ ಜಿ.ಸಿ. ಪ್ರಕಾಶ್ ಅವರಿಂದ ಇಂದು ರಮೇಶ್ ಅಧಿಕಾರ ವಹಿಸಿಕೊಂಡರು. ಜುಲೈ 31ಕ್ಕೆ ಜಿ.ಸಿ.ಪ್ರಕಾಶ್ ನಿವೃತ್ತರಾದ ಹಿನ್ನೆಲೆಯಲ್ಲಿ ಈ ಸ್ಥಾನ ತೆರವಾಗಿತ್ತು. ಮೈಸೂರು ಮಹಾನಗರಪಾಲಿಕೆ ಆಡಳಿತಾಧಿಕಾರಿಯಾಗಿಯೂ ಡಿ.ಎಸ್.ರಮೇಶ್ ಅವರು ಹೆಚ್ಚುವರಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಬೆಂಗಳೂರಲ್ಲಿ ಪಂಚಾಯತ್‌ರಾಜ್ ಇಲಾಖೆ ಆಯುಕ್ತರಾಗಿರುವ ಡಾ.ಅರುಂಧತಿ ಚಂದ್ರಶೇಖರ್ ಅವರನ್ನು ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಆ.1-ಕೆ.ವಿ.ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ನಿಮಿತ್ತ ಆ.3ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸಿಲ್ಕ್ ಫ್ಯಾಕ್ಟರಿ ವೃತ್ತ, ಪೋಸ್ಟ್ ಆಫೀಸ್ ರಸ್ತೆ, ಎನ್.ಐ.ಇ ಕಾಲೇಜು ವೃತ್ತ, ಪೊಲೀಸ್ ಕ್ವಾಟ್ರಸ್ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆಪಿಸಿಸಿ ಹಿಂದುಳಿದ ವರ್ಗದ ರಾಜ್ಯ ಉಪಾಧ್ಯಕ್ಷ ವಿನೋದ್‌ರಾಜ್‌ಗೆ ಹುಟ್ಟುಹಬ್ಬದ ಸಂಭ್ರಮ


ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ರಾಜ್ಯ ಉಪಾಧ್ಯಕ್ಷ ವಿನೋದ್ ರಾಜ್ ಅವರನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ರಾಜ್ಯ ಕಾರ್ಯದರ್ಶಿ ಚಂದ್ರು ವಿಶ್ವಕರ್ಮ, ಮುಖಂಡರಾದ ಕನಕಮೂರ್ತಿ ಹಡಜನ, ಗಿರೀಶ್, ದೀಪಕ್, ಮಹೇಶ್, ಕಿರಣ್‌ಕುಮಾರ್ ಸನ್ಮಾನಿಸಿ, ಶುಭ ಕೋರಿದರು.

ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿ ಅದ್ದೂರಿ ಚಾಮುಂಡೇಶ್ವರಿ ವರ್ಧಂತಿ ಉತ್ಸವ


ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿ ಶ್ರೀ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ ಮೆರವಣಿಗೆ ನಡೆಯಿತು.

ಮೈಸೂರು, ಆ.1(ಎಂಕೆ)- ಮೈಸೂರಿನ ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿ 17ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವದ ಉತ್ಸವಮೂರ್ತಿ ಮೆರವಣಿಗೆ ಗುರುವಾರ ಅದ್ದೂರಿಯಾಗಿ ನಡೆಯಿತು.

ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕೆ.ಹೆಚ್.ಬಿ ಬಡಾವಣೆ ಮತ್ತು ಹೂಟಗಳ್ಳಿ ನಿವಾಸಿಗಳ ವತಿಯಿಂದ ಎರಡು ದಿನಗಳ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವದ ಮೊದಲ ದಿನ ಸಾಂಸ್ಕೃತಿಕ ಕಲಾ ತಂಡದೊಂದಿಗೆ ಉತ್ಸವಮೂರ್ತಿ ಮೆರವಣಿಗೆ ನಡೆಸಲಾಯಿತು.

ನಾದಸ್ವರ, ಗಾರುಡಿ ಗೊಂಬೆ ಕುಣಿತ, ವೀರಗಾಸೆ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ನೂರಾರು ಮಹಿಳೆಯರು ಕಳಸ ಹೊತ್ತು ಉತ್ಸವ ಮೂರ್ತಿ ಮೆರವಣಿಯಲ್ಲಿ ಸಾಗಿಸಿದರು. ದೇವಸ್ಥಾನದಿಂದ ಸಂಜೆ 6.30ಕ್ಕೆ ಹೊರಟ ಉತ್ಸವ ಮೂರ್ತಿ ಮೆರವಣಿಗೆ ಜೋಡಿ ರಸ್ತೆ ಸೇರಿದಂತೆ ಹೂಟಗಳ್ಳಿಯ ಪ್ರಮುಖ ಬೀದಿಗಳಲ್ಲಿ ಸಾಗಿತು. ಮಾರ್ಗದುದ್ದಕ್ಕೂ ನೂರಾರು ಭಕ್ತರು ಕರ್ಪೂರ ಹಚ್ಚಿ, ಇಡುಗಾಯಿ ಒಡೆದು ಭಕ್ತಿ ತೋರಿದರು.

ವಿದ್ಯುತ್ ದೀಪಾಲಂಕಾರದೊಂದಿಗೆ ಹಬ್ಬದ ವಾತಾವರಣ ಕಳೆಗಟ್ಟಿದ್ದ ಹೂಟಗಳ್ಳಿ ನಿವಾಸಿಗಳು ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸಿದರು. ರಾತ್ರಿ 10 ಗಂಟೆಯವರೆಗೂ ಉತ್ಸವ ಮೂರ್ತಿ ಮೆರವಣಿಗೆ ಅಂತಿಮವಾಗಿ ದೇವಸ್ಥಾನದಲ್ಲಿ ಬಳಿ ಸಂಪನ್ನಗೊಂಡಿತು.

ಪ್ರಸಾದ ವಿನಿಯೋಗ: ನಾಳೆ(ಆ.2) ಆಷಾಢ ಮಾಸದ ಕಡೇ ಶುಕ್ರವಾರದಂದು ಸಂಜೆ 4 ಗಂಟೆಗೆ ಪ್ರಸಾದ ವಿನಿಯೋಗ ಹಮ್ಮಿಕೊಳ್ಳಲಾಗಿದೆ. ಹಾಗೆಯೇ ಚಾಂಡೇಶ್ವರಿಯ ಪ್ರತಿಷ್ಠಾಪನೆ ಪೂಜಾ ಕಾರ್ಯ ನಡೆಯಲಿದೆ. ಸಂಜೆ ವೇಳೆ ಸ್ಥಳೀಯ ಶಾಸಕರು ಸೇರಿದಂತೆ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಸಿದ್ದರಾಜು ಮಾಹಿತಿ ನೀಡಿದರು.

ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಗೌರವಾಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ಶಿವಮಲ್ಲು, ಕಾರ್ಯದರ್ಶಿ ರಾಘವೇಂದ್ರ, ಜಂಟಿ ಕಾರ್ಯದರ್ಶಿ ಕೆ.ಬಿ. ದಿನೇಶ್, ಸಹ ಕಾರ್ಯದರ್ಶಿಗಳಾದ ದಿನೇಶ್, ಮಂಜುನಾಥ್ ಶೆಟ್ಟಿ, ನಿರ್ದೇಶಕರಾದ ಪ್ರಸನ್ನ, ನರೇಶ್, ಮಂಜುನಾಥ್, ಗಿರೀಶ್, ರಮೇಶ್, ಪ್ರಕಾಶ್, ಲಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಇಂದು ಕೊನೆ ಆಷಾಢ ಶುಕ್ರವಾರ

ಚಾಮುಂಡಿಬೆಟ್ಟದಲ್ಲಿ ದೇವಿ ದರ್ಶನಕ್ಕೆ ಸಕಲ ವ್ಯವಸ್ಥೆ

ಮೈಸೂರು, ಆ.1(ಎಸ್‌ಬಿಡಿ)- ಆಷಾಢ ಮಾಸದ ಕೊನೆಯ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವಕ್ಕೆ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ ಸಜ್ಜಾಗಿದೆ.



ದೇವಾಲಯವನ್ನು ವರ್ಣಮಯ ಹೂಗಳಿಂದ ಸಿಂಗರಿಸಲಾಗಿದ್ದು, ಚಾಮುಂಡೇಶ್ವರಿ ಮೂರ್ತಿಗೆ ಅತ್ಯಾಕರ್ಷಕ ಸೀರೆ ಹಾಗೂ ಆಭರಣ ತೊಡಿಸಿ ಅಲಂಕಾರಗೊಳಿಸಿದ ಬಳಿಕ ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳನ್ನು ಆರಂಭಿಸಲಾಗುತ್ತದೆ. ಬೆಳಗ್ಗೆ 6ರಿಂದ ತಾಯಿ ದರ್ಶನಕ್ಕೆ ಅವಕಾಶ ನೀಡುವುದರಿಂದ ನೂರಾರು ಭಕ್ತರು ತಡರಾತ್ರಿಯಿಂದಲೇ ಬೆಟ್ಟದಲ್ಲಿ ತಂಗಿದ್ದಾರೆ. ಮೆಟ್ಟಿಲುಗಳ ಮೂಲಕವೂ ಸಹಸ್ರಾರು ಭಕ್ತರು ಬೆಟ್ಟಕ್ಕೆ ತೆರಳಲಿದ್ದು, ಅಲ್ಲಿ ನೂಕುನುಗ್ಗಲು ಉಂಟಾಗದಂತೆ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ.


ಕಡೇ ಶುಕ್ರವಾರವಾದ ಹಿನ್ನೆಲೆಯಲ್ಲಿ ಹಿಂದಿನ ವಾರಗಳಿಗಿಂತ ಅಪಾರ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆ ಇರುವುದರಿಂದ ಲಲಿತಮಹಲ್ ಪ್ಯಾಲೇಸ್ ಬಳಿಯಿಂದ ಸಂಚರಿಸುವ ಉಚಿತ ಬಸ್‌ಗಳ ಸಂಖ್ಯೆಯನ್ನೂ ಹೆಚ್ಚಿಸಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಕ್ರಮ ವಹಿಸಿದ್ದಾರೆ. ಅಲ್ಲಿ ವಾಹನ ದಟ್ಟಣೆ ಹಾಗೂ ಪಾರ್ಕಿಂಗ್ ಸಮಸ್ಯೆಯಾಗದಂತೆ ಪೊಲೀಸರು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದಾರೆ. ಚಾಮುಂಡಿ ಬೆಟ್ಟದಲ್ಲೂ ಜನದಟ್ಟಣೆ ನಿರ್ವಹಣೆಗೆ ಸೂಕ್ತ ಕ್ರಮ ಹಾಗೂ ಬಿಗಿ ಬಂದೋಬಸ್ತ್ ಮಾಡಿಕೊಳ್ಳಲಾಗಿದೆ. ಮೆಟ್ಟಿಲು ಮಾರ್ಗದಲ್ಲೂ ಪೊಲೀಸರನ್ನು ನಿಯೋಜನೆ ಮಾಡಲಾಗುತ್ತಿದೆ. ಹಾಗೆಯೇ ಎಲ್ಲೆಂದರಲ್ಲಿ ಪ್ರಸಾದ ವಿತರಿಸಿ, ಶುಚಿತ್ವ ಹಾಳು ಮಾಡದಂತೆ ಭಕ್ತರಿಗೆ ಸೂಚನೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಗಣ್ಯರ ಭೇಟಿ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವು ರಾಜಕೀಯ ನಾಯಕರು, ವಿವಿಧ ಕ್ಷೇತ್ರದ ಗಣ್ಯರು ಶುಕ್ರವಾರ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯಲಿದ್ದಾರೆ. ಸಾಗರೋಪಾದಿಯಲ್ಲಿ ನೆರೆಯುವ ಭಕ್ತರ ನಡುವೆ ಗಣ್ಯರಿಗೆ ದೇವಸ್ಥಾನ ಪ್ರವೇಶಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲೂ ಪೊಲೀಸರು ಕ್ರಮ ವಹಿಸಿದ್ದಾರೆ.

ಕಳೆದ ಮೂರು ಶುಕ್ರವಾರಗಳು ಹಾಗೂ ವರ್ಧಂತಿ ದಿನ ಸಾವಿರಾರು ಭಕ್ತರು ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ಪುನೀತರಾಗಿದ್ದಾರೆ. ಪ್ರತಿ ವಾರವೂ ದೇವಾಲಯವನ್ನು ವಿಶೇಷ ರೀತಿಯಲ್ಲಿ ಸಿಂಗರಿಸುವುದರ ಜೊತೆಗೆ ತಾಯಿ ಚಾಮುಂಡೇಶ್ವರಿ ಮೂರ್ತಿಯನ್ನು ವಿವಿಧ ದೇವತೆಗಳ ಅಲಂಕಾರದೊಂದಿಗೆ ಪೂಜಿಸಲಾಯಿತು. ಹಾಗಾಗಿ ಕಡೇ ಶುಕ್ರವಾರ ಚಾಮುಂಡಿಬೆಟ್ಟದಲ್ಲಿ ಹಬ್ಬದ ಸಡಗರ, ವೈಭವ ಇಮ್ಮಡಿಗೊಳ್ಳಲಿದೆ.

ಇಂದು ಚಾ.ನಗರ, ಮೈಸೂರು ಜಿಲ್ಲೆಗೆ ಕಂದಾಯ ಸಚಿವರ ಭೇಟಿ

ಮೈಸೂರು,ಆ.1(ಪಿಎಂ)- ಕಂದಾಯ ಸಚಿವ ಕೃಷ್ಣ ಬೈರೇಗೌಡ ಆ.2ರಂದು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ. ಬೆಳಗ್ಗೆ 8.15 ಬೆಂಗಳೂರು ನಿರ್ಗಮಿಸಿ ರಸ್ತೆ ಮೂಲಕ ಬೆಳಗ್ಗೆ 10.30ಕ್ಕೆ ಚಾಮರಾಜನಗರ ಜಿಲ್ಲೆಗೆ ಆಗಮಿಸಲಿದ್ದಾರೆ ನಂತರ ಬೆಳಗ್ಗೆ 10.30ರಿಂದ ಮಧ್ಯಾಹ್ನ 12ರವರೆಗೆ ಚಾಮರಾಜನಗರ ಜಿಲ್ಲೆಯ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಮಧ್ಯಾಹ್ನ 12ಕ್ಕೆ ಚಾಮರಾಜನಗರ ಜಿಲ್ಲೆಯಿಂದ ನಿರ್ಗಮಿಸಿ, ಮಧ್ಯಾಹ್ನ 1ಕ್ಕೆ ಮೈಸೂರಿಗೆ ಆಗಮಿಸಲಿದ್ದಾರೆ. ಬಳಿಕ ಮಧ್ಯಾಹ್ನ 1.30ರಿಂದ 3.30ರವರೆಗೆ ಮೈಸೂರು ಜಿಲ್ಲೆಯ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ.



ಕಬಿನಿ ಜಲಾಶಯದ ಮುಖ್ಯಭಾಗದಲ್ಲಿ ಸೋರಿಕೆ ಇಲ್ಲ; ನಾಲೆಯ ಸ್ಲೂಯಿಸ್ ವಾಲ್‌ನಲ್ಲಿ ಸೋರಿಕೆ ಇದೆ

ಸರಿಪಡಿಸಲು ಕ್ರಮ ವಹಿಸಲಾಗಿದೆ; ನೀರಾವರಿ ನಿಗಮದ ಅಧಿಕಾರಿಗಳ ಮಾಹಿತಿ

ಮೈಸೂರು, ಆ.1(ಎಸ್‌ಬಿಡಿ)- ಕಬಿನಿ ಬಲದಂಡೆ ನಾಲೆ ಪ್ರವೇಶದ್ವಾರದ ಸ್ಲೂಯಿಸ್ ವಾಲ್‌ಗಳಲ್ಲಿ ಹಲವು ವರ್ಷಗಳಿಂದ ಸೋರಿಕೆ ಉಂಟಾಗುತ್ತಿದ್ದು, ಇದರಿಂದ ಜಲಾಶಯಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



ಕಬಿನಿ ಜಲಾಶಯದಲ್ಲಿ ನೀರು ಸೋರಿಕೆಯಾಗುತ್ತಿರುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದರ ಬಗ್ಗೆ ಪತ್ರಿಕಾ ಪ್ರಕಟಣೆಯಲ್ಲಿ ಸ್ಪಷ್ಟನೆ ನೀಡಿರುವ ಅಧಿಕಾರಿಗಳು, ಕಬಿನಿ ಜಲಾಶಯದ ಮುಖ್ಯ ಭಾಗದಲ್ಲಿ ಯಾವುದೇ ಸೋರಿಕೆ ಇಲ್ಲ. ಆದರೆ ಕಬಿನಿ ಬಲದಂಡೆ ನಾಲೆ ಪ್ರವೇಶದ್ವಾರದ ಸ್ಲೂಯಿಸ್ ವಾಲ್‌ಗಳಲ್ಲಿ ಹಲವು ವರ್ಷಗಳಿಂದ ಸೋರಿಕೆಯಾಗುತ್ತಿದ್ದು, ತಜ್ಞರ ಸಮಿತಿಯು ಪರಿವೀಕ್ಷಣೆ ನಡೆಸಿ ವರದಿ ನೀಡಿರುತ್ತದೆ. ಜಲಾಶಯದ ನೀರಿನ ಮಟ್ಟ ಕಡಿಮೆಯಾದಾಗ ಸರಿಪಡಿಸಲು ಕ್ರಮ ವಹಿಸಲಾಗಿದೆ ಎಂದಿದ್ದಾರೆ.

ಸ್ಲೂಯಿಸ್ ವಾಲ್‌ನಲ್ಲಿ ಹಿಂದಿನ ಮೂರು ವರ್ಷಗಳಿಂದ ಸೋರಿಕೆ ಉಂಟಾಗುತ್ತಿದೆ. ಸೋರಿಕೆಯಿಂದ ಬರುವ ನೀರು ಸ್ವಚ್ಛವಾಗಿರುವುದನ್ನು ಗಮನಿಸಿ, ಇದರಿಂದ ಜಲಾಶಯದ ಸುರಕ್ಷತೆಗೆ ಯಾವುದೇ ಅಪಾಯ ಹಾಗೂ ಆತಂಕವಿಲ್ಲ ಎಂದು ಪರಿವೀಕ್ಷಣೆ ನಡೆಸಿದ ತಜ್ಞರು ತಮ್ಮ ವರದಿಯಲ್ಲಿ ಅಭಿಪ್ರಾಯಿಸಿದ್ದಾರೆ. ಅಲ್ಲದೆ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ಹಾಗೂ ವಿಡಿಯೋಗ್ರಫಿ ಮೂಲಕ ಸೋರಿಕೆಯನ್ನು ನಿಯಮಿತವಾಗಿ ಪರಿವೀಕ್ಷಿಸಲು ಸೂಚಿಸಿರುತ್ತಾರೆ.

ಅಂತೆಯೇ ಸಿಸಿ ಕ್ಯಾಮರಾ ಅಳವಡಿಸಿ ನಿಯಮಿತವಾಗಿ ಪರಿವೀಕ್ಷಣೆ ನಡೆಸಲಾಗುತ್ತಿದೆ. ಜಲಾಶಯದಲ್ಲಿ ನೀರಿನ ಸಂಗ್ರಹಣೆ ಹೆಚ್ಚಾದಂತೆ ಸ್ವಚ್ಛವಾದ ನೀರಿನ ಸೋರಿಕೆಯೂ ಹೆಚ್ಚಾಗುತ್ತಿದ್ದು, ಸಂಗ್ರಹಣೆ ಕಡಿಮೆಯಾದಂತೆ ಸೋರಿಕೆಯು ಕಡಿಮೆಯಾಗುವುದನ್ನು ಗಮನಿಸಲಾಗಿರುತ್ತದೆ. ಡ್ರಿಪ್ ನೋಡಲ್ ಅಧಿಕಾರಿ ಸಲಹೆಯಂತೆ ರಿಮೋಟ್ ಆಪರೇಟೆಡ್ ಅಂಡರ್ ವಾಟರ್ ರೋಬೋಟಿಕ್ ಪರಿವೀಕ್ಷಣೆ ಹಾಗೂ ಡೈವರ್ ಆಪರೇಟೆಡ್ ಅಂಡರ್ ವಾಟರ್ ವಿಡಿಯೋಗ್ರಫಿಯನ್ನು ಕೈಗೊಳ್ಳಲಾಗಿದೆ.

ಕಳೆದ ಜು.29ರಂದು ಸೋರುವಿಕೆಯನ್ನು ಸರಿಪಡಿಸಲು ಪರಿವೀಕ್ಷಣೆ ನಡೆಸಿದ ಮುಳುಗು ತಜ್ಞರ ತಂಡವು ಸದರಿ ವರದಿಯೊಂದಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿದೆ. ಅದನ್ನು ಪರಿಶೀಲಿಸಲಾಗಿದ್ದು, ಜಲಾಶಯದಲ್ಲಿ ನೀರಿನ ಸಂಗ್ರಹಣಾ ಮಟ್ಟವು ಕಡಿಮೆಯಾದ ನಂತರ ಫೆಬ್ರವರಿ ಹಾಗೂ ಮೇ ತಿಂಗಳಲ್ಲಿ ಈ ಕಾಮಗಾರಿಯನ್ನು ನುರಿತ ತಜ್ಞರ ಸಲಹೆಯೊಂದಿಗೆ ಕೈಗೊಳ್ಳಲಾಗುವುದು ಎಂದು ಕಾವೇರಿ ನೀರಾವರಿ ನಿಗಮ ನಿಯಮಿತ ನೀರಾವರಿ ವಲಯದ ಮುಖ್ಯ ಇಂಜಿನಿಯರ್ ಹಾಗೂ ಕಬಿನಿ ಮತ್ತು ವರುಣಾ ನಾಲಾ ವೃತ್ತದ ಅಧೀಕ್ಷಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕಬಿನಿ ಅಣೆಕಟ್ಟು ಸುಭದ್ರವಾಗಿದೆ'

● ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಯ ● ಕೆಲ ಮಾಧ್ಯಮಗಳ ವರದಿಗೆ ಪ್ರತಿಕ್ರಿಯೆ

ಬೆಂಗಳೂರು, ಆ.1(ಕೆಎಂಶಿ)- ಕಬಿನಿ ಅಣೆಕಟ್ಟು ಬಿರುಕು ಬಿಟ್ಟಿಲ್ಲ, ನೀರು ಸೋರಿಕೆಯಾಗುತ್ತಿಲ್ಲ. ಅಣೆಕಟ್ಟೆಗೆ ಯಾವುದೇ ತರಹದ ಅಪಾಯವಾಗಿಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬಿನಿ ಅಣೆಕಟ್ಟು ಬಿರುಕು ಬಿಟ್ಟಿದೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಸುದ್ದಿಯಿಂದ ನದಿ ಪಾತ್ರದ ಜನರು ಆತಂಕಕ್ಕೆ ಒಳಗಾಗಿದ್ದಾರೆ. ಕಬಿನಿ ಅಣೆಕಟ್ಟು ಸುರಕ್ಷಿತವಾಗಿದೆ. ನದಿ ಪಾತ್ರದ ಜನರು ಯಾವುದೇ ಆತಂಕಕ್ಕೆ ಒಳಗಾಗಬೇಕಿಲ್ಲ. ಅಣೆಕಟ್ಟು ಸುರಕ್ಷತೆಯ ಬಗ್ಗೆ ಸರ್ಕಾರಕ್ಕೆ ಕಾಳಜಿಯಿದೆ ಎಂದರು. ನೀರಿನ ಹರಿವು ಹೆಚ್ಚಿದ್ದು ನದಿ ಪಾತ್ರಗಳಲ್ಲಿ ಜನರು ಅನಗತ್ಯವಾಗಿ ಓಡಾಡದೆ ಸುರಕ್ಷಿತವಾಗಿ ಇರಬೇಕು. ಗುರುವಾರ ಸಂಜೆ ವೇಳೆಗೆ ತಮಿಳುನಾಡಿಗೆ 100 ಟಿಎಂಸಿಗೂ ಹೆಚ್ಚು ನೀರು ಹರಿದು ಹೋಗಿದೆ ಎಂದು ಹೇಳಿದರು. ಕೇರಳ ರಾಜ್ಯ ಸಂಕಷ್ಟದಲ್ಲಿದ್ದು ನಮ್ಮ ರಾಜ್ಯದ ಸಂಪೂರ್ಣ ಸಹಕಾರ ಅವರಿಗಿದೆ. ನಾವು ಕೇರಳ ಹಾಗೂ ಕೇರಳಿಗರ ಜೊತೆಗಿದ್ದೇವೆ. ಯಾವುದೇ ರೀತಿಯ ಸಹಾಯ ಮಾಡಲೂ ತಯಾರಿದ್ದೇವೆ. ಮೃತರ ಆತ್ಮಗಳಿಗೆ ಶಾಂತಿ ದೊರಕಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು.

ಸಂತ್ರಸ್ತರಿಗೆ ತಕ್ಷಣ ಪರಿಹಾರ ಬಿಡುಗಡೆಗೊಳಿಸಿ

- ಸರ್ಕಾರಕ್ಕೆ ಮಾಜಿ ಡಿಸಿಎಂ ಅಶ್ವಥ್ ನಾರಾಯಣ ಆಗ್ರಹ
- ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ, ಪರಿಶೀಲನೆ



ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ ಕರ್ತೋಜೆ ಹೆದ್ದಾರಿ ಪರಿಶೀಲಿಸಿದರು.

ಸಿದ್ದಾಪುರ, ಆ.1– ಮಳೆ ಹಾನಿ ಸಂತ್ರಸ್ತರಿಗೆ ಸರ್ಕಾರ ತಕ್ಷಣ ಪರಿಹಾರ ಬಿಡುಗಡೆ ಮಾಡಬೇಕು ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ ಆಗ್ರಹಿಸಿದರು.

ಬಿಜೆಪಿ ಮುಖಂಡರ ನಿಯೋಗದೊಂದಿಗೆ ಪ್ರವಾಹ ಪೀಡಿತ ಪ್ರದೇಶಗಳಾದ ಸಿದ್ದಾಪುರ, ಕರಡಿಗೋಡು, ಸ್ವರ್ಣಮಾಲ ಕಾಳಜಿ ಕೇಂದ್ರ, ಕಕ್ಕಬ್ಬೆ, ಹೆದ್ದಾರಿ ಬದಿ ಭೂ ಕುಸಿತದ ಆತಂಕವಿರುವ ಕರ್ತೋಜೆ, ಜಿಲ್ಲಾಡಳಿತ ಭವನದ ತಡೆಗೋಡೆ ಮತ್ತಿತರ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಳೆ ಹಾನಿ ಸಂತ್ರಸ್ತರಿಗೆ ತಕ್ಷಣ ಪರಿಹಾರ ನೀಡಲಾಗುತ್ತಿತ್ತು. ಆದರೆ, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಪರಿಹಾರ ನೀಡಲು ವಿಳಂಬ ಮಾಡುತ್ತಿದೆ. ಇದು ಸರಿಯಾದ ಕ್ರಮವಲ್ಲ. ಸರ್ಕಾರ ಸಂತ್ರಸ್ತರಿಗೆ ಶೀಘ್ರ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಶಾಶ್ವತ ಸೂರು ಒದಗಿಸಲಿ: ಕಾವೇರಿ ನದಿ ದಡದ ಪ್ರವಾಹ ಸಂತ್ರಸ್ತರಿಗಾಗಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾಗ ಗುರುತಿಸಲಾಗಿತ್ತು. ಆದರೆ, ಆ ವೇಳೆ ವಾಸ ಸ್ಥಳ ಬಿಟ್ಟು ತೆರಳಲು ಸಂತ್ರಸ್ತರು ಮುಂದಾಗಲಿಲ್ಲ. ಇದೀಗ ಮತ್ತೆ ಪ್ರವಾಹ ಬಂದಿದ್ದು, ಸಂತ್ರಸ್ತರು ಶಾಶ್ವತ ಪುನರ್ವಸತಿ ಒದಗಿಸಿದಲ್ಲಿ ತೆರಳುವುದಾಗಿ ಹೇಳುತ್ತಿದ್ದಾರೆ. ಸರ್ಕಾರ ಕೂಡಲೇ ಶಾಶ್ವತ ಸೂರಿನ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ವಿಶೇಷ ಪ್ಯಾಕೇಜ್ ನೀಡಲಿ: ಕೊಡಗು ಜಿಲ್ಲೆಯಲ್ಲಿ ಪ್ರವಾಹ, ಪ್ರಕೃತಿ ವಿಕೋಪ ಸಂದರ್ಭ ಸರ್ಕಾರ ಸಂತ್ರಸ್ತರ ನೆರವಿಗೆ ಬರಬೇಕಾಗಿದೆ. ಅಲ್ಲದೆ, ವಿಶೇಷ ಪ್ಯಾಕೇಜ್ ಘೋಷಣೆ ಮಾಡುವ ಮೂಲಕ ತುರ್ತು ಪರಿಹಾರ ನೀಡಲು ಮುಂದಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮನವಿ ಮಾಡಿದರು.

ನಂತರ ಡಾ.ಅಶ್ವಥ್ ನಾರಾಯಣ, ಬಿಜೆಪಿ ಮುಖಂಡರು, ಸಿದ್ದಾಪುರದಲ್ಲಿರುವ ಕಾಳಜಿ ಕೇಂದ್ರದಲ್ಲಿ ನಿರಾಶ್ರಿತರನ್ನು ಭೇಟಿ ಮಾಡಿ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಿದರು. ಇದೇ ವೇಳೆ ಕೃಷಿಕರು, ಕಕ್ಕಬ್ಬೆ ವ್ಯಾಪ್ತಿಯಲ್ಲಿ ಅಧಿಕ ಮಳೆಯಾಗಿದೆ. ಮನೆಗಳು ಮತ್ತು ಕೃಷಿ ಫಸಲಿಗೂ ಹಾನಿಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತಕ್ಷಣ ಪರಿಹಾರ ಒದಗಿಸಿ ಕೊಡುವಂತೆ ಮನವಿ ಮಾಡಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಿರಾಜಪೇಟೆ ತಾಲೂಕು ಅಧ್ಯಕ್ಷ ಸುವಿನ್ ಗಣಪತಿ, ಸಿದ್ದಾಪುರ ಶಕ್ತಿ ಕೇಂದ್ರದ ಅಧ್ಯಕ್ಷ ರೂಪೇಶ್, ಪಕ್ಷ ಪ್ರಮುಖ ವಿ.ಕೆ. ಲೋಕೇಶ್ ಮತ್ತಿತರರು ಹಾಜರಿದ್ದರು.



ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ ಅವರು ಬಿಜೆಪಿ ಮುಖಂಡರ ನಿಯೋಗದೊಂದಿಗೆ ಸಿದ್ದಾಪುರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು. ಮಾಜಿ ಶಾಸಕ ಕೆ.ಜಿ.ಬೋಪಯ್ಯ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಿರಾಜಪೇಟೆ ತಾಲೂಕು ಅಧ್ಯಕ್ಷ ಸುವಿನ್ ಗಣಪತಿ ಇದ್ದರು.

ಹಾರಂಗಿ ನಾಲೆಗೆ ಮಣ್ಣು ಕುಸಿತ



ಮಣ್ಣು ಕುಸಿದ ಮದಲಾಪುರ ಸಮೀಪದ ಹಾರಂಗಿ ಮುಖ್ಯ ನಾಲೆಯನ್ನು ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಪರಿಶೀಲಿಸಿದರು.

ಮಡಿಕೇರಿ, ಆ.1–ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮದಲಾಪುರ ಸಮೀಪದ ಹಾರಂಗಿ ಮುಖ್ಯ ನಾಲೆಗೆ ಮಳೆಯಿಂದ ಮಣ್ಣು ಕುಸಿದು ಬಿದ್ದಿದೆ.

ಹಲವು ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಮಣ್ಣು ಕುಸಿತಗೊಂಡಿದ್ದು, ಸ್ಥಳಕ್ಕೆ ಶಾಸಕ ಡಾ.ಮಂತರ್‌ಗೌಡ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸ್ಥಳದಲ್ಲಿದ್ದ ನೀರಾವರಿ ನಿಗಮದ ಹಾರಂಗಿ ಜಲಾಶಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಶಾಸಕರು, ಶೀಘ್ರ ಸಾರ್ವಜನಿಕರು ಹಾಗೂ ರೈತರಿಗೆ ಯಾವುದೇ ತೊಂದರೆ ಆಗದಂತೆ ಮಣ್ಣು ತೆರವುಗೊಳಿಸುವಂತೆ ಸೂಚನೆ ನೀಡಿದರು. ಈ ಹಿನ್ನೆಲೆಯಲ್ಲಿ ಹಾರಂಗಿ ಜಲಾಶಯದ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸ್ಥಳ ಪರಿಶೀಲಿಸಿ ಮಳೆ ನಡುವೆ ಮಣ್ಣು ತೆರವು ಕಾರ್ಯ ಆರಂಭಿಸಿದರು.

ಹಾರಂಗಿ ಜಲಾಶಯ ಅಧಿಕಾರಿ ರಘುಪತಿ, ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರಾದ ಐ.ಕೆ.ಪುಟ್ಟಸ್ವಾಮಿ, ಸಿದ್ದರಾಜು, ಕೂಡಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಟಿ.ಗಿರೀಶ್ ಕುಮಾರ್, ಸದಸ್ಯ ಟಿ.ಪಿ.ಹಮೀದ್, ಎಚ್.ಎಸ್.ರವಿ, ರತ್ನಮ್ಮ, ನೀರಾವರಿ ಸಲಹಾ ಸಮಿತಿ ಸದಸ್ಯ ಉಮಾ ಪ್ರಭಾಕರ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಬಿ.ಡಿ.ಅಣ್ಣಯ್ಯ, ರೈತ ಮುಖಂಡರಾದ ಗಣೇಶ್, ಚಿದಾನಂದ, ಸ್ವಾಮಿ, ಪಾಂಡು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ಇಂದು ಕೊಡಗಿಗೆ ನಿಖಿಲ್ ಭೇಟಿ

ಮಡಿಕೇರಿ: ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆ.2ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಿ ಮಳೆ ಹಾನಿ ಪ್ರದೇಶಗಳನ್ನು ವೀಕ್ಷಿಸಲಿದ್ದಾರೆ. ಕುಶಾಲನಗರದ ಪ್ರವಾಹ ಪೀಡಿತ ಕುವೆಂಪು ಬಡಾವಣೆ, ಸಾಯಿ ಬಡಾವಣೆಗಳನ್ನು ಪರಿಶೀಲಿಸಲಿದ್ದು, ಬಳಿಕ ಸೋಮವಾರಪೇಟೆ ಕಾಳಜಿ ಕೇಂದ್ರಕ್ಕೂ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಲಿದ್ದಾರೆ ಎಂದು ಜಿಲ್ಲಾ ಜೆಡಿಎಸ್ ಮುಖಂಡರು ತಿಳಿಸಿದ್ದಾರೆ.



ನಿಖಿಲ್

ನಾಳೆ ಗೋಣಿಕೊಪ್ಪಲಿನಲ್ಲಿ ವಿಶೇಷ ಕಾರ್ಯಾಗಾರ

ಮಡಿಕೇರಿ, ಆ.1–ಕೊಡಗಿನ ಪರಿಸರಕ್ಕೆ ಪೂರಕವಾದ ಮತ್ತು ಸ್ಥಳೀಯವಾಗಿ ಲಭ್ಯವಾಗುವ ಕಚ್ಚಾ ವಸ್ತುಗಳನ್ನು ಬಳಸಿ ಉದ್ದಿಮೆ ಆರಂಭಿಸಲು ಯುವ ಸಮೂಹಕ್ಕೆ ಮಾರ್ಗದರ್ಶನ ಮತ್ತು ಪ್ರೇರಣೆ ನೀಡುವ ನಿಟ್ಟಿನಲ್ಲಿ ಕೊಡಗು ಹಿಂದು ಎಕನಾಮಿಕ್ ಫೋರಂ ಮತ್ತು ಲಘು ಉದ್ಯೋಗ ಭಾರತಿ ಸಂಸ್ಥೆ ಮೈಸೂರು ವಿಭಾಗದ ವತಿಯಿಂದ ಆ.3ರಂದು ಗೋಣಿಕೊಪ್ಪಲಿನಲ್ಲಿ ವಿಶೇಷ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಫೋರಂನ ಕಾರ್ಯಾಧ್ಯಕ್ಷ ಟಿ.ಕೆ.ಸುಧೀರ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಗೋಣಿಕೊಪ್ಪಲಿನ ಪರಿಮಳ ಮಂಗಳ ವಿಹಾರದಲ್ಲಿ ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.30ರ ವರೆಗೆ ಯುವ ಉದ್ಯಮಿಗಳಿಗೆ ಕಾರ್ಯಾಗಾರದ ಮೂಲಕ ಉದ್ದಿಮೆಗಳ ಕುರಿತು ಅಗತ್ಯ ಮಾಹಿತಿ ಒದಗಿಸಲಾಗುವುದು ಎಂದು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಕೊಡಗು ಹಿಂದು ಎಕನಾಮಿಕ್ ಫೋರಂ ಕಾರ್ಯಾಧ್ಯಕ್ಷ ಟಿ.ಕೆ.ಸುಧೀರ್ ಮಾತನಾಡಿದರು.

ಕಾರ್ಯಾಗಾರದಲ್ಲಿ ಸಿಎಸ್ಐಆರ್ ಮತ್ತು ಸಿಎಫ್‌ಟಿಆರ್‌ಐನ ಮುಖ್ಯ ವಿಜ್ಞಾನಿ ಡಾ.ಪುಷ್ಪಾ ಎಸ್.ಮೂರ್ತಿ, ಕೃಷಿ ಉತ್ಪನ್ನಗಳು, ಸಾಂಬಾರ ಪದಾರ್ಥ ಮತ್ತು ಪರಿಮಳ ತಂತ್ರಜ್ಞಾನ ಕುರಿತು ಮಾಹಿತಿ ನೀಡಲಿದ್ದಾರೆ. ಸಿಎಸ್ಐಆರ್ ಮತ್ತು ಸಿಎಫ್‌ಟಿಆರ್‌ಐನ ವಿಜ್ಞಾನಿ ಡಾ.ನೇಗಿ ಪಿ.ಎಸ್, ಹಣ್ಣು–ಹಂಪಲು ತಂತ್ರಜ್ಞಾನದ ಬಗ್ಗೆ ವಿವರ ನೀಡಲಿದ್ದಾರೆ ಎಂದರು.

ಕೊಡಗು ವಿವಿಯ ಉಪಕುಲಪತಿ ಡಾ. ಅಶೋಕ್ ಆಲೂರು, ಕೃಷಿ ಮತ್ತು ಆಹಾರ ವಿಶೇಷತೆ ತಿಳಿಸಲಿದ್ದಾರೆ. ಖಾದಿ ಗ್ರಾಮೋದ್ಯೋಗ ಮಂಡಳಿಯ ಸಿಇಓ ಹೆಚ್.ಆರ್. ರಾಜಪ್ಪ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ಬಗ್ಗೆ ಮಾಹಿತಿ ಒದಗಿಸಲಿದ್ದಾರೆ ಹಾಗೂ ಎಸ್‌ಐಡಿಬಿಐನ ಡಿಜಿಎಂ ಸುಬ್ಬರಾವ್ ಶ್ರೀಪತಿ, ಎಂಎಸ್ಎಂಇ ಕುರಿತು ಮಾಹಿತಿ ನೀಡಲಿದ್ದಾರೆಂದು ವಿವರಿಸಿದರು.

ಕಾರ್ಯಾಗಾರದಲ್ಲಿ ಸಂಸದ ಯದುವೀರ್, ಶಾಸಕರಾದ ಎ.ಎಸ್.ಪೊನ್ನಣ್ಣ ಡಾ.ಮಂತರ್ ಗೌಡ, ಎಂಎಲ್‌ಸಿ ಸುಜಾ ಕುಶಾಲಪ್ಪ ಮತ್ತಿತರರು ಪಾಲ್ಗೊಳ್ಳಲಿದ್ದಾರೆಂದು ಹೇಳಿದರು.

ಕೊಡಗು ಹಿಂದು ಎಕನಾಮಿಕ್ ಫೋರಂನ ಅಧ್ಯಕ್ಷ ಡಾ.ಶ್ಯಾಂ ಅಪ್ಪಣ್ಣ ಮಾತನಾಡಿ, ಕೊಡಗು ಜಿಲ್ಲೆಯ ಉತ್ಸಾಹಿ ಯುವ ಉದ್ಯಮಿಗಳನ್ನು ಒಂದೇ ವೇದಿಕೆಯಡಿ ತರುವ ಮೂಲಕ, ಅವರಿಗೆ ಸ್ಥಳೀಯವಾಗಿ ಆರಂಭಿಸಬಹುದಾದ ಉದ್ದಿಮೆಗಳ ಬಗ್ಗೆ ಮಾಹಿತಿ ನೀಡುವುದು ಕಾರ್ಯಾಗಾರದ ಉದ್ದೇಶ ಎಂದು ತಿಳಿಸಿದರು.

ಟ್ರಾನ್ಸ್‌ಫಾರ್ಮರ್‌ಗೆ ಜೀಪ್ ಡಿಕ್ಕಿ

ಮಡಿಕೇರಿ, ಆ.1–ಜೀಪ್‌ನ ಬ್ರೇಕ್ ವಿಫಲಗೊಂಡು ವಿದ್ಯುತ್ ಟ್ರಾನ್ಸ್‌ಫಾರ್ಮರ್ ಕಂಬಕ್ಕೆ ಡಿಕ್ಕಿ ಹೊಡೆದು ಮಗುಚಿಕೊಂಡ ಘಟನೆ ಪೊನ್ನಂಪೇಟೆಯಿಂದ ಕಾನೂರಿಗೆ ತೆರಳುವ ಮಾರ್ಗದ ಮುಗುಟಗೇರಿ ಮುಖ್ಯ ರಸ್ತೆಯಲ್ಲಿ ಗುರುವಾರ ನಡೆದಿದೆ.

ಜೀಪ್ ಮಾಲೀಕ ಹೊಟ್ಟೆಮಾಡ ಮೊಣ್ಣಪ್ಪ ಹಾಗೂ ಚಿನ್ನ ಎಂಬವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಇವರಿಗೆ ಪೊನ್ನಂಪೇಟೆಯ ರಾಮಕೃಷ್ಣ ಆಶ್ರಮ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಪೊನ್ನಂಪೇಟೆಯಿಂದ ಶ್ರೀಮಂಗಲ ಮಾರ್ಗವಾಗಿ ಕುಟ್ಟಕ್ಕೆ ತೆರಳುವ ರಸ್ತೆ ಮಳೆಯಿಂದಾಗಿ ಕುಸಿದಿರುವ ಹಿನ್ನೆಲೆಯಲ್ಲಿ ವಾಹನಗಳು ಕಾನೂರು ಮಾರ್ಗವಾಗಿ ಸಂಚರಿಸುತ್ತಿರುವುದರಿಂದ ಈ ರಸ್ತೆಯಲ್ಲಿ ವಾಹನಗಳ ದಟ್ಟಣೆ ಅಧಿಕವಾಗಿದೆ. ಸ್ಥಳಕ್ಕೆ ಗೋಣಿಕೊಪ್ಪ ಸೆಸ್ಕ್ ಜೆಇ ಹೇಮಂತ್ ಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು.



ಆ.5ಕ್ಕೆ ಮುಖ್ಯಮಂತ್ರಿ ಮನೆ ಚಲೋ ಕಾರ್ಯಕ್ರಮ



ವಿರಾಜಪೇಟೆ ಕಟ್ಟಡ ಕಾರ್ಮಿಕ ಸಂಘದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಎ.ಸಿ.ಸಾಬು ಮಾತನಾಡಿದರು.

ವಿರಾಜಪೇಟೆ, ಆ.1–ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯಧನ ಕಡಿತ ಆದೇಶ ವಾಪಸ್ ಪಡೆಯಬೇಕು ಹಾಗೂ ಸೌಲಭ್ಯಗಳಿಗೆ ಸಲ್ಲಿಸಿರುವ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಬೇಕೆಂದು ಆಗ್ರಹಿಸಿ ಆ.5ರಂದು ಮುಖ್ಯಮಂತ್ರಿ ಮನೆ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಟ್ಟಡ ನಿರ್ಮಾಣ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ಎ.ಸಿ.ಸಾಬು ಹೇಳಿದರು.

ಪಟ್ಟಣದ ಕಟ್ಟಡ ಕಾರ್ಮಿಕ ಸಂಘದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕೊಡಗಿನಿಂದ 150ಕ್ಕೂ ಹೆಚ್ಚು ಕಾರ್ಮಿಕರು ಹಾಗೂ ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ ಸೇರಿದಂತೆ ವಿವಿಧ ಸಂಘಟನೆಗಳು ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಕಾರ್ಮಿಕರಿಗೆ 19 ಸೌಲಭ್ಯ ಘೋಷಿಸಲಾಗಿದೆ. ಇದರಲ್ಲಿ 11 ಸೌಲಭ್ಯಗಳು ಮಾತ್ರ ಜಾರಿಗೊಳಿಸಲಾಗಿದೆ. ನೈಜ ಕಾರ್ಮಿಕರ ಹೊಸ ಮತ್ತು ಮರು ನೋಂದಣಿ ಅರ್ಜಿಗಳನ್ನು ಕಾರಣವಿಲ್ಲದೆ ಸರ್ಕಾರ ತಿರಸ್ಕರಿಸಬಾರದು. ಪಿಂಚಣಿದಾರರ ಅರ್ಜಿ ಸಲ್ಲಿಕೆ ತಾಂತ್ರಿಕ ತೊಂದರೆಗಳನ್ನು ನಿವಾರಿಸುವ ಮೂಲಕ ಶೀಘ್ರ ಪಿಂಚಣಿ ಹಣ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಸಹಾಯಧನ ನೀಡಬೇಕು ಹಾಗೂ ಕಾರ್ಮಿಕ ಕಲ್ಯಾಣ ಮಂಡಳಿ ಪುನರಚಿಸಿ ಕೇಂದ್ರ ಕಾರ್ಮಿಕ ಸಂಘಗಳ ಪ್ರತಿನಿಧಿಗಳನ್ನು ನೇಮಿಸಬೇಕು. ಜೊತೆಗೆ ವಿವಿಧ 8 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಖ್ಯಮಂತ್ರಿ ಮನೆ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎಂ.ಸುಬ್ರಮಣಿ, ಉಪ ಕಾರ್ಯದರ್ಶಿ ಖಾಶಿಂ, ವಿರಾಜಪೇಟೆ ನಗರಾಧ್ಯಕ್ಷ ಕೆ.ಕೆ. ಹರಿದಾಸ್, ಮಹಿಳಾ ಸಂಘಟನೆಯ ಧನಲಕ್ಷ್ಮಿ, ದಮಾಯಂತಿ, ಸದಸ್ಯ ವಿ.ಆರ್. ರಾಮು ಮತ್ತಿತರರು ಹಾಜರಿದ್ದರು.

ಇಂದು ಚಾಮುಂಡೇಶ್ವರಿ ಪೂಜೆ

ಚಾಮರಾಜನಗರ, ಆ.1–ಚಾಮುಂಡೇಶ್ವರಿ ಪೂಜಾ ಸಮಿತಿ ವತಿಯಿಂದ ಪ್ರಥಮ ವರ್ಷದ ಕೊನೆಯ ಆಷಾಢ ಶುಕ್ರವಾರದ ಪ್ರಯುಕ್ತ ನಗರದ ಮಾರಮ್ಮ ದೇವಸ್ಥಾನ ಮುಂಭಾಗ ಮಧ್ಯಾಹ್ನ 12 ಗಂಟೆಗೆ ಚಾಮುಂಡೇಶ್ವರಿ ಪೂಜೆ ಮತ್ತು ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೇರಳದಿಂದ ತವರಿಗೆ ಮರಳಿದ ಕಾರ್ಮಿಕರು

ವಯನಾಡು ಭೂ ಕುಸಿತದಲ್ಲಿ ಸಿಲುಕಿದ್ದವರು ಸುರಕ್ಷಿತವಾಗಿ ಸ್ವಗ್ರಾಮಗಳಿಗೆ ವಾಪಸ್



ವಯನಾಡು ಭೂ ಕುಸಿತದಲ್ಲಿ ಸಿಲುಕಿದ್ದ ಗುಂಡ್ಲುಪೇಟೆ ತಾಲೂಕಿನ ಕೋಡಹಳ್ಳಿ ಗ್ರಾಮದವರನ್ನು ವಾಹನದ ಮೂಲಕ ಕರೆತಂದಿರುವುದು.

ಚಾಮರಾಜನಗರ, ಆ.1– ಕೇರಳದ ವಯನಾಡು ಜಿಲ್ಲೆಯ ಚೂರಲ್‌ಮಲ್, ಮುಂಡಕ್ಕೈ, ಮೇಪ್ಪಾಡಿಯ ಪ್ರದೇಶದಲ್ಲಿ ಉಂಟಾದ ಭೂ ಕುಸಿತದಲ್ಲಿ ಸಿಲುಕಿಕೊಂಡು ರಕ್ಷಣೆ ಮಾಡಲಾಗಿರುವ ಜಿಲ್ಲೆಯ ಕಾರ್ಮಿಕರನ್ನು ತವರಿಗೆ ಮರಳಿ ಕರೆತರಲಾಯಿತು.

ದುರಂತದಲ್ಲಿ ಸಿಲುಕಿ ರಕ್ಷಣೆ ಮಾಡಲಾಗಿರುವ ಜಿಲ್ಲೆಯ ಕಾರ್ಮಿಕರನ್ನು ವಯನಾಡಿನ ಸೇಂಟ್ ಜೋಸೆಫ್ ಶಾಲೆ ಹಾಗೂ ಮೇಪ್ಪಾಡಿಯ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರದಲ್ಲಿ ಇರಿಸಲಾಗಿದ್ದು, ಅವರನ್ನು ಜಿಲ್ಲೆಗೆ ಸುರಕ್ಷಿತವಾಗಿ ಕರೆದುಕೊಂಡು ಬರಲಾಗುತ್ತಿದೆ.

ಈಗಾಗಲೇ ಗುಂಡ್ಲುಪೇಟೆ ತಾಲೂಕಿನ ತ್ರಿಯಂಬಕಪುರದ ಸ್ವಾಮಿ ಅವರನ್ನು ಸುರಕ್ಷಿತವಾಗಿ ಅವರ ಮನೆಗೆ ಕರೆದುಕೊಂಡು ಬರಲಾಗಿದೆ. ಗುರುವಾರ ಇನ್ನೂ 6 ಕಾರ್ಮಿಕರನ್ನು ಕರೆದುಕೊಂಡು ಬರಲಾಗುವುದು.

ಕೇರಳದ ಮೇಪಾಡಿ ಗ್ರಾಮದ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಆರು ನಿರಾಶ್ರಿತರನ್ನು ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲೂಕಿನ ಸ್ವಗ್ರಾಮಗಳಿಗೆ ತಂದು ಬಿಡಲಾಗಿದೆ ಎಂದು ಗುಂಡ್ಲುಪೇಟೆ ತಹಸೀಲ್ದಾರ್ ಟಿ.ರಮೇಶ್ ಬಾಬು ಮಾಹಿತಿ ನೀಡಿದರು.

ಗುಂಡ್ಲುಪೇಟೆ ತಾಲೂಕಿನ ಕೋಡಹಳ್ಳಿ ಗ್ರಾಮದ ನಾಗಶೆಟ್ಟಿ, ಗೌರಮ್ಮ, ದಿವ್ಯಾ ಹಾಗೂ ಚಾಮರಾಜನಗರ ತಾಲೂಕಿನ ಜಯಶ್ರೀ, ಮಂಜುಳಾ, ಸಿದ್ದರಾಜು ಅವರನ್ನು ಖಾಸಗಿ ವಾಹನದ ಮೂಲಕ ಕರೆತಂದು ಸ್ವಗ್ರಾಮಕ್ಕೆ ಬಿಡುವ ಕೆಲಸವನ್ನು ಜಿಲ್ಲಾಡಳಿತದ ವತಿಯಿಂದ ಮಾಡಲಾಗಿದೆ ಎಂದು ತಿಳಿಸಿದರು.

ನೆಲಂಬೂರಲ್ಲಿ ರಾಜೇಂದ್ರ ಶವ ಪತ್ತೆ

ವಯನಾಡಿನ ಚೂರಲ್ ಮಲಾದಲ್ಲಿ ನೀರಿನಲ್ಲಿ ಕೊಚ್ಚಿ ಹೋಗಿದ್ದ ಚಾಮರಾಜನಗರ ಮೂಲದ ರಾಜೇಂದ್ರ(50) ಅವರ ಶವ ಕೊಯಿಕ್ಕೂಡು ಸಮೀಪದ ನೆಲಂಬೂರಿನಲ್ಲಿ ಬುಧವಾರ ರಾತ್ರಿ ಪತ್ತೆಯಾಗಿದೆ.

ಅವರ ಪತ್ನಿ ರತ್ನಮ್ಮ ಸಹ ಮೃತಪಟ್ಟಿದ್ದಾರೆಂದು ಹೇಳಲಾಗಿದ್ದು, ಅವರ ಶವ ಇನ್ನೂ ಸಿಕ್ಕಿಲ್ಲ ರಾಜೇಂದ್ರ ತಂದೆ ಚಾಮರಾಜನಗರ ತಾಲೂಕಿನ ಚಿಕ್ಕಮೋಳೆಯವರು. ಇವರ ಕುಟುಂಬದವರು ಹಲವು ವರ್ಷಗಳ ಹಿಂದೆ ಚೂರಲ್ ಮಲಾದ ಟೀ ಎಸ್ಟೇಟ್‌ಗೆ ತೆರಳಿ ಗಾರೆ ಕೆಲಸ ಮಾಡಿಕೊಂಡಿದ್ದರು. ರಾಜೇಂದ್ರ ಪತ್ನಿ ಚಾಮರಾಜನಗರ ತಾಲೂಕಿನ ಇರಸವಾಡಿಯವರು.

ರಾಜೇಂದ್ರ ಆರು ತಿಂಗಳ ಹಿಂದೆ ಗೃಹಪ್ರವೇಶ ಮಾಡಿದ್ದ ಮನೆ ಕೊಚ್ಚಿ ಹೋಗಿದೆ. ಈ ದಂಪತಿಗೆ ಮಕ್ಕಳಿರಲಿಲ್ಲ. ರಾಜೇಂದ್ರ ಶವ ಬುಧವಾರ ರಾತ್ರಿ ನೆಲಂಬೂರು ಬಳಿ ಪತ್ತೆಯಾಗಿದ್ದು, ಶವವನ್ನು ಮೇಪ್ಪಾಡಿಯಲ್ಲೇ ಅಂತ್ಯಕ್ರಿಯೆ ಮಾಡಲಾಯಿತು.

ಜಿಲ್ಲೆಯಿಂದ ಕೇರಳದ ಕಾಫಿ, ಟೀ ಎಸ್ಟೇಟ್‌ಗಳಿಗೆ ಕೂಲಿಗೆ ತೆರಳಿ ಹಲವು ವರ್ಷಗಳಿಂದ ದುಡಿಯುತ್ತಿದ್ದ ಹಲವಾರು ಕೂಲಿ ಕಾರ್ಮಿಕರು, ಕೇರಳದ ದುರಂತದಲ್ಲಿ ಸಿಲುಕಿಕೊಂಡು ಸಾಕಷ್ಟು ಸಂಕಷ್ಟಗಳನ್ನು ಎದುರಿಸಿ ಈಗ ಮರಳಿ ತವರಿಗೆ ಬರುತ್ತಿದ್ದಾರೆ.

ನಿವೃತ್ತ ಸಬ್ ಇನ್ಸ್‌ಪೆಕ್ಟರ್‌ಗೆ ಸನ್ಮಾನ...



ಗುಂಡ್ಲುಪೇಟೆ ಪಟ್ಟಣ ಪೊಲೀಸ್ ಠಾಣೆಯ ನಿವೃತ್ತ ಸಬ್‌ಇನ್ಸ್‌ಪೆಕ್ಟರ್ ಶಿವಶಂಕರಪ್ಪ ಅವರನ್ನು ಸನ್ಮಾನಿಸಲಾಯಿತು. ಇನ್ಸ್‌ಪೆಕ್ಟರ್ ಪರಶಿವಮೂರ್ತಿ, ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌಡ, ಸಿಬ್ಬಂದಿ ಇದ್ದರು.

ಭಾರೀ ವಾಹನಗಳ ಸಂಚಾರ ನಿರ್ಬಂಧ

ಚಾಮರಾಜನಗರ, ಆ.1–ಮಳೆಯಿಂದ ಹಾನಿಗೊಳಗಾಗಿರುವ ಆಕಾಶಪಾಳ್ಯಂ ಮಾರ್ಗದ ರಸ್ತೆ ದುರಸ್ತಿ ಹಿನ್ನೆಲೆಯಲ್ಲಿ ಭಾರೀ ಸರಕು ಸಾಗಣೆ ವಾಹನಗಳ ಸಂಚಾರವನ್ನು ಆ.4ರವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ (ಊಟಿ–ಗೂಡಲೂರು)ಯಲ್ಲಿ ಅಗತ್ಯ ವಸ್ತುಗಳ ಸಾಗಣೆ, ಅಗ್ನಿಶಾಮಕ ವಾಹನ, ಅಂಬುಲೆನ್ಸ್, ಸರ್ಕಾರಿ ಮತ್ತು ಖಾಸಗಿ ಬಸ್, ಎಲ್ಲಾ ಲಘು ವಾಹನಗಳನ್ನು ಹೊರತುಪಡಿಸಿ, ಉಳಿದಂತೆ ಭಾರೀ ಸರಕು ಸಾಗಣೆ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶ ಹೊರಡಿಸಿದ್ದಾರೆ.

ಪ್ರವಾಹ ಪೀಡಿತ ಗ್ರಾಮಗಳಿಗೆ ಡಿಸಿ, ಎಸ್‌ಪಿ ಭೇಟಿ, ಪರಿಶೀಲನೆ



ಕೊಳ್ಳೇಗಾಲ ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಧಿಕಾರಿಗಳಿಂದ ಮಾಹಿತಿ ಪಡೆದರು.



ಕೊಳ್ಳೇಗಾಲ ತಾಲೂಕಿನ ಹಂಪಾಪುರ ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಎ.ಆರ್. ಕೃಷ್ಣಮೂರ್ತಿ ಪ್ರವಾಹ ನೀರಿನಲ್ಲಿ ತೆರಳಿ ಗ್ರಾಮಸ್ಥರ ಅಹವಾಲು ಆಲಿಸಿದರು.

ಚಾಮರಾಜನಗರ, ಆ.1–ಕೃಷ್ಣರಾಜಸಾಗರ ಹಾಗೂ ಕಬಿನಿ ಜಲಾಶಯದಿಂದ ಭಾರೀ ಪ್ರಮಾಣದಲ್ಲಿ ನೀರು ಬಿಡುತ್ತಿರುವ ಹಿನ್ನೆಲೆಯಲ್ಲಿ ಪ್ರವಾಹ ಪೀಡಿತ ಕೊಳ್ಳೇಗಾಲ ತಾಲೂಕಿನ ವಿವಿಧ ಗ್ರಾಮಗಳಿಗೆ ಗುರುವಾರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪ್ರವಾಹ ಸಂತ್ರಸ್ತ ಗ್ರಾಮಗಳಾದ ದಾಸನಪುರ, ಹಳೇ ಅಣಗಳ್ಳಿ, ಹಳೇ ಹಂಪಾಪುರ, ಮುಳ್ಳೂರು, ಯಡಕುರಿಯ ಸೇರಿದಂತೆ ವಿವಿಧ ಭಾಗಗಳಿಗೆ ಭೇಟಿ ನೀಡಿ, ಸಮಗ್ರವಾಗಿ ಪರಿಸ್ಥಿತಿ ಅವಲೋಕಿಸಿದರು.

ದಾಸನಪುರದಲ್ಲಿ ಮನೆ ಮನೆಗೆ ತೆರಳಿದ ಜಿಲ್ಲಾಧಿಕಾರಿ ಇನ್ನೂ ಹಲವು ಮಂದಿ ಗ್ರಾಮದಲ್ಲೇ ಇದ್ದುದ್ದನ್ನು ಕಂಡು ಕಾಳಜಿ ಕೇಂದ್ರಗಳಿಗೆ ತೆರಳಲು ಮನವೊಲಿಸಿದರು. ನೀರಿನ ಹರಿವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸುರಕ್ಷತೆ ದೃಷ್ಟಿಯಿಂದ ಕಾಳಜಿ ಕೇಂದ್ರಗಳಿಗೆ ತೆರಳಲು ಮನವಿ ಮಾಡಿದರು.

ಇಂದು ಶಾಲೆಗಳಿಗೆ ರಜೆ

ಚಾಮರಾಜನಗರ: ಕೃಷ್ಣರಾಜಸಾಗರ ಹಾಗೂ ಕಬಿನಿ ಜಲಾಶಯದಿಂದ ನದಿಗೆ ಅಧಿಕ ನೀರು ಬಿಡುತ್ತಿರುವುದರಿಂದ ಕೊಳ್ಳೇಗಾಲ ತಾಲೂಕಿನ ವಿವಿಧ ಗ್ರಾಮಗಳ ಅಂಗನವಾಡಿ ಹಾಗೂ ಶಾಲೆಗಳಿಗೆ ಆ.2ರಂದು ರಜೆ ಘೋಷಿಸಲಾಗಿದೆ.

ಕೊಳ್ಳೇಗಾಲ ತಾಲೂಕಿನ ಕಾವೇರಿ ನದಿ ತಗ್ಗು ಪ್ರದೇಶಗಳಾದ ದಾಸನಪುರ, ಹರಳೆ, ಅಗ್ರಹಾರ, ಹಳೆಹಂಪಾಪುರ, ಹಳೇ ಅಣಗಳ್ಳಿ, ಮುಳ್ಳೂರು, ಯಡಕುರಿಯ ಗ್ರಾಮಗಳ ಅಂಗನವಾಡಿ, ಎಲ್ಲಾ ಶಾಲೆಗಳಿಗೆ ರಜೆ ಘೋಷಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಹಳೇ ಅಣಗಳ್ಳಿಗೆ ಭೇಟಿ ನೀಡಿ ಅಲ್ಲಿಯೂ ಕೆಲ ಗ್ರಾಮಸ್ಥರು ಇರುವುದನ್ನು ಕಂಡು ನೀರು ಹೆಚ್ಚಾಗುತ್ತಿದೆ. ಕಾಳಜಿ ಕೇಂದ್ರಗಳಿಗೆ ತುರ್ತಾಗಿ ತೆರಳಬೇಕೆಂದು ತಿಳಿಸಿದರು. ನಂತರ ಹಳೇ ಹಂಪಾಪುರಕ್ಕೂ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಮಾತನಾಡಿ, ಕಾಳಜಿ ಕೇಂದ್ರದಲ್ಲಿ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ವೈದ್ಯಕೀಯ ಚಿಕಿತ್ಸೆಗೂ ಅಗತ್ಯ ಕ್ರಮ ವಹಿಸಲಾಗಿದೆ. ಗ್ರಾಮದಿಂದ ತೆರಳಲು ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಜನರು ಸ್ಪಂದಿಸಬೇಕು ಎಂದರು.

ಮುಳ್ಳೂರು ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ, ಪ್ರವಾಹ ಕಡಿಮೆಯಾಗುವವರೆಗೂ ಕಾಳಜಿ ಕೇಂದ್ರದಲ್ಲೇ ಇರಬೇಕು. ಆಸ್ಪತ್ರೆ, ಆಂಬುಲೆನ್ಸ್ ಸೇರಿದಂತೆ ಎಲ್ಲಾ ವ್ಯವಸ್ಥೆ ಇರಲಿವೆ. ಊಟೋಪಚಾರ, ಇನ್ನಿತರ ಮೂಲ ಸೌಕರ್ಯ ಕಲ್ಪಿಸಲಾಗಿದೆ ಯಾವುದೇ ತೊಂದರೆ ಇದ್ದರೂ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಹೇಳಿದರು. ಯಡಕುರಿಯ ಗ್ರಾಮಸ್ಥರ ಅಹವಾಲು ಆಲಿಸಿದ ಶಿಲ್ಪಾನಾಗ್, ಜಿಲ್ಲಾಡಳಿತದಿಂದ ಸಹಾಯವಾಣಿ ತೆರೆಯಲಾಗಿದೆ. ಎಲ್ಲಾ ನೆರವು ನೀಡಲಾಗುತ್ತಿದ್ದು, ಸಮಸ್ಯೆಗಳಿದ್ದಲ್ಲಿ ತಿಳಿಸಬೇಕು ಎಂದರು.

ನಂತರ ವೆಸ್ಲಿ ಸೇತುವೆಗೂ ಭೇಟಿ ನೀಡಿ ವೀಕ್ಷಿಸಿದ ಜಿಲ್ಲಾಧಿಕಾರಿ, ಸ್ಥಳೀಯ ಪ್ರವಾಸಿ ತಾಣಗಳಿಗೆ ನಿಷೇಧ ಇರುವ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೆಲ ಪ್ರವಾಹ ಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿ ತೆಪ್ಪದಲ್ಲಿ ತೆರಳಿ ಪರಿಶೀಲನೆ ನಡೆಸಿದರು. ಕಾಳಜಿ ಕೇಂದ್ರದಲ್ಲಿ ಸಂತ್ರಸ್ತರಿಗೆ ಸಿದ್ಧಪಡಿಸಲಾಗಿದ್ದ ಊಟ ಪರಿಶೀಲಿಸಿದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತ್ರಸ್ತರಿಗೆ ಊಟ ಬಡಿಸಿದರು. ಇದೇ ವೇಳೆ ಜಾನುವಾರುಗಳಿಗೆ ಮೇವು ವಿತರಿಸಿದರು. ಪ್ರವಾಹ ಪೀಡಿತ ಪ್ರದೇಶಗಳ ಕಾರ್ಯಾಚರಣೆ ಹಾಗೂ ಮುನ್ನೆಚ್ಚರಿಕೆ ಕ್ರಮಗಳಿಗೆ ನಿಯೋಜಿಸಿರುವ ತಂಡಗಳೊಂದಿಗೆ ಸಮಾಲೋಚನೆ ನಡೆಸಿದರು.

ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಮಹೇಶ್, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಪಿ.ಲಕ್ಷ್ಮಿ ಹಾಗೂ ಇತರೆ ಅಧಿಕಾರಿಗಳು ಇದ್ದರು.

ವಿದ್ಯುತ್ ಸ್ಪರ್ಶಿಸಿ ಲೈನ್‌ಮನ್‌ಗೆ ಗಾಯ

ಚಾಮರಾಜನಗರ, ಆ.1–ವಿದ್ಯುತ್ ತಂತಿ ಅಳವಡಿಸುವಾಗ ವಿದ್ಯುತ್ ಸ್ಪರ್ಶಿಸಿ ಲೈನ್‌ಮನ್ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದಲ್ಲಿ ಗುರುವಾರ ನಡೆದಿದೆ.

ತಾಲೂಕಿನ ದೊಡ್ಡಮೋಳೆ ಗ್ರಾಮದ ಕಿರಣ್ (26) ಗಾಯಗೊಂಡ ಲೈನ್‌ಮನ್. ಈತ ನಗರದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಬಳಿ ವಿದ್ಯುತ್ ಕಂಬದಲ್ಲಿ ತಂತಿ ಅಳವಡಿಸುವಾಗ ವಿದ್ಯುತ್ ಪ್ರವಹಿಸಿದೆ. ಪರಿಣಾಮ ಕಿರಣ್ ಕಂಬದ ಮೇಲೆ ಅಸ್ವಸ್ಥರಾಗಿದ್ದರು. ಕೂಡಲೇ ಜೊತೆಯಲ್ಲಿದ್ದ ಸಿಬ್ಬಂದಿ ಕಿರಣ್‌ನನ್ನು ಕಂಬದಿಂದ ಕೆಳಗೆ ಇಳಿಸಿ, ಯಡಬೆಟ್ಟದ ಬಳಿಯ ಸಿಮ್ಸ್ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಾದಪ್ಪನ ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸಿ

ಹನೂರು, ಆ.1–ಶ್ರೀಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಆ.4 ರಿಂದ 5 ದಿನ ನಡೆಯಲ್ಲಿರುವ ಭೀಮನ ಅಮಾವಾಸ್ಯೆಗೆ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಅಗತ್ಯ ಮೂಲಸೌಲಭ್ಯ ಕಲ್ಪಿಸಬೇಕು ಎಂದು ಮಹದೇಶ್ವರಬೆಟ್ಟದ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು ತಿಳಿಸಿದರು.

ಮಹದೇಶ್ವರಬೆಟ್ಟದ ನಾಗಮಲೆ ಭವನದಲ್ಲಿ ಭೀಮನ ಅಮಾವಾಸ್ಯೆ ಹಾಗೂ ಶ್ರಾವಣ ಮಾಸದ ಕುಂಭಾಭಿಷೇಕ ಪ್ರಯುಕ್ತ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಆ.3ರಂದು ಎಣ್ಣೆ ಮಜ್ಜನ, ಅಮಾವಾಸ್ಯೆ ನಂತರ 108 ಕುಂಭಾಭಿಷೇಕ ಮಹೋತ್ಸವ ನಡೆಯಲಿದೆ. ಈ ನಿಟ್ಟಿನಲ್ಲಿ ಭಕ್ತರಿಗೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶುದ್ಧ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ವಿಶೇಷ ದಾಸೋಹ, ಪ್ರಸಾದ ರೂಪದಲ್ಲಿ ನೀಡುವ ಲಾಡು, ಅಗತ್ಯ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು. ಕ್ಷೇತ್ರದಲ್ಲಿ ಯಾವುದೇ ಸಮಸ್ಯೆಗಳಿದ್ದರೆ ನೇರವಾಗಿ ನನ್ನ ಗಮನಕ್ಕೆ ತಂದರೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದರು.




ಮಹದೇಶ್ವರಬೆಟ್ಟದ ನಾಗಮಲೆ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು ಮಾತನಾಡಿದರು.

ಭೀಮನ ಅಮಾವಾಸ್ಯೆ ಪ್ರಯುಕ್ತ ಬೆಟ್ಟಕ್ಕೆ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಸರತಿ ಸಾಲಿಗೆ ಬ್ಯಾರಿಕೇಡ್ ಅಳವಡಿಸಲಾಗಿದೆ. ದೇವರ ದರ್ಶನ ವೇಳೆ ಯಾವುದೇ ನೂಕು ನುಗ್ಗಲು ಆಗದಂತೆ ಎಚ್ಚರ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಮಾವಾಸ್ಯೆ ಹಾಗೂ ಕುಂಬಾಭಿಷೇಕ ಮಹೋತ್ಸವಕ್ಕೆ ಹೆಚ್ಚಿನ ಭಕ್ತರು ಆಗಮಿಸುವುದರಿಂದ ಪ್ರತಿದಿನ ದಾಸೋಹ ಭವನದಲ್ಲಿ ನಡೆಯುವ ಪ್ರಸಾದದ ಜೊತೆಗೆ ಹೆಚ್ಚುವರಿ ವಿಶೇಷ ದಾಸೋಹ ವ್ಯವಸ್ಥೆ ಮಾಡಿ, ಬೆಳಗ್ಗೆ ತಿಂಡಿ, ಮಧ್ಯಾಹ್ನ ಉಪಹಾರ ಹಾಗೂ ರಾತ್ರಿ ನಿರಂತರವಾಗಿ ಪ್ರಸಾದ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಬಾಲಿವುಡ್‌ನಲ್ಲಿ ಬ್ಯುಸಿಯಾದ ಇತಿ ಆಚಾರ್ಯ



ಅಚ್ಚ ಕನ್ನಡದ ಹುಡುಗಿ ಇತಿ ಆಚಾರ್ಯ ನಟನೆಯ ಜೊತೆಗೆ ಮಾಡೆಲಿಂಗ್‌ನಲ್ಲೂ ಮಿಂಚುತ್ತಿದ್ದಾರೆ. 2016ರ ಮಿಸ್ ಸೌತ್ ಇಂಡಿಯಾ ವಿನ್ನರ್ ಕಿರೀಟವನ್ನು ಮುಡಿಗೇರಿಸಿಕೊಂಡಿರುವ ಈ ಕನ್ನಡತಿ ಆರ್‌ವಿಎಸ್‌ಪಿ ಪ್ರೊಡಕ್ಷನ್ ಹೌಸ್ ಮೂಲಕ ನಿರ್ಮಾಪಕಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಕನ್ನಡ ಮಾತ್ರವಲ್ಲದೇ ಹಿಂದಿ, ತಮಿಳು, ಮಲಯಾಳಂ ಸಿನಿಮಾಗಳಲ್ಲೂ ಇತಿ ಆಚಾರ್ಯ ಬ್ಯುಸಿಯಾಗಿದ್ದಾರೆ. ಟೈಮ್ಸ್ ಸ್ಕ್ವೇರ್ ಬಿಲ್ ಬೋರ್ಡ್ ಹೋರ್ಡಿಂಗ್‌ನಲ್ಲಿ ಕಾಣಿಸಿಕೊಂಡ ಹಿರಿಮೆ ಅವರದ್ದು. ಅಮೇರಿಕಾದ ಗಾಯಕ ಹಾಗೂ ಸಂಗೀತ ನಿರ್ದೇಶಕ ಮೆರ್ಲಿನ್ ಬಾಬಾಜಿ ಅವರ ಹಾಡಲ್ಲಿ ಕಾಣಿಸಿಕೊಳ್ಳುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯತೆ ಪಡೆದಿರೋ ಇತಿ ಆಚಾರ್ಯ ಇತ್ತೀಚೆಗೆ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ. ಇತಿ ಆಚಾರ್ಯ ತಮ್ಮ ಹುಟ್ಟುಹಬ್ಬದ ಅಂಗವಾಗಿ ಹೊಸ ಸಿನಿಮಾದ ಅಪ್‌ಡೇಟ್ ಹಂಚಿಕೊಂಡಿದ್ದಾರೆ. "ದಿ ಶೂಸ್ ಐ ವೋರ್" ಎಂಬ ಹೊಸ ಹಿಂದಿ ಚಿತ್ರದಲ್ಲಿ ಇತಿ ಆಚಾರ್ಯ ನಾಯಕಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ಯುವ ಪ್ರತಿಭೆ ಸಂಜಯ್ ಚರಣ್ ಅವರ ನಿರ್ದೇಶನದ ಈ ಸಿನಿಮಾದಲ್ಲಿ ಫೈಸಲ್ ರಶೀದ್ ಅವರಿಗೆ ಜೋಡಿಯಾಗಿ ಕನ್ನಡತಿ ಇತಿ ಅಭಿನಯಿಸಲಿದ್ದಾರೆ. ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಇತಿ ಆಚಾರ್ಯ, ನಾನು ಈ ಸಿನಿಮಾದ ಭಾಗವಾಗಿರುವುದಕ್ಕೆ ಖುಷಿ ಇದೆ. ಪಾತ್ರ ನಿರ್ವಹಿಸಲು ತುಂಬಾ ಉತ್ಸುಕಳಾಗಿದ್ದೇನೆ. ಈ ಪಯಣದಲ್ಲಿ ಸಾಕಷ್ಟು ಕಲಿಯುವುದು ಇದೆ. ಇದೊಂದು ವಿಭಿನ್ನ ಕಥೆಯಾಗಿದ್ದು, ಟೆಕ್ನಿಕಲಿ ಸ್ಟ್ರಾಂಗ್ ಸಿನಿಮಾ ಎಂದಿದ್ದಾರೆ.

ಇತಿ ಆಚಾರ್ಯ ಅವರು ಕನ್ನಡದಲ್ಲಿ ಕವಚ, ಧ್ವನಿ, ಡೀಲ್‌ರಾಜಾ, ಪಂಗನಾಮ ಸಿನಿಮಾಗಳಲ್ಲಿ ನಟಿಸಿದ್ದಾರೆ. ಅದೇರೀತಿ ತೆಲುಗು ಮತ್ತು ತಮಿಳಿನ ಸಿನಿಮಾಗಳಲ್ಲೂ ಸಹ ಅವರು ನಟಿಸಿದ್ದಾರೆ.

ಮುಂಬೈನಲ್ಲಿ ಮಾರ್ಟಿನ್ 13 ಭಾಷೆಯ ಟ್ರೇಲರ್





ಆ್ಯಕ್ಷನ್‌ಪ್ರಿನ್ಸ್ ಧ್ರುವ ಸರ್ಜಾ ಅಭಿನಯದ ಬಹುನಿರೀಕ್ಷಿತ ಚಿತ್ರ ಮಾರ್ಟಿನ್ ಬಿಡುಗಡೆಗೆ ದಿನಗಣನೆ ಶುರುವಾಗಿದೆ. ಅ.11ರಂದು ಮಾರ್ಟಿನ್ ದೇಶಾದ್ಯಂತ ಅಬ್ಬರಿಸಲಿದ್ದಾನೆ. ಉದಯ್ ಮೆಹ್ತಾ ನಿರ್ಮಾಣದ ಈ ಚಿತ್ರಕ್ಕೆ ಎ.ಪಿ.ಅರ್ಜುನ್ ಆಕ್ಷನ್ ಕಟ್ ಹೇಳಿದ್ದಾರೆ. ಆಗಸ್ಟ್ 5ರಂದು ಮುಂಬೈನಲ್ಲಿ ಈ ಚಿತ್ರದ ಟ್ರೇಲರ್ ಪ್ರಪಂಚದ 13 ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ಇತ್ತೀಚಿನ ದಿನಗಳಲ್ಲಿ ಈ ಚಿತ್ರ ತನ್ನ ವಿಶೇಷತೆಗಳಿಗಿಂತ ಕಾಂಟ್ರವರ್ಸಿ ಸುದ್ದಿಗಳಿಂದಲೇ ಪ್ರಚಾರ ಪಡೆದಿತ್ತು. ಮುಂಬೈನಲ್ಲಿ ಈ ಚಿತ್ರದ ಟ್ರೇಲರ್ ಲಾಂಚ್ ಇವೆಂಟ್ ಜೊತೆಗೆ ಇಂಟರ್‌ನ್ಯಾಷನಲ್ ಲೆವೆಲ್ ಪ್ರೆಸ್‌ಮೀಟ್ ನಡೆಯಲಿದೆ. ಅಂದು ಪ್ರಪಂಚದ ಬೇರೆಬೇರೆ ದೇಶಗಳ ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದಕ್ಕೂ ಮುನ್ನ ಆ. 4ರಂದು ಸಂಜೆ ಬೆಂಗಳೂರಿನ ವೀರೇಶ ಚಿತ್ರಮಂದಿರದಲ್ಲಿ ಅಭಿಮಾನಿಗಳಿಗೋಸ್ಕರ ಕನ್ನಡ ಟ್ರೇಲರ್ ಬಿಡುಗಡೆಯಾಗಲಿದೆ. ಇದಿಷ್ಟನ್ನು ಹೇಳಲು ಮಾರ್ಟಿನ್ ನಿರ್ಮಾಪಕ ಉದಯ ಕೆ.ಮೆಹತಾ, ನಿರ್ದೇಶಕ ಎ.ಪಿ.ಅರ್ಜುನ್, ನಾಯಕ ಧ್ರುವ ಸರ್ಜಾ ಹಾಗೂ ನಾಯಕಿ ವೈಭವಿ ಶಾಂಡಿಲ್ಯ ಮಾಧ್ಯಮದ ಮುಂದೆ ಹಾಜರಾಗಿದ್ದರು.

ನಾಯಕ ಧ್ರುವ ಸರ್ಜಾ ಮಾತನಾಡುತ್ತ, ನಮ್ಮ ಚಿತ್ರವನ್ನು ಪ್ರತಿಯೊಂದು ದೇಶಕ್ಕೂ ತಲುಪಿಸಬೇಕೆಂದು ಮುಂಬೈನಲ್ಲಿ ಭಾರತದ ಮೊದಲ ಇಂಟರ್‌ನ್ಯಾಷನಲ್ ಲೆವೆಲ್ ಪ್ರೆಸ್‌ಮೀಟ್ ಹಮ್ಮಿಕೊಂಡಿದ್ದೇವೆ. ಈಜಿಪ್ಟ್, ದುಬೈ, ಇಂಡೋನೇಶಿಯಾ, ಯುಕೆ, ಇಂಗ್ಲೆಂಡ್, ಜಪಾನ್, ಕೊರಿಯಾ, ಮಲೇಶಿಯಾ ಹೀಗೆ 21 ದೇಶಗಳಿಂದ ಬರುವ 27 ಪತ್ರಕರ್ತರು ಅಲ್ಲಿ ಭಾಗವಹಿಸಲಿದ್ದಾರೆ, ಇದೆಲ್ಲದರ ಉದ್ದೇಶ ಇಷ್ಟೇ, ನಾವು ಎಲ್ಲಾ ಕಡೆಗೂ ರೀಚ್ ಆಗಬೇಕು ಅನ್ನುವುದು ಎಂದು ಹೇಳಿದರು.

'ಫೈರ್ ಫ್ಲೈ' ರಚನಾ ಇಂದರ್ ನಾಯಕಿ

ವಂಶಿ ಅವರ ನಟನೆ ಹಾಗೂ ನಿರ್ದೇಶನದ 'ಫೈರ್ ಫ್ಲೈ' ಚಿತ್ರವು ನಾನಾ ಕಾರಣಗಳಿಂದ ನಿರೀಕ್ಷೆಯನ್ನು ಹೆಚ್ಚಿಸಿದೆ. ಅದರಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರ ಪುತ್ರಿ ನಿವೇದಿತಾ ಅವರು ಈ ಚಿತ್ರ ನಿರ್ಮಾಣ ಮಾಡುತ್ತಿರುವುದು ಒಂದಾದರೆ, ಮತ್ತೊಂದು ಕಾರಣ ಸಿನಿಮಾದ ತಾರಾಬಳಗ. ಈಗಾಗಲೇ ಫೈರ್ ಫ್ಲೈ ತಂಡವು ಸುಧಾರಾಣಿ, ಅಚ್ಯುತ್‌ಕುಮಾರ್, ಶೀತಲ್ ಶೆಟ್ಟಿ ಸೇರಿದಂತೆ ಹಲವರನ್ನು ಪರಿಚಯಿಸಿದೆ. ಇದೀಗ ಚಿತ್ರದ ನಾಯಕಿ ಯಾರು ಅನ್ನೋದನ್ನು ಅನಾವರಣ ಮಾಡಿದೆ.



ಲವ್‌ಮಾಕ್ಟೇಲ್, ಹರಿಕಥೆ ಅಲ್ಲ ಗಿರಿಕಥೆ, ಟ್ರಿಬಲ್ ರೈಡಿಂಗ್ ಸಿನಿಮಾಗಳಲ್ಲಿ ಬಬ್ಲಿ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ರಚನಾ ಇಂದರ್ ಈ ಚಿತ್ರದಲ್ಲಿ ವಂಶಿ ಜೋಡಿಯಾಗಿ ಅಭಿನಯಿಸಿದ್ದಾರೆ. ನೇಹಾ ಎಂಬ ಪಾತ್ರಕ್ಕೆ ರಚನಾ ಇಂದರ್ ಬಣ್ಣ ಹಚ್ಚಿದ್ದು, ತಮ್ಮ ಪಾತ್ರದ ಬಗ್ಗೆ ಮಾತನಾಡಿದ್ದಾರೆ. ನಿವೇದಿತಾ ಶಿವರಾಜ್‌ಕುಮಾರ್ ಅವರು ಅದ್ಭುತ ಕೆಲಸ ಮಾಡುತ್ತಿದ್ದಾರೆ. ಇಡೀ ತಂಡಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಸಿನಿಮಾದಲ್ಲಿ ನಾನು ನೇಹಾ ಎಂಬ ಪಾತ್ರ ಮಾಡಿದ್ದೇನೆ. ನೇಹಾ ಬದುಕನ್ನು ತುಂಬಾ ಇಷ್ಟಪಡುವವಳು, ಅದನ್ನು ಎಂಜಾಯ್ ಮಾಡುತ್ತಾಳೆ. ಭವಿಷ್ಯದ ಬಗ್ಗೆ ಅವಳು ಯಾವತ್ತೂ ಯೋಚನೆ ಮಾಡೋದಿಲ್ಲ. ಚಿತ್ರದ ಒಂದಷ್ಟು ಕ್ಲಿಪಿಂಗ್ಸ್ ನೋಡಿದಾಗ ಮನರಂಜನೆ ನೀಡುವ ಸಿನಿಮಾ ಎನಿಸಿತು. ವಂಶಿ ಅವರು ತುಂಬಾ ಹಾರ್ಡ್‌ವರ್ಕ್ ಮಾಡಿದ್ದಾರೆ. ದೀಪಾವಳಿಗೆ ನಮ್ಮ ಚಿತ್ರ ತೆರೆಗೆ ಬರುತ್ತಿದೆ ಎಂದಿದ್ದಾರೆ.

ಫೈರ್ ಫ್ಲೈ ಚಿತ್ರವನ್ನು ಯುವನಟ ವಂಶಿ ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದ ಮೂಲಕ ಅವರು ಪೂರ್ಣ ಪ್ರಮಾಣದ ನಾಯಕರಾಗಿಯೂ ಪರಿಚಯ ಆಗುತ್ತಿದ್ದಾರೆ. ಇನ್ನು ಈ ಚಿತ್ರಕ್ಕೆ ಅಭಿಲಾಷ್ ಕಳತ್ತಿ ಅವರು ಛಾಯಾಗ್ರಹಣ ಮಾಡುತ್ತಿದ್ದಾರೆ. ಚರಣ್‌ರಾಜ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. ರಘು ನಿಡುವಳ್ಳಿ ಚಿತ್ರದ ಸಂಭಾಷಣೆ ಬರೆದಿದ್ದಾರೆ.

ನಾಯಕ-ನಿರ್ದೇಶಕ ವಂಶಿ ಜೊತೆ ಜಯರಾಮ್ ಸಹ-ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ನಿರ್ಮಾಣ ಸಂಸ್ಥೆ ಶ್ರೀಮುತ್ತು ಸಿನಿ ಸರ್ವಿಸ್ ಸಂಸ್ಥೆ ಈ ಮೂಲಕ ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಈ ಸಂಸ್ಥೆಯ ಮೊದಲ ಕೂಸಾಗಿ ಫೈರ್ ಫ್ಲೈ ಸಿನಿಮಾ ದೀಪಾವಳಿಗೆ ತೆರೆಗೆ ಬರಲಿದೆ.

ಲೈಫ್ ಆಫ್ ಮೃದುಲ ತೇಜಸ್ವಿನಿಗೌಡ ನಾಯಕಿ




ಈ ಚಿತ್ರರಂಗವೇ ಹಾಗೆ, ಎಂಥವರನ್ನಾದರೂ ಆಕರ್ಷಿಸುವ ಶಕ್ತಿ ಹೊಂದಿದೆ. ಪ್ರತಿಷ್ಠಿತ ಕಂಪನಿಯಲ್ಲಿ ಒಳ್ಳೇ ಕೆಲಸದಲ್ಲಿದ್ದರೂ ತೇಜಸ್ವಿನಿ ಗೌಡ ಅವರಿಗೆ ಬಣ್ಣದಲೋಕದ ಸೆಳೆತ ಬಿಟ್ಟಿಲ್ಲ. ವೃತ್ತಿಯ ಜತೆಗೆ ಪ್ರವೃತ್ತಿಯಾಗಿ ಅಭಿನಯವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕೆಲಸ ಮಾಡುತ್ತಲೇ ನಟನೆಯಲ್ಲೂ ತೊಡಗಿಕೊಂಡಿದ್ದಾರೆ. ಲೈಫ್ ಆಫ್ ಮೃದುಲ ಚಿತ್ರದ ನಿರ್ದೇಶಕ ಚೇತನ್ ತ್ರಿವೇಣ್ ಅವರು ಈ ಹಿಂದೆ ಐದಾರು ಕಿರುಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದರು. ಆ ಎಲ್ಲ ಚಿತ್ರಗಳಲ್ಲೂ ತೇಜಸ್ವಿನಿಗೌಡ ಅಭಿನಯಿಸಿದ್ದರು.

ಅದಾದನಂತರ ರಾಕ್ ಅಂಡ್ ರೋಲ್ ಎಂಬ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡಿದರೆ, 'ನೆನಪಾದಳು ಶಾಕುಂತಲೆ'ಯಲ್ಲಿ ನಾಯಕಿಯ ಗೆಳತಿಯಾಗಿ ಕಾಣಿಸಿಕೊಂಡಿದ್ದಾರೆ. ಇದೀಗ 'ಲೈಫ್ ಆಫ್ ಮೃದುಲ' ಚಿತ್ರದಲ್ಲಿ ಒಬ್ಬ ರಿಪೋರ್ಟರ್ ಆಗಿ ನಟಿಸಿದ್ದಾರೆ. ಹೀಗೆ ತಾನು ಅಭಿನಯಿಸಿದ ಮೂರು ಸಿನಿಮಾಗಳಲ್ಲೂ ಸಹ ವೀಕ್ಷಕರ ಮನದಲ್ಲಿ ನಿಲ್ಲುವಂಥ ವಿಭಿನ್ನ ಪಾತ್ರಗಳನ್ನು ನಿರ್ವಹಿಸಿರುವ ತೇಜಸ್ವಿನಿ ಗೌಡ ಚಿತ್ರರಂಗದಲ್ಲಿ ಉತ್ತಮ ನಟಿಯಾಗಿ ಮುಂದುವರೆಯುವ ಭರವಸೆ ಹೊಂದಿದ್ದಾರೆ. ನಟಿ ಸೌಂದರ್ಯ ಅವರು ನಿರ್ವಹಿಸಿದ ಪಾತ್ರಗಳು ತನಗೆ ಸ್ಫೂರ್ತಿಯಾಗಿದ್ದು, ಮುಂದೆ ಅನುಷ್ಕಾ ಶೆಟ್ಟಿ ಅವರ ಅರುಂಧತಿಯಂತಹ ಪಾತ್ರಗಳನ್ನು ನಿರ್ವಹಿಸುವ ಬಯಕೆ ತನಗಿದೆ. ಕಥೆಯ ಜೊತೆಗೆ ಪಾತ್ರದಲ್ಲಿ ತೂಕವಿದ್ದರೆ ಒಂದು ಹಂತದವರೆಗೆ ಬೋಲ್ಡ್ ಆಗಿ ಅಭಿನಯಿಸಲು ನನ್ನ ಅಭ್ಯಂತರವಿಲ್ಲ ಎನ್ನುವ ತೇಜಸ್ವಿನಿಗೌಡ ಅವರಿಗೆ ಈಗಾಗಲೇ ಒಂದಷ್ಟು ಚಿತ್ರಗಳಿಂದ ಕರೆ ಬಂದಿದೆ. ಅದಿನ್ನು ಚರ್ಚೆಯ ಹಂತದಲ್ಲಿದ್ದು, ಓಕೆ ಆದಮೇಲೆ ಬಹಿರಂಗಪಡಿಸುವುದಾಗಿ ಹೇಳುತ್ತಾರೆ. ಸ್ಟಾರ್ ನಟಿಯರ ಸಾಲಿನಲ್ಲಿ ನಿಲ್ಲಬೇಕೆಂಬ ಬಯಕೆ ಎಲ್ಲರಂತೆ ನನಗೂ ಇದೆ ಎನ್ನುವುದು ನಟಿ ತೇಜಸ್ವಿನಿಗೌಡ ಅವರ ಮನದಾಳದ ಮಾತು.

ಸಿನಿಪದಬಂಧ-537



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________________
ವಿಳಾಸ ____________________
____
ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1.ಇಂಗ್ಲೀಷಿನವರ ದುಡ್ಡು ಮತ್ತು ಮಧುವಿಗೆ ಗ್ರಹವೊಂದು ಹೆಗಲೇರಿದೆ 6
4.ಪುಣ್ಯದೊಂದಿಗೆ ಕೆಟ್ಟದ್ದು ಸೇರಿಕೊಂಡಿದೆ 2
6.'ಹೃದಯವಂತ'ನ ಸಹೋದರಿ ಪಾತ್ರಧಾರಿಣಿ 6
7.ಕೈಲಾಸವಾಸಿ ರವಿಚಂದ್ರನ್ ಶ್ರೇಷ್ಠ ! 5
8.ಶಂಕರನಾಗ್-ದೇವರಾಜ್ "ಕೋಪ"ದ ನಡುವೆ ಆಂಗ್ಲದ ದಾರಿ ಹಾದುಹೋಗಿದೆ 3
11.ಭಗವಂತ ಇರದಿರುವ ಬಗ್ಗೆ ಅಂಬರೀಷ್ ಪ್ರಶ್ನೆ! 6
12.ಚಂದ್ರ ಬೀರಿದ "ನಗು" 2
14.ಶಿವಣ್ಣ ಲಾಂಗು ಹಿಡಿದ ಸಾಧು 2
15.ಮಧುಮಾಸದ ನಾಯಕಿ ತುಂಬಾ ಸುಲಭ 3
16.ರಜತ ಪರದೆ ಇಲ್ಲಿ ತಿರುಗಿದೆ 4
17.ಶಂಕರ್ ನಾಗ್ ತ್ರಿಪಾತ್ರಭಿನಯಕ್ಕೆ ಎಸ್.ಎ. ಚಂದ್ರಶೇಖರ್ ನಿರ್ದೇಶಕ 4

ಮೇಲಿನಿಂದ ಕೆಳಕ್ಕೆ

1.ಬೆಟ್ಟದ ನಡುವೆ ಸಿಕ್ಕ ಚರ್ಮವಾದ್ಯ 3
2.ನವಗ್ರಹಗಳಲ್ಲೊಂದು ವಕ್ರ ದೃಷ್ಟಿ ಬೀರಿದೆ 5
3.ನವರಸ ನಾಯಕ ವೃದ್ಧೆಯ ವೇಷಕ್ಕಾಗಿ ಬಣ್ಣ ಬಳಿದುಕೊಂಡಿದ್ದಾನೆ 3
5." _ _ _ _ ನಾದೆನು ಅರಿಯುವ ಮುನ್ನವೇ ಪರಿಚಿತನಾಗಲೀ ಹೇಗೆ ಪ್ರಣಯಕು ಮುನ್ನವೇ.... " 4
6.ಕಿತ್ತೂರು ಚೆನ್ನಮ್ಮ ಚಿತ್ರದ "ತನು ಕರಗದವರಲ್ಲಿ ಪುಷ್ಪವನೊಲ್ಲಯ್ಯ ನೀನು...", ವಚನದ ಕರ್ತೃ 6
7.ಸಂಸ್ಕಾರ ಚಿತ್ರದ ನಿರ್ದೇಶಕ 7
8.ವಿಷ್ಣು - ಗೀತಾ ಅಭಿನಯದ ಚಿತ್ರದ ಕೊನೆ ಎರಡಕ್ಷರ ಇಲ್ಲಿ ಉಲ್ಟಾ ಆಗಿದೆ 4
9.ಹೂವುಗಳೆರಡು ತೆರೆಯ ಮೇಲೂ ಘಮಘಮಿಸಿವೆ 6
10.ಡಾ. ರಾಜ್ ಕುಮಾರ್ ಅಭಿನಯದಲ್ಲಿ ಮೂಡಿ ಬಂದ ನೂತನ ಪ್ರಭೆ 5
13. _ _ _ ಸ್ಟಾರ್ 3
15.'ಒಂಟಿ'ಯಾಗಿ ಬಂದ ಪ್ರಾಣಿ 3

ಸಿನಿ ಪದಬಂಧ 536ರ ಉತ್ತರ

ಸು	ವ	ರ್ಣ	ಸೇ	ತು	ವೆ					
ಮಿ				ಳ		ಪ		ತೇ	ಜ	
ತ್ರ		ಕ	ನ	ಸಿ	ನ	ರಾ	ಣಿ		ಯ	
		ರ್ಷ		ದ		ರಿ			ಸೂ	
ಕೊ	ಲ್ಲೂ	ರ	ಕಾ	ಳ			ಐ	ಶ್ವ	ರ್ಯ	
ಡ		ದ			ನ		ಲ			ಹೊ
ಗಿ		ಗೊಂ	ಬೆ	ಗ	ಳ	ಲ	ವ್		ಹಂ	ಸ
ನ		ಬೆ			ದ		ಯು			ಜೀ
ಕಾ			ಚಂ		ಮ	ನೆ		ಭಾ	ರ್ಗ	ವ
ವೇ	ದ	ಪ್ರ	ದ		ಯಂ			ರ		ನ
ರಿ			ನ		ತಿ	ರು	ಪ	ತಿ		

ವಿಜೇತರು: ಶಶಿಕಲಾ ಪಾಂಡುರಂಗ, ನಂ.463, 1ನೇ ಕ್ರಾಸ್, 4ನೇ ಮೇನ್, ಎಸ್‌ವಿಪಿ ನಗರ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ತ್ರಿವೇಣಿ ಸಂಗಮ

●ಪ್ರವಾಹದ ಸೊಬಗನ್ನು ವೀಕ್ಷಿಸುತ್ತಿರುವ ಜನತೆ ●ತಿರುಮಕೂಡಲು ಬಳಿ ಕಾವೇರಮ್ಮ ದೇವಸ್ಥಾನ ಮುಳುಗಡೆ



ತಿ.ನರಸೀಪುರ, ಆ.1– ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಂದ 2 ಲಕ್ಷ ಕ್ಯೂಸೆಕ್ ನೀರನ್ನು ಹರಿಸುತ್ತಿರುವುದರಿಂದ ತ್ರಿವೇಣಿ ಸಂಗಮ ತುಂಬಿ ಹರಿಯುತ್ತಿದೆ.

ಕಳೆದ ರಾತ್ರಿ ಪ್ರವಾಹದ ನೀರು ಹೆಚ್ಚಾದ ಹಿನ್ನೆಲೆಯಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನ ಮುಂಭಾಗದ ರಥದ ಮಂಟಪಕ್ಕೆ ನೀರು ನುಗ್ಗಿತ್ತಾದರೂ, ಬೆಳಗ್ಗೆ ವೇಳೆಗೆ ನೀರು 5 ಅಡಿಗಳಷ್ಟು ಕಡಿಮೆಯಾಗಿದೆ. ಕಾವೇರಿ–ಕಪಿಲ–ಸ್ಫಟಿಕ ಸರೋವರ ಸಂಗಮ ಕ್ಷೇತ್ರವಾದ ತಿ.ನರಸೀಪುರದಲ್ಲಿ ಪ್ರವಾಹ ಬಂದ ವೇಳೆ ಜೋಡಿ ನದಿಗಳು ತುಂಬಿ ಹರಿಯುವುದರಿಂದ ನದಿ ಪಾತ್ರದಲ್ಲಿ ವಾಸಿಸುವ ಕುಟುಂಬ ಆತಂಕಕ್ಕೆ ಒಳಗಾಗುತ್ತವೆ. ಆದರೆ ಈ ಬಾರಿ ತಾಲೂಕು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ತಗ್ಗು ಪ್ರದೇಶಗಳಿಗೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಂಡಿರುವುದರಿಂದ ಯಾವುದೇ ಅವಘಡ ಸಂಭವಿಸಿಲ್ಲ.

ತ್ರಿವೇಣಿ ಸಂಗಮದಲ್ಲಿ ನೀರು ತುಂಬಿ ಹರಿಯುತ್ತಿರುವ ದೃಶ್ಯ ಮನಮೋಹಕವಾಗಿದ್ದು, ಜನರು ತಂಡೋಪತಂಡವಾಗಿ ಬಂದು ಪ್ರವಾಹದ ಸೊಬಗನ್ನು ವೀಕ್ಷಿಸುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಗುಂಜಾನರಸಿಂಹಸ್ವಾಮಿ ದೇವಸ್ಥಾನ ಮುಂಭಾಗದ ಸೋಪಾನ ಕಟ್ಟೆಯ ಮೆಟ್ಟಿಲು ತುಂಬಲು ಕೇವಲ ಎರಡೇ ಮೆಟ್ಟಿಲುಗಳು ಬಾಕಿ ಇದ್ದು, ಹೆಚ್ಚಿನ ನೀರು ಬಂದಲ್ಲಿ ದೇವಾಲಯದ ಆವರಣ ಜಲಾವೃತವಾಗಲಿದೆ.

ಕಾವೇರಿ ನದಿ ಮಧ್ಯೆ ಇರುವ ನಡುಹೊಳೆ ಬಸಪ್ಪ ಸಂಪೂರ್ಣವಾಗಿ ಮುಳುಗಡೆಯಾಗಿದ್ದು, ತಿರುಮಕೂಡಲಿನ ರಾಘವೇಂದ್ರಸ್ವಾಮಿ ಮಠದ ಮುಂಭಾಗವಿರುವ ಕಾವೇರಮ್ಮ ದೇವಸ್ಥಾನ ಸಹ ಮುಳುಗಡೆಯಾಗಿದೆ. ಪ್ರವಾಹ ಹೆಚ್ಚಾದಲ್ಲಿ ತಿ.ನರಸೀಪುರ–ಹುಣಸೂರು–ತಲಕಾಡು ರಸ್ತೆಗಳು ಸಂಪರ್ಕ ಕಳೆದುಕೊಳ್ಳಲಿವೆ.

ಈ ನಡುವೆ ತಿರುಮಕೂಡಲು ಗ್ರಾಮಕ್ಕೆ ಭೇಟಿ ನೀಡಿದ ತಹಸೀಲ್ದಾರ್ ಸುರೇಶ್ ಆಚಾರ್ ಪ್ರವಾಹ ಪರಿಸ್ಥಿತಿ ಪರಿಶೀಲಿಸಿದರು. ಈ ವೇಳೆ ಮಾತನಾಡಿದ ಅವರು ಪ್ರವಾಹದ ತೀವ್ರತೆ ಕುಗ್ಗುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಸಮಸ್ಯೆ ಎದುರಾಗಿಲ್ಲ. ಆದಾಗ್ಯೂ ತಡಿ ಮಾಲಂಗಿ ಗ್ರಾಮದಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರವನ್ನು ಮುಂದುವರೆಸಲಾಗುವುದು. ತಲಕಾಡಿನಲ್ಲೂ ಯಾವುದೇ ಸಮಸ್ಯೆ ಇಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಅವಶ್ಯಕತೆ ಬಿದ್ದಲ್ಲಿ ಕಾಳಜಿ ಕೇಂದ್ರ ತೆರೆಯಲು ಅಗತ್ಯ ಕ್ರಮ ಜರುಗಿಸಲಾಗುವುದು ಎಂದರು.

ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ



ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ಗ್ರಾಮಸ್ಥರು ಮನವಿ ಸಲ್ಲಿಸಿದರು.

ನಂಜನಗೂಡು, ಆ.1– ತಾಲೂಕಿನ ದೇವರಸನಹಳ್ಳಿ ಮುಖ್ಯ ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ದೇವರಸನಹಳ್ಳಿ, ಹೊಸೂರು, ಉಪ್ಪಿನಹಳ್ಳಿ, ಗೊಣತಗಾಲ, ಸಿಂಗಾರಿಪುರ, ಶ್ರೀನಗರ ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಹಳ್ಳದಕೇರಿ ಬಳಿ ಜಮಾವಣೆಗೊಂಡ ಗ್ರಾಮಸ್ಥರು, ನಗರದ ಹುಲ್ಲಹಳ್ಳಿ ವೃತ್ತದ ಬಳಿಯ ಲೋಕೋಪಯೋಗಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಲೋಕೋಪಯೋಗಿ ಇಲಾಖೆ ಕಚೇರಿ ಮುಂಭಾಗ ಧರಣಿ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದೇವರಸನಹಳ್ಳಿ ಮುಖಂಡ ಮಂಡ್ಯ ಮಹದೇವು ಮಾತನಾಡಿ, ತಾಲೂಕಿನ 6 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ದೇವರಸನಹಳ್ಳಿ ಮುಖ್ಯ ರಸ್ತೆ ಹದಗೆಟ್ಟು 10 ವರ್ಷಗಳೇ ಕಳೆದಿದೆ. ರಸ್ತೆ ಹಳ್ಳಗಳಿಂದ ಕೂಡಿರುವುದರಿಂದ ವಾಹನ ಸವಾರರು ಓಡಾಡಲು ತೊಂದರೆಯಾಗಿದೆ. ನಿತ್ಯ ಸಂಚರಿಸುವ ಕಾರ್ಮಿಕರು, ವಾಹನ ಸವಾರರು ಬಿದ್ದು ಅಪಘಾತಗಳಾಗಿ ಆಸ್ಪತ್ರೆ ಸೇರಿದ್ದಾರೆ. ಅಲ್ಲದೇ ಮಹಿಳೆಯರ ಹೆರಿಗೆ ಸಂದರ್ಭ ಆಂಬುಲೆನ್ಸ್ ಕೂಡ ಬರಲು ತಡವಾಗುತ್ತಿದೆ. ಈ ರಸ್ತೆ ದುಸ್ಥಿತಿಯಿಂದಾಗಿ ಹಲವು ವಿದ್ಯಾರ್ಥಿಗಳು ಓಡಾಡಲು ತೊಂದರೆಯಾಗಿ ಶಾಲೆ ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವಯೋವೃದ್ಧರು, ಅನಾರೋಗ್ಯ ಪೀಡಿತರನ್ನು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಸೇರಿಸಲು ಆಗದೆ ಮಾರ್ಗಮಧ್ಯೆ ಸಾವು ನೋವುಗಳೂ ಆಗಿವೆ. ಮಳೆಗಾಲದಲ್ಲಂತೂ ಕೆಸರು ತುಂಬಿದ ಗುಂಡಿಗಳಿಂದ ರಸ್ತೆಯಲ್ಲಿ ಓಡಾಡಲು ತುಂಬಾ ಕಷ್ಟವಾಗಿದೆ. ಈ ಮುಖ್ಯ ರಸ್ತೆ ಅಭಿವೃದ್ಧಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಸಂಬಂಧಪಟ್ಟ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮುಂದಿನ 40 ದಿನಗಳ ಒಳಗಾಗಿ ರಸ್ತೆ ಅಭಿವೃದ್ಧಿಗೆ ಕ್ರಮಕೈಗೊಳ್ಳದಿದ್ದರೆ 6 ಗ್ರಾಮಗಳ ಗ್ರಾಮಸ್ಥರು ಲೋಕೋಪಯೋಗಿ ಕಚೇರಿ ಎದುರು ರಸ್ತೆ ಅಭಿವೃದ್ಧಿಪಡಿಸುವವರೆಗೂ ಧರಣಿ ನಡೆಸುವುದಾಗಿ ಎಚ್ಚರಿಸಿದರು.

ಬಳಿಕ ಶಿರಸ್ತೇದಾರ್ ಮಹದೇವಪ್ರಸಾದ್ ಹಾಗೂ ಮಹೇಶ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಗೋವರ್ಧನ್, ಗ್ರಾಪಂ ಉಪಾಧ್ಯಕ್ಷ ವೆಂಕಟೇಶ್, ದೇವರಾಜು, ಮಂಜುನಾಥ್, ರಮೇಶ್, ಅನಂತು, ಶ್ರೀಕಂಠ, ರವಿಕುಮಾರ್, ಸುಂದರೇಶ್, ಮಲ್ಲೇಶ್, ನಾಗರಾಜು, ರಂಗಸ್ವಾಮಿ, ಉಪ್ಪಿನಹಳ್ಳಿ ಮಹದೇವು, ಮಹದೇವಶೆಟ್ಟಿ, ಶ್ರೀನಿವಾಸ್, ಪ್ರಸನ್ನ, ಕೃಷ್ಣ, ದೇವರಸನ ಹಳ್ಳಿ, ಹೊಸೂರು, ಉಪ್ಪಿನಹಳ್ಳಿ, ಗೊಣತಗಾಲ, ಸಿಂಗಾರಿಪುರ, ಶ್ರೀನಗರ ಗ್ರಾಮಸ್ಥರು ಇದ್ದರು.

ಗಾಂಜಾ ಮಾರುತ್ತಿದ್ದ ವ್ಯಕ್ತಿ ಬಂಧನ

ಬೈಲಕುಪ್ಪೆ, ಆ.1– ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಬೈಲಕುಪ್ಪೆ ಪೊಲೀಸರು ಬಂಧಿಸಿದ್ದಾರೆ.



ಪಿರಿಯಾಪಟ್ಟಣ ತಾಲೂಕಿನ ಆಯಿರ್ಬೀಡು ಗ್ರಾಮದ ಸೈಯದ್ ಅನ್ವರ್(38) ಬಂಧಿತ ಆರೋಪಿ. ಈತ ಬೈಲಕುಪ್ಪೆ ಟಿಬೆಟಿಯನ್ ನಿರಾಶ್ರಿತರ ಕ್ಯಾಂಪ್‌ಗೆ ತೆರಳುವ ರಸ್ತೆಯ ಲಾಸಾಬಾರ್ ಎದುರು 63 ಗ್ರಾಂ ಗಾಂಜಾವನ್ನು ಮಾರುತ್ತಿದ್ದ ಈ ವೇಳೆ ಖಚಿತ ಮಾಹಿತಿ ಮೇರೆಗೆ ಎಸ್‌ಐ ಅಜಯ್ ಕುಮಾರ್ ನೇತೃತ್ವದಲ್ಲಿ ದಾಳಿ ನಡೆಸಿ ಆರೋಪಿ ಬಂಧಿಸಿ ಆತನಿಂದ ಗಾಂಜಾ ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಕಾರ್ಯಾಚರಣೆಯಲ್ಲಿ ಮಹದೇವಪ್ಪ, ಕುಮಾರಸ್ವಾಮಿ, ಚೇತನ್ ಕುಮಾರ್ ಇದ್ದರು.

ಕಂಪಲಾಪುರದಲ್ಲಿ ಡೇರಿ ವಾರ್ಷಿಕ ಮಹಾಸಭೆ

ಕಂಪಲಾಪುರ, ಆ.1– ಅಧಿಕಾರ ಶಾಶ್ವತ ಅಲ್ಲ. ಅಧಿಕಾರದಲ್ಲಿದ್ದಾಗ ರೈತಪರವಾಗಿ ಯಾವ ಕೆಲಸ ಮಾಡಿದ್ದೇವೆ ಎಂಬುದು ಮುಖ್ಯ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು.

ಇಲ್ಲಿನ ಹಾಲಿನ ಡೇರಿ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ನಾನು ಆಕಸ್ಮಿಕವಾಗಿ ಮೈಮುಲ್ ಅಧ್ಯಕ್ಷನಾದೆ. ಅದಕ್ಕೆ ಮೂಲ ಕಾರಣ ನಮ್ಮ ಹಿರಿಯ ನಾಯಕರಾದ ಶಾಸಕ ಜಿ.ಟಿ.ದೇವೇಗೌಡರು. ಹೀಗಾಗಿ ಅವರಿಗೆ ನಾನು ಋಣಿಯಾಗಿರುತ್ತೇನೆ ಎಂದರು.

ನಾನು ಹಾಲು ಒಕ್ಕೂಟದ ನಿರ್ದೇಶಕನಾದಾಗ ಪಿರಿಯಾಪಟ್ಟಣ ತಾಲೂಕಿನಲ್ಲಿ ನಿತ್ಯ ಕೇವಲ 40 ಸಾವಿರ ಲೀ ಹಾಲು ಉತ್ಪಾದನೆಯಾಗುತ್ತಿತ್ತು. ಅಧ್ಯಕ್ಷನಾದ ಬಳಿಕ ನಿತ್ಯ 2 ಲಕ್ಷ ಲೀ ಹಾಲು ಉತ್ಪಾದನೆಯಾಗುತ್ತಿದೆ. ಅದರ ಕೀರ್ತಿ ಉತ್ಪಾದಕರಿಗೆ ಸಲ್ಲಬೇಕು. ಪ್ರತಿ ಲೀಟರ್ ಹಾಲಿನ ದರವನ್ನು 25 ರೂ.ನಿಂದ 36 ರೂ.ಗೆ ಏರಿಸಿದ್ದು ನನ್ನ ಅವಧಿಯಲ್ಲೇ.



ಕಂಪಲಾಪುರ ಡೇರಿ ವಾರ್ಷಿಕ ಮಹಾಸಭೆಯನ್ನು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು.

ಗುಜರಾತ್ ನಂತರ ಹಾಲು ಉತ್ಪಾದನೆಯಲ್ಲಿ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದ ಅವರು ಹಾಲು ಉತ್ಪಾದಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಮೈಸೂರಿನಲ್ಲಿ ಈಗಾಗಲೇ 13 ಕೋಟಿ ರೂ. ವೆಚ್ಚದಲ್ಲಿ 250 ಮಕ್ಕಳಿಗೆ ಅನುಕೂಲವಾಗುವಂತೆ ಸುಸಜ್ಜಿತ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಒಂದು ವರ್ಷಕ್ಕೆ ಸೀಮಿತವಾದ ರಾಸು ವಿಮೆಯನ್ನು 3 ವರ್ಷಕ್ಕೆ ವಿಸ್ತರಿಸಿದ್ದು, ರೈತರು ಒಮ್ಮೆ ಹಣ ಕಟ್ಟಿದರೆ ಸಾಕು ಎಂದ ಅವರು ಹಾಲು ಉತ್ಪಾದಕರಿಗಾಗಿ ರುವ ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಗುಣಮಟ್ಟದ ಹಾಲು ಉತ್ಪಾದನೆ ಮಾಡಿ ಹೆಚ್ಚು ಲಾಭ ಗಳಿಸಿ ಎಂದರು. ಟಿಎಪಿಸಿಎಂಎಸ್ ನಿರ್ದೇಶಕ ಕೆ.ಕುಮಾರ್ ಮಾತನಾಡಿದರು. ಸಿಇಓ ಕಿಶೋರ್ ಸಂಘದ ವಾರ್ಷಿಕ ವರದಿ ಮಂಡಿಸಿ 2023–24ನೇ ಸಾಲಿಗೆ ನಮ್ಮ ಸಂಘ 8.42 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ಸಂಘಕ್ಕೆ ಅತಿ ಹೆಚ್ಚು ಹಾಲು ಸರಬರಾಜು ಮಾಡಿದ, ಅತೀ ಹೆಚ್ಚು ಹಾಲು ಖರೀದಿ ಮಾಡಿದವರನ್ನು ಸನ್ಮಾನಿಸಲಾಯಿತು.

ವಿಸ್ತರಣಾಧಿಕಾರಿ ನಿಶ್ಚಿತ್, ನಂದಿನಿ, ಡಾ.ಸತೀಶ್, ಅಧ್ಯಕ್ಷ ಕೆ.ಸ್ವಾಮಿ, ಉಪಾಧ್ಯಕ್ಷ ಶಿವಣ್ಣ, ನಿರ್ದೇಶಕರಾದ ಕೃಷ್ಣೇಗೌಡ, ಕೆ.ಕೆ.ಸ್ವಾಮಿ ಚೆಲುವೇಗೌಡ, ಜಯಣ್ಣ, ಕೃಷ್ಣ, ನಜೀಬ್, ಸಾಕಮ್ಮ, ಜಯಮ್ಮ, ಮುಖಂಡರಾದ ಪ್ರಕಾಶ್ ಗೌಡ, ಕೆ.ಕುಮಾರ್, ಸಂತೋಷ್, ಲಕ್ಷ್ಮಣ್, ರವಿ, ಗಿರೀಶ್, ಲೋಕೇಶ್, ಸಿಬ್ಬಂದಿ ಮಂಜು, ರೇವಣ್ಣ ಮತ್ತಿತರರಿದ್ದರು.

ಬಡವರ ಅಭಿವೃದ್ಧಿಗೆ ಶ್ರಮಿಸಿದ್ದ ಧ್ರುವನಾರಾಯಣ್



ಮಕ್ಕಳಿಗೆ ನೋಟ್‌ಬುಕ್, ಪೆನ್ ವಿತರಿಸಲಾಯಿತು.

ಮಲ್ಕುಂಡಿ, ಆ.1– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ವಿಭಿನ್ನ ರಾಜಕಾರಣಿಯಾಗಿ ಬಡವರ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ಗ್ರಾಪಂ ಸದಸ್ಯ ಕೆ.ಎನ್.ಮಲ್ಲೇಶ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಸುವಿನಹಳ್ಳಿಯಲ್ಲಿ ಮಾಜಿ ಸಂಸದ ದಿ. ಆರ್.ಧ್ರುವನಾರಾಯಣ್ ಹುಟ್ಟುಹಬ್ಬದ ಅಂಗವಾಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಪುಸ್ತಕ ಹಾಗೂ ಪೆನ್ನು, ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಬ್ರೆಡ್ ಹಾಗೂ ಬಿಸ್ಕೆಟ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಧ್ರುವನಾರಾಯಣ್ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳು ಇಂದಿಗೂ ನಮ್ಮ ಮುಂದಿವೆ. ಅವರು ಸದಾ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಯೋಚಿಸುತ್ತಿದ್ದರು. 2 ಬಾರಿ ಸಂಸದರಾಗಿ ಜನಪರ ಕೆಲಸ ಮಾಡಿ ಬಡವರ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದ ಮಹಾನ್ ವ್ಯಕ್ತಿ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್. ಚಿನ್ನಸ್ವಾಮಿ, ಕೆ.ಎಂ.ಶಿವಪ್ಪ, ಕೆ.ಎನ್.ಶಿವಮೂರ್ತಿ, ನಾಗನಾಯಕ, ಕೃಷ್ಣನಾಯಕ, ಶಿವಯ್ಯ, ಮಹದೇವು, ಜಗದೀಶ್, ಡಿಸಿಸಿ ಸದಸ್ಯ ರಾಜು, ವಣಕಾರಯ್ಯ, ಮಹೇಶ್, ಕುಮಾರ, ನಾಗರಾಜು, ಸಿದ್ದರಾಜು, ಪುರುಷೋತ್ತಮ, ಶಿವನಾಗ, ಸುರೇಶ್, ನಂಜಪ್ಪ, ಗುರುಪ್ರಸಾದ್, ಎನ್‌ಎಸ್‌ಐ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್, ಸಿದ್ದನಾಯಕ, ರುದ್ರೇಶ್, ಮಹದೇವಪ್ಪ, ಶಿವಪ್ಪ, ಸೇರಿದಂತೆ ಇತರರಿದ್ದರು.

ಸರಗೂರಲ್ಲಿ ಚಂದನ್‌ಗೌಡ ಹುಟ್ಟುಹಬ್ಬ

ಸರಗೂರು, ಆ.1– ಸಮಾಜಮುಖಿ ಸೇವೆಯ ಜನನಾಯಕ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಎಂದು ಮುಖಂಡ ಎಸ್.ಹೆಚ್.ರಮೇಶ್ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ ಹಾಗೂ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಭೂಮಿಪುತ್ರ ಸಿ.ಚಂದನ್‌ಗೌಡರ ಹುಟ್ಟುಹಬ್ಬದಲ್ಲಿ ಮಾತನಾಡಿದ ಅವರು, ಕಾಡಂಚಿನಲ್ಲಿ ವಾಸಿಸುತ್ತಿರುವ ರೈತರಿಗೆ ಸಮಸ್ಯೆಯಾದಾಗ ಅವರ ನೆರವಿಗೆ ತಕ್ಷಣ ಚಂದನ್‌ಗೌಡ ಧಾವಿಸಿದ್ದಾರೆ. ಅಲ್ಲದೇ ಸಂಕಷ್ಟಕ್ಕೊಳಗಾದವರಿಗೆ ಸಹಾಯಧನ ನೀಡುವ ಮೂಲಕ ಅಧಿಕಾರಿಗಳೊಂದಿಗೆ ಮಾತನಾಡಿ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ.



ಸಿ.ಚಂದನ್‌ಗೌಡ ಅವರ ಹುಟ್ಟುಹಬ್ಬ ಅಂಗವಾಗಿ ವಿವೇಕಾನಂದ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಅನ್ನ ನೀಡುವ ರೈತರ ಮಣ್ಣಿನ ಫಲವತ್ತತೆ ಉಳಿಸಿ ಎಂದು ಸಂದೇಶ ನೀಡುತ್ತಾ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರ ಕಾಯಕ ನಿರಂತರವಾಗಿರಲಿ ಎಂದು ಶುಭ ಕೋರಿದರು.

ಹುಟ್ಟುಹಬ್ಬ ಅಂಗವಾಗಿ ಪಟ್ಟಣದಲ್ಲಿ ಅಭಿಮಾನಿಗಳು ವಿವಿಧ ಸೇವಾ ಕಾರ್ಯ ಹಮ್ಮಿಕೊಂಡಿದರು. ಪಟ್ಟಣಕ್ಕೆ ಭೂಮಿಪುತ್ರ ಸಿ.ಚಂದನ್‌ಗೌಡ ಆಗಮಿಸುತ್ತಿದಂತೆ ಪಟಾಕಿ ಸಿಡಿಸಿ ಅಭಿಮಾನಿಗಳು ಬರಮಾಡಿಕೊಂಡರು. ನಂತರ ಅವರಿಗೆ ಶಾಲು ಹೊದಿಸಿ ಹಾರಹಾಕಿ ಸನ್ಮಾನಿಸಿ, ಸಿಹಿ ಹಂಚಿ ಕೇಕ್ ಕಟ್ ಮಾಡಿದರು. ಬಳಿಕ ವಿವೇಕಾನಂದ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣು–ಹಂಪಲು, ಬ್ರೆಡ್ ವಿತರಿಸಲಾಯಿತು. ವಿವೇಕಾನಂದ ಆಸ್ಪತ್ರೆ ವತಿಯಿಂದ ಚಂದನ್‌ಗೌಡ ಅವರನ್ನು ಇದೇ ವೇಳೆ ಅಭಿನಂದಿಸಲಾಯಿತು.

ಈ ವೇಳೆ ತಾಲೂಕು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಕಾರ್ಯಕಾರಿ ಮಂಡಳಿ ಮಾದೇಗೌಡ, ಉಮೇಶ್‌ಗೌಡ, ಜಿ.ಸಿ.ಲೋಕೇಶ್, ಮಣಿ, ಹೆಚ್.ಎಸ್.ರಮೇಶ್, ಮನು, ವಿ.ಜಿ.ಅಶೋಕ್, ಬೈರೇಗೌಡ, ದಿನೇಶ್, ನಾಗರಾಜು, ಸತೀಶ್, ಎಂ.ನಾಗರಾಜು, ನವೀನ್, ಹರೀಶ್, ಲೋಕೇಶ್, ಸುರೇಶ್ ಇನ್ನಿತರರಿದ್ದರು

ಕೋಟೆಯಲ್ಲಿ ವ್ಯಸನಮುಕ್ತ ದಿನಾಚರಣೆ



ವ್ಯಸನಮುಕ್ತ ದಿನಾಚರಣೆ ಅಂಗವಾಗಿ ಜಾಥಾ ನಡೆಯಿತು.

ಹೆಚ್.ಡಿ.ಕೋಟೆ, ಆ.1– ಡಾ.ಮಹಾಂತ ಶಿವಯೋಗಿಗಳು ಜನರ ದುಶ್ಚಟ ಬಿಡಿಸಲು ಜೋಳಿಗೆ ಹಿಡಿದು ಭಿಕ್ಷೆ ಬೇಡುವ ಮೂಲಕ ಅರಿವು ಮೂಡಿಸಲು ಯತ್ನಿಸಿದ್ದರು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ ಮತ್ತು ಶಿಕ್ಷಣ ಇಲಾಖೆ ಸಹಯೋಗದಲ್ಲಿ ಡಾ.ಮಹಾಂತ ಶಿವಯೋಗಿಗಳ ಜಯಂತಿ ಮತ್ತು ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಥಾದಲ್ಲಿ ಮಾತನಾಡಿದ ಅವರು, ದುಶ್ಚಟಗಳ ವಿರುದ್ಧ ಹೋರಾಡಿದವರ ಸಾಲಿನಲ್ಲಿ ಮಹಾಂತ ಶಿವಯೋಗಿಗಳು ಮೊದಲಿಗರು. ಅವರು ದುಶ್ಚಟಗಳ ವಿರುದ್ಧ ಹೋರಾಡಿದ ರೀತಿ ಗಮನಿಸಿದಾಗ ಎಲ್ಲರಲ್ಲೂ ಸಹ ಧನ್ಯತಾ ಭಾವ ಮೂಡುತ್ತದೆ ಎಂದರು.

ಡಾ.ಮಹಾಂತ ಶಿವಯೋಗಿಗಳ ಜನ್ಮದಿನವನ್ನು ಕರ್ನಾಟಕದಲ್ಲಿ ವ್ಯಸನ ಮುಕ್ತ ದಿನಾಚರಣೆಯಾಗಿ ಆಚರಣೆ ಮಾಡಲಾಗುತ್ತದೆ. ಅದೇ ರೀತಿ ಆ.1ರಂದು ವ್ಯಸನ ಮುಕ್ತ ದಿನ ಆಚರಿಸುತ್ತಿದ್ದೇವೆ ಎಂದರು.

ಜಾಥಾದಲ್ಲಿ ಪಟ್ಟಣದ ಬಾಲಕಿಯರ ಶಾಲೆ, ಆದರ್ಶ ಶಾಲೆ, ವಿಶ್ವಭಾರತಿ ಸೇರಿದಂತೆ ವಿವಿಧ ಶಾಲೆ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ವೇಳೆ ವಿದ್ಯಾರ್ಥಿಗಳು ವಿವಿಧ ಘೋಷವಾಕ್ಯ ಕೂಗುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಬಿಇಓ ಮಾರಯ್ಯ, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಗ್ರೇಡ್ ಟು ತಹಸೀಲ್ದಾರ್ ಶ್ರೀಧರ್, ಎಸ್‌ಐ ಪ್ರಕಾಶ್, ಉಪ ತಹಸೀಲ್ದಾರ್ ಮಹೇಶ್, ಸುಗುಣ, ಜಾಹೀದಾ, ಸಿದ್ದರಾಜು, ವೇದ ಕುಮಾರ್, ವಿವೇಕಾನಂದ ಭಜಂತ್ರಿ, ಹೇಮಂತ, ನಿಶ್ಚಿತ, ರೇಷ್ಮಾ ಇದ್ದರು.

ಹುಣಸೂರು ಉಪ ವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕಾರ



ಹುಣಸೂರು, ಆ.1– ಹುಣಸೂರು ಉಪವಿಭಾಗಾಧಿಕಾರಿಯಾಗಿ ಹೆಚ್.ಬಿ.ವಿಜಯಕುಮಾರ್ ಅಧಿಕಾರ ಸ್ವೀಕರಿಸಿದರು. ಬೆಂಗಳೂರಿನ ಶಿಷ್ಟಾಚಾರ ಸಚಿವಾಲಯದ ಕಿರಿಯ ಶ್ರೇಣಿ ಅಧಿಕಾರಿ ಹೆಚ್.ಬಿ.ವಿಜಯಕುಮಾರ್ ಅವರು ಹುಣಸೂರು ಉಪವಿಭಾಗಾಧಿಕಾರಿಯಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಮೈಸೂರಿನ ವಿಶೇಷ ಭೂಸ್ವಾಧೀನಾಧಿಕಾರಿ (ಕೈಗಾರಿಕಾ ಅಭಿವೃದ್ಧಿ ಮಂಡಳಿ) ಡಾ.ಎನ್.ಸಿ.ವೆಂಕಟರಾಜು ಅವರಿಂದ ಅಧಿಕಾರ ವಹಿಸಿಕೊಂಡರು.

ಕರು ಮೇಲೆ ಚಿರತೆ ದಾಳಿ

ಹುಣಸೂರು, ಆ.1– ಹಾಡಹಗಲೇ ಕರು ಮೇಲೆ ಚಿರತೆ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ತಾಲೂಕಿನ ಬಾಚಳ್ಳಿಯಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ. ಗ್ರಾಮದ ಸುಬ್ರಹ್ಮಣ್ಯ ಅವರು ತಮ್ಮ ಮನೆ ಹಿಂಭಾಗದ ಕೊಟ್ಟಿಗೆಯಲ್ಲಿ ಕರು ಕಟ್ಟಿ ಹಾಕಿದ್ದರು. ಆದರೆ ಮನೆ ಪಕ್ಕದಲ್ಲೇ ಇರುವ ಗುಡ್ಡಗಾಡು ಕುರುಚಲು ಅರಣ್ಯದಿಂದ ಬಂದ ಚಿರತೆ ಕರುವಿನ ಮೇಲೆ ದಾಳಿ ನಡೆಸಿದೆ. ನಾಯಿ ಬೊಗಳುವಿಕೆಯಿಂದ ಮನೆಯಿಂದ ಹೊರ ಬಂದ ಸುಬ್ರಹ್ಮಣ್ಯ ಅವರನ್ನು ಕಂಡ ಚಿರತೆ ಪಕ್ಕದ ಗುಡ್ಡಗಾಡಿನತ್ತ ಓಡಿ ಹೋಗಿದೆ ಎನ್ನಲಾಗಿದೆ. ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದೇ ವೇಳೆ ಪಶುವೈದ್ಯರು ಕರುವಿಗೆ ಚಿಕಿತ್ಸೆ ನೀಡಿದ್ದಾರೆ.

ಧ್ರುವನಾರಾಯಣ್ ಸಾಮಾಜಿಕ ಬದ್ಧತೆ ಹೊಂದಿದ್ದ ರಾಜಕಾರಣಿ

ಮಾಜಿ ಶಾಸಕ ಕಳಲೆ ಕೇಶವಮೂರ್ತಿ



ರಕ್ತದಾನ ಶಿಬಿರಕ್ಕೆ ಮಾಜಿ ಶಾಸಕ ಕೇಶವ ಮೂರ್ತಿ ಚಾಲನೆ ನೀಡಿದರು.

ನಂಜನಗೂಡು, ಆ.1– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ಸ್ನೇಹಶೀಲ ವ್ಯಕ್ತಿತ್ವ, ಸಾಮಾಜಿಕ ಬದ್ಧತೆ ಹೊಂದಿದ್ದ ಅಪರೂಪದ ರಾಜಕಾರಣಿ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ತಾಲೂಕಿನ ಹೆಡತಲೆ ಗ್ರಾಮದಲ್ಲಿ ದಿ.ಆರ್. ಧ್ರುವನಾರಾಯಣ್ ಅವರ 63ನೇ ಹುಟ್ಟುಹಬ್ಬ ಅಂಗವಾಗಿ ತಾಲೂಕು ಕಾಂಗ್ರೆಸ್ ಸಮಿತಿ ಮತ್ತು ಯಂಗ್ ಯುವ ಬ್ರಿಗೇಡ್ ಕಾರ್ಯಕರ್ತರು ಏರ್ಪಡಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಧ್ರುವನಾರಾಯಣ್ ಅಭಿವೃದ್ಧಿಯ ಹರಿಕಾರ ಎಂದೇ ಹೆಸರು ಪಡೆದಿದ್ದವರು. ಅಭಿವೃದ್ಧಿಯಲ್ಲಿ ದೇಶಕ್ಕೆ 4ನೇ ಸಂಸದರಾಗಿ ರಾಜ್ಯಕ್ಕೆ ಮೊದಲ ಸಂಸದರೆಂದು ಹೆಗ್ಗಳಿಕೆ ಪಡೆದಿದ್ದ ಅತ್ಯಂತ ಕ್ರಿಯಾಶೀಲ ಸಂಸದರು. ಅಲ್ಲದೇ ಹೆಚ್ಚು ಪ್ರಶ್ನೆಗಳನ್ನು ಕೇಳಿ ಕ್ಷೇತ್ರಕ್ಕೆ ಹೆಚ್ಚು ಅನುದಾನ ತರುತ್ತಿದ್ದವರು. ಅವರ ನೆನಪಿನಲ್ಲಿ ರಕ್ತದಾನ ಶಿಬಿರ ಏರ್ಪಡಿಸಿರುವುದು ಉತ್ತಮ ಬೆಳವಣಿಗೆ ಎಂದರು.

ಕಾಂಗ್ರೆಸ್ ಎಸ್ಸಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ ಮಾತನಾಡಿ, ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬದ ಅಂಗವಾಗಿ ಯಂಗ್ ಯುವ ಬ್ರಿಗೇಡ್ ಮತ್ತು ಕಾಂಗ್ರೆಸ್ ಸಮಿತಿಯವರು ತಾಲೂಕಿನ ಗೋಳೂರು ಗ್ರಾಮದಲ್ಲಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ, ರಕ್ತದಾನ ಶಿಬಿರದಂತಹ ಸಾಮಾಜಿಕ ಚಟುವಟಿಕೆಗಳ ಮೂಲಕ ಅವರಿಗೆ ಗೌರವ ಸಲ್ಲಿಸಿದ್ದಾರೆ ಎಂದರು.

ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಯಂಗ್ ಯುವ ಬ್ರಿಗೇಡ್ ಜಿಲ್ಲಾಧ್ಯಕ್ಷ ಪ್ರವೀಣ್, ತಾಲೂಕು ಅಧ್ಯಕ್ಷ ರಾಜು, ಮುಖಂಡರಾದ ಶ್ರೀನಿವಾಸಮೂರ್ತಿ, ಎನ್.ಎಂ.ಮಂಜುನಾಥ್, ಶಿವಪ್ಪದೇವರು, ನಾಗರಾಜಯ್ಯ, ಮುದ್ದುಮಾದಶೆಟ್ಟಿ, ಕಾಂಗ್ರೆಸ್ ಯುವ ಅಧ್ಯಕ್ಷ ಅಶೋಕ್ ಸೇರಿದಂತೆ ಹಲವರಿದ್ದರು.

ಮನಸ್ತಾಪ ಮರೆತು ಸಮಾಜದ ಕೆಲಸ ಮಾಡಬೇಕು

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು



ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.1– ಚುನಾವಣೆ ಮುಗಿದು ಪದಾಧಿಕಾರಿಗಳಾಗಿ ಆಯ್ಕೆಯಾದ ನಂತರ ನಾವೆಲ್ಲರೂ ಮನಸ್ತಾಪ ಮರೆತು ಸಮಾಜದ ಕೆಲಸ ಮಾಡಲು ಮುಂದಾಗಬೇಕಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು ತಿಳಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕಕ್ಕೆ ಆಯ್ಕೆಗೊಂಡ ನಿರ್ದೇಶಕರು ಹಾಗೂ ಜಿಲ್ಲಾಧ್ಯಕ್ಷರಿಗೆ ಪಟ್ಟಣದ ನಿವೃತ್ತ ನೌಕರ ಕೆಇಬಿ ಸಿದ್ದಲಿಂಗಸ್ವಾಮಿಯವರ ನಿವಾಸದಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾವು ರಾಜಕೀಯ ಮುಖಂಡರಾಗಿ ಚುನಾವಣೆಗೆ ನಿಂತಿರಲಿಲ್ಲ. ಸಮಾಜಕ್ಕೆ ಅಳಿಲು ಸೇವೆ ಸಲ್ಲಿಸುವ ವ್ಯಕ್ತಿ ಆಯ್ಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಚುನಾವಣೆಗೆ ಹೋಗಿದ್ದೆವು. ಚುನಾವಣೆ ಮುಗಿದ ನಂತರ ನಮ್ಮ ವಿರೋಧಿ ಗುಂಪಿನಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದವರನ್ನು ನಮ್ಮ ಸಹೋದರರಂತೆ ಕಾಣುತ್ತೇವೆ. ಎಲ್ಲರೂ ಒಗ್ಗೂಡಿ ಕಂಕಣಬದ್ಧರಾಗಿ ಕೆಲಸ ಮಾಡಬೇಕಿದೆ ಎಂದರು.

ತಾಲೂಕು, ಜಿಲ್ಲಾ, ರಾಜ್ಯ ಕಮಿಟಿ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಮುಂದಿನ ದಿನಗಳಲ್ಲಿ ಎಲ್ಲರೂ ಒಟ್ಟಾಗಿ ಕುರಿತು ಚರ್ಚೆ ಮಾಡೋಣ. ಸಮಾಜ ಕಟ್ಟುವಂತಹ ಬೆಳವಣಿಗೆಗೆ ಎಲ್ಲರೂ ಮುನ್ನುಡಿ ಬರೆಯಬೇಕು ಎಂದರು. ವಾಟಾಳು ಶ್ರೀಮಠದ ಶ್ರೀಸಿದ್ಧಲಿಂಗಶಿವಾಚಾರ್ಯ ಸ್ವಾಮಿ ಮಾತನಾಡಿ, ತಾಲೂಕಿನಲ್ಲಿ ಬಸವ ಭವನ ನಿರ್ಮಾಣಕ್ಕೆ ತಿ.ನರಸೀಪುರದಲ್ಲಿ ಜಾಗ ಗುರುತಿಸುವ ಪ್ರಕ್ರಿಯೆಗೆ ಚಾಲನೆ ದೊರಕಿದೆ. ತಾಲೂಕಿನ ವೀರಶೈವ ವಿದ್ಯಾರ್ಥಿ ನಿಲಯ ಶಿಥಿಲಗೊಂಡಿದೆ. ಕಾರ್ಯಕ್ರಮವೊಂದರಲ್ಲಿ ಸಚಿವ ಮಹದೇವಪ್ಪರಿಗೆ ಹೇಳಿದ್ದೇನೆ. ನೀವು ನಂಜನಗೂಡಿನಲ್ಲಿ ವೀರಶೈವ ಭವನಕ್ಕೆ ಜಾಗ ನೀಡಿ ಅನುದಾನ ಸಹ ಕೊಟ್ಟಿದ್ದೀರಾ, ಆದರೆ 25 ವರ್ಷಗಳಿಂದ ಪ್ರತಿನಿಧಿಸುವ ತಿ.ನರಸೀಪುರ ಕ್ಷೇತ್ರಕ್ಕೆ ಏನನ್ನೂ ನೀಡಿಲ್ಲ ಎಂದು ಹೇಳಿದ್ದರಿಂದ ಸಮಾಜದ ಬಸವ ಭವನಕ್ಕೆ ಸ್ಥಳ ಗುರುತಿಸುವಂತೆ ತಹಸೀಲ್ದಾರ್ ಅವರಿಗೆ ಸೂಚನೆ ನೀಡಿದ್ದಾರೆ. ಹಾಗಾಗಿ ನಮ್ಮ ಸಮಾಜದವರು ಬಸವ ಭವನಕ್ಕೆ ಬೇಕಿರುವ ಜಾಗ ಗುರುತಿಸಬೇಕು ಎಂದರು.

ಮದ್ದಾರ ಲಿಂಗಯ್ಯನಹುಂಡಿ ಮಠದ ಪೀಠಾಧ್ಯಕ್ಷ ಗೌರಿಶಂಕರ ಸ್ವಾಮೀಜಿ ಮಾತನಾಡಿ, ಸಮಾಜದ ನ್ಯೂನತೆಗಳು, ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಮಾಜದ ಮುಖಂಡರು ನಿರ್ದೇಶಕರಾಗಿ ಆಯ್ಕೆಯಾಗಿದ್ದೀರಾ. ಸಂಘದಲ್ಲಿ ಸಂಪನ್ಮೂಲ ಕ್ರೋಢೀಕರಿಸುವ ಕೆಲಸ ಮಾಡಬೇಕು. ಸಮಾಜದಲ್ಲಿ ಉಳ್ಳವರು ಸಂಘಕ್ಕೆ ಹಣಕಾಸಿನ ನೆರವು ನೀಡಲು ಮುಂದಾಗಬೇಕು. ಹಾಗಾದಾಗ ಯಾವುದೇ ದೇಣಿಗೆ ಸಂಗ್ರಹಿಸುವ ಅವಶ್ಯಕತೆ ಇರುವುದಿಲ್ಲ ಎಂದರು.

ಸಂಘ ಸಮಗ್ರವಾಗಿ ಅಭಿವೃದ್ಧಿಯಾಗುವ ಮೂಲಕ ಮಾದರಿ ಸಂಘವಾಗಿ ಬೆಳವಣಿಗೆಯಾಗಬೇಕು. ನೂತನ ನಿರ್ದೇಶಕರಿಗೆ ಉತ್ತಮ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ. ಅದರ ಸದುಪಯೋಗಕ್ಕೆ ಮುಂದಾಗಿ ಸಮಾಜದಲ್ಲಿ ನೊಂದವರಿಗೆ ಸಾಂತ್ವನ ಹೇಳಿ ಅವರ ಬೆನ್ನೆಲುಬಾಗಿ ನಿಲ್ಲುವ ಕೆಲಸಕ್ಕೆ ಮುಂದಾಗಿ ಎಂದು ಸಲಹೆ ನೀಡಿದರು. ಮುಡುಕನಪುರ ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು. ಈ ವೇಳೆ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಜಿಲ್ಲಾ ನಿರ್ದೇಶಕರಾದ ಷಡಕ್ಷರಿ, ಶೇಖರ್, ಕೆಇಬಿ ನಿವೃತ್ತ ನೌಕರ ಸಿದ್ದಲಿಂಗಸ್ವಾಮಿ, ನಿರ್ದೇಶಕರಾದ ಸುಗಂಧರಾಜು, ಕಿರಗಸೂರು ಎಂ.ಸುರೇಶ್, ತೊಂಟೇಶ್, ಎಸ್.ಕೆ.ಕಿರಣ್, ಬೆನಕನಹಳ್ಳಿ ವಿಜಯಕುಮಾರ್, ಕಾರ್ ಮಲ್ಲಪ್ಪ, ಓಂಕಾರ್ ಸ್ವಾಮಿ, ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷ ತೊಟ್ಟವಾಡಿ ಮಹಾದೇವಸ್ವಾಮಿ, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ, ಕಸಬಾ ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ನಿರ್ದೇಶಕ ಅಂಗಡಿ ಶೇಖರ್, ಫ್ಯಾನ್ಸಿ ಮೋಹನ್, ನಾಗೇಶ್, ಮುತ್ತಲವಾಡಿ ಗ್ರಾಪಂ ಉಪಾಧ್ಯಕ್ಷ ಅಶೋಕ್, ಕೆಬ್ಬೆಹುಂಡಿ ಶಿವಕುಮಾರ್, ಕಾರ್ಯದರ್ಶಿ ಪರಶಿವಮೂರ್ತಿ, ಆಡಿಟರ್ ಮಂಜುನಾಥ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ನಟೇಶ್, ಕರೋಹಟ್ಟಿ ಬಸವರಾಜು, ಡೈರಿ ಕಾರ್ಯದರ್ಶಿ ನಂಜುಂಡಸ್ವಾಮಿ, ಪದವೀಧರ ಘಟಕದ ಅಧ್ಯಕ್ಷ ಪರಮೇಶ್ ಪಟೇಲ್, ನವೀನ್ ಕುಮಾರ್, ವೃಷ್ಟಿ, ಪಂಚಾಕ್ಷರಿ, ಹಿರಿಯೂರು ಪ್ರಕಾಶ್, ಶೇಖರಪ್ಪ ಮತ್ತಿತರರಿದ್ದರು.

ವಯನಾಡು ಸರಣಿ ಭೂಕುಸಿತ ದುರಂತ

ಮೈಸೂರು ಜಿಲ್ಲಾಡಳಿತದಿಂದ ರಕ್ಷಣಾ ಕಾರ್ಯಕ್ಕೆ ಅಗತ್ಯವಿರುವ ಸಾಮಗ್ರಿ ಸಂಗ್ರಹ

ಮೈಸೂರು, ಆ.1(ಎಸ್‌ಬಿಡಿ)– ಭೀಕರ ದುರಂತದಿಂದ ನಲುಗಿ ಹೋಗಿರುವ ನೆರೆ ರಾಜ್ಯ ಕೇರಳದ ನೆರವಿಗೆ ಮೈಸೂರು ಜಿಲ್ಲಾಡಳಿತ ಮುಂದಾಗಿದೆ.

ದುರಂತ ಸಂಭವಿಸಿರುವ ಕೇರಳದ ವಯನಾಡಿಗೆ ನೆರವು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಡಳಿತ ದಾನಿಗಳ ಸಹಕಾರದೊಂದಿಗೆ ಅಲ್ಲಿನ ರಕ್ಷಣಾ ಕಾರ್ಯಕ್ಕೆ ಅಗತ್ಯ ನೆರವು ನೀಡಲು ಸಜ್ಜಾಗಿದೆ.

ಜಿಲ್ಲಾಧಿಕಾರಿಗಳ ನಿರ್ದೇಶನ ಹಾಗೂ ಮಹಾನಗರ ಪಾಲಿಕೆ ಆಯುಕ್ತರ ಆದೇಶದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ 'ವಿಪತ್ತು ನಿರ್ವಹಣಾ ಕೊಠಡಿ' ಆರಂಭಿಸಿ, ಮುಖ್ಯವಾಗಿ ರಕ್ಷಣಾ ಕಾರ್ಯಾಚರಣೆಗೆ ಅಗತ್ಯವಾದ ಸಾಮಗ್ರಿಗಳನ್ನು ದಾನಿಗಳಿಂದ ಸಂಗ್ರಹಿಸಲಾಗುತ್ತಿದೆ. ವಲಯ ಕಚೇರಿ–3ರ ಆಯುಕ್ತ ಟಿ.ಎಸ್.ಸತ್ಯಮೂರ್ತಿ(9731398207) ಹಾಗೂ ಕಂದಾಯಾಧಿಕಾರಿ ಎಂ.ಬಸವಣ್ಣ (9008380777) ಅವರನ್ನು ಕೊಠಡಿಯ ನೋಡೆಲ್ ಅಧಿಕಾರಿಗಳಾಗಿ ನಿಯೋಜಿಸಲಾಗಿದೆ.



ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿಯಲ್ಲಿರುವ 'ವಿಪತ್ತು ನಿರ್ವಹಣಾ ಕೊಠಡಿ'ಯಲ್ಲಿ ದಾನಿಗಳು ನೀಡಿದ ವಸ್ತುಗಳನ್ನು ಸಂಗ್ರಹಿಸಲಾಗಿದೆ. ನೋಡೆಲ್ ಅಧಿಕಾರಿಗಳಾದ ಟಿ.ಎಸ್.ಸತ್ಯಮೂರ್ತಿ ಹಾಗೂ ಎಂ.ಬಸವಣ್ಣ ಚಿತ್ರದಲ್ಲಿದ್ದಾರೆ.

ಸಂಘ–ಸಂಸ್ಥೆಗಳು, ಉದ್ಯಮಿಗಳು, ವ್ಯಾಪಾರಿಗಳು ಸೇರಿದಂತೆ ದಾನಿಗಳು ಜಿಲ್ಲಾಡಳಿತದೊಂದಿಗೆ ಈ ಸತ್ಕಾರ್ಯಕ್ಕೆ ಕೈಜೋಡಿಸಬೇಕು. ಸದ್ಯಕ್ಕೆ ದವಸ ಧಾನ್ಯ ಸೇರಿದಂತೆ ಯಾವುದೇ ಆಹಾರ ಪದಾರ್ಥಗಳನ್ನು ಸಂಗ್ರಹಿಸಲು ಸೂಚಿಸಿಲ್ಲ. ಮುಖ್ಯವಾಗಿ ರಕ್ಷಣಾ ಕಾರ್ಯಾಚರಣೆಗೆ ಅಗತ್ಯವಾದ ಸ್ಟೀಲ್ ಕಟ್ಟರ್, ಗ್ಯಾಸ್ ಕಟ್ಟರ್, ಸ್ಟ್ರೆಚರ್ಸ್, ಬೆಡ್‌ಗಳು, ಇಂಡಸ್ಟ್ರಿಯಲ್ ಲೈಟ್ಸ್, ಟಾರ್ಚ್‌ಗಳು, ಮಾಸ್ಕ್, ನ್ಯಾಪ್ಕಿನ್ಸ್, ಗ್ಲೌಸ್‌ಗಳು, ರೇನ್‌ಕೋಟ್‌ಗಳು, ಸಂತ್ರಸ್ತರಿಗೆ ಸ್ವೆಟರ್ಸ್, ಜರ್ಕಿನ್ಸ್, ಬೆಡ್‌ಶೀಟ್, ಹೊದಿಕೆ, ಈ ರೀತಿಯ ವಸ್ತುಗಳನ್ನು ವಿಪತ್ತು ನಿರ್ವಹಣಾ ಕೊಠಡಿಗೆ ತಲುಪಿಸಬಹುದು. ಸಂಗ್ರಹವಾದ ವಸ್ತುಗಳನ್ನು ಜಿಲ್ಲಾಡಳಿತದ ನಿರ್ದೇಶನ ಪಡೆದು, ಮಹಾನಗರ ಪಾಲಿಕೆ ವತಿಯಿಂದಲೇ ವಯನಾಡಿಗೆ ತಲುಪಿಸಲಾಗುವುದು ಎಂದು ನೋಡೆಲ್ ಅಧಿಕಾರಿ ಸತ್ಯಮೂರ್ತಿ ತಿಳಿಸಿದ್ದಾರೆ.

ಗುರುವಾರ ಸಂಗ್ರಹವಾಗಿದ್ದು: ಮೊದಲಿಗೆ ವಲಯ ಕಚೇರಿ 3ರ ಅಧಿಕಾರಿಗಳು ಹಾಗೂ ಸಿಬ್ಬಂದಿ ಸುಮಾರು 40 ಸಾವಿರ ರೂ. ಮೌಲ್ಯದ ನಾಲ್ಕು ಸ್ಟೀಲ್ ಕಟ್ಟರ್ ಯಂತ್ರಗಳು ಮತ್ತು ವಲಯ ಕಚೇರಿ 2ರ ವತಿಯಿಂದ 1100 ಹ್ಯಾಂಡ್‌ಗ್ಲೌಸ್ ಹಾಗೂ 1050 ಮಾಸ್ಕ್‌ಗಳನ್ನು ವಿಪತ್ತು ನಿರ್ವಹಣಾ ಕೊಠಡಿಗೆ ನೀಡಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಜಂಟಿ ನಿರ್ದೇಶಕರ ವತಿಯಿಂದ 2040 ನ್ಯಾಪ್ಕಿನ್ಸ್, 504 ಹ್ಯಾಂಡ್ ಸ್ಯಾನಿಟೈಸರ್, ಸಾವಿರ ಮಾಸ್ಕ್, 288 ಗಮ್‌ಬೂಟ್ಸ್ ಹಾಗೂ 1008 ಹ್ಯಾಂಡ್‌ಗ್ಲೌಸ್, ದಟ್ಟಗಳ್ಳಿಯ ಅಮಿಗೋ ಹೈಪರ್ ಮಾರ್ಕೆಟ್ ವತಿಯಿಂದ ಎರಡು ಗ್ಯಾಸ್ ಕಟ್ಟರ್ ಹಾಗೂ ರಾಮಕೃಷ್ಣನಗರದ ಉದ್ಯಮಿ ನರಸಿಂಹೇಗೌಡ ಒಂದು ಸ್ಟೀಲ್ ಕಟ್ಟರ್ ಯಂತ್ರ ನೀಡಿದ್ದಾರೆ.

ಇಂದು ಮೈಸೂರು-ಕೊಡಗು ಜಿಲ್ಲೆಗಳಲ್ಲಿ

ಮುಖ್ಯಮಂತ್ರಿ ಪ್ರವಾಹ ಪರಿಶೀಲನೆ



ಮೈಸೂರು,ಆ.1(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಆ.2ರಂದು ಮೈಸೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ. ಅಂದು ಬೆಳಗ್ಗೆ 10ಕ್ಕೆ ವಿಶೇಷ ವಿಮಾನದ ಮೂಲಕ ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ನಿರ್ಗಮಿಸುವ ಮುಖ್ಯಮಂತ್ರಿಗಳು, ಬೆಳಗ್ಗೆ 10.25ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ.

ಬಳಿಕ ಬೆಳಗ್ಗೆ 10.30ಕ್ಕೆ ಇಲ್ಲಿಂದ ರಸ್ತೆ ಮೂಲಕ ಬೆಳಗ್ಗೆ 10.45ಕ್ಕೆ ನಂಜನಗೂಡು ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ. ನಂತರ ಬೆಳಗ್ಗೆ 11.15ಕ್ಕೆ ನಂಜನಗೂಡು ತಾಲೂಕು ನಿರ್ಗಮಿಸುವ ಮುಖ್ಯಮಂತ್ರಿಗಳು, ರಸ್ತೆ ಮೂಲಕ (ಹುಣಸೂರು, ಆನೆಚಾಕೂರು, ತಿತಿಮತಿ ಮಾರ್ಗವಾಗಿ) ಮಧ್ಯಾಹ್ನ 12.45ಕ್ಕೆ ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ತಲುಪಿ, ಇಲ್ಲಿನ ರಸ್ತೆ ಕುಸಿತ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 1.15ಕ್ಕೆ ಶ್ರೀಮಂಗಲವನ್ನು ನಿರ್ಗಮಿಸಿ, ರಸ್ತೆ ಮೂಲಕ 1.45ಕ್ಕೆ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕು ಕೆದಮಳ್ಳೂರು ಗ್ರಾಮಕ್ಕೆ ಭೇಟಿ ನೀಡಿ, ಇಲ್ಲಿನ ರಸ್ತೆ ಕುಸಿತ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 2.15ಕ್ಕೆ ಇಲ್ಲಿಂದ ನಿರ್ಗಮಿಸಿ ರಸ್ತೆ ಮೂಲಕ ಮಧ್ಯಾಹ್ನ 2.45ಕ್ಕೆ ಮಡಿಕೇರಿಗೆ ಆಗಮಿಸಲಿದ್ದಾರೆ. ಬಳಿಕ ಇಲ್ಲಿನ ಸುದರ್ಶನ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ. ನಂತರ ಸಂಜೆ 4ಕ್ಕೆ ಮಡಿಕೇರಿಯಿಂದ ನಿರ್ಗಮಿಸಿ ರಸ್ತೆ ಮೂಲಕ ಕುಶಾಲನಗರ ತಾಲೂಕಿನ ಮಾದಾಪಟ್ಟಣಕ್ಕೆ ಸಂಜೆ 4.30ಕ್ಕೆ ಆಗಮಿಸಿ, ಇಲ್ಲಿನ ಮನೆ ಕುಸಿತ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ. ನಂತರ ಸಂಜೆ 5ಕ್ಕೆ ಮಾದಾ ಪಟ್ಟಣ ನಿರ್ಗಮಿಸುವ ಮುಖ್ಯಮಂತ್ರಿಗಳು, ರಸ್ತೆ ಮೂಲಕ ಸಂಜೆ 6.30ಕ್ಕೆ ಮೈಸೂರಿಗೆ ಆಗಮಿಸಿ ವಾಸ್ತವ್ಯ ಹೂಡಲಿದ್ದಾರೆ.

ಇಂದು ಮೈಸೂರಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



ಮೈಸೂರು,ಆ.1(ಪಿಎಂ)– ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆ.2ರಂದು ಬೆಳಗ್ಗೆ 11.30ಕ್ಕೆ ಮೈಸೂರಿಗೆ ಆಗಮಿಸಲಿದ್ದಾರೆ. ಬಳಿಕ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಆಷಾಢ ಶುಕ್ರವಾರ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲಿದ್ದಾರೆ. ಬಳಿಕ ಮಧ್ಯಾಹ್ನ 12.30ಕ್ಕೆ ಮೈಸೂರಿನ ಬಿಜೆಪಿ ಕಚೇರಿಗೆ ಭೇಟಿ ನೀಡಲಿದ್ದಾರೆ.

ಶೀಘ್ರದಲ್ಲೇ ವಯನಾಡಿಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನಿಯೋಗ ಭೇಟಿ


ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಭಾಂಗಣದಲ್ಲಿ ಅಧ್ಯಕ್ಷ ಕೆ.ಬಿ. ಲಿಂಗರಾಜು ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು

ಮೈಸೂರು, ಆ.1– ಪ್ರಕೃತಿ ವಿಕೋಪಕ್ಕೆ ತುತ್ತಾಗಿರುವ ಕೇರಳದ ವಯನಾಡಿಗೆ ಎಫ್‌ಕೆಸಿಸಿಐ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನಿಯೋಗ ಶೀಘ್ರದಲ್ಲೇ ಭೇಟಿ ನೀಡಿ, ಅಲ್ಲಿ ದೀರ್ಘಕಾಲಿಕ ಪರಿಹಾರ ಕಾರ್ಯ ಕೈಗೊಳ್ಳುವ ಬಗ್ಗೆ ಅಲ್ಲಿನ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯೊಂದಿಗೆ ಸಭೆ ನಡೆಸಿ, ನಿರ್ಧಾರ ಕೈಗೊಳ್ಳಲು ತೀರ್ಮಾನಿಸಲಾಗಿದೆ.

ಮೈಸೂರಿನ ಸಂಸ್ಥೆಯ ಸಭಾಂಗಣದಲ್ಲಿ ಅಧ್ಯಕ್ಷ ಕೆ.ಬಿ. ಲಿಂಗರಾಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಅವರು, ತಮ್ಮ ಮೂರು ದಶಕಗಳ ಅನುಭವವನ್ನು ಹಂಚಿಕೊಳ್ಳುತ್ತಾ, ಬಟ್ಟೆ, ದಿನಬಳಕೆಯ ವಸ್ತುಗಳು, ರೆಡಿ ಟು ಈಟ್ ಪದಾರ್ಥಗಳನ್ನು ವಯನಾಡಿನ ಸಂತ್ರಸ್ತರಿಗೆ ಕಳುಹಿಸಿಕೊಡುವುದರಲ್ಲಿ ಅರ್ಥವಿಲ್ಲ. ಈ ಪದಾರ್ಥಗಳು ಅಲ್ಲಿಗೆ ತಲುಪುವುದರೊಳಗೆ ಹಾಳಾಗುತ್ತವೆ. ಆದ್ದರಿಂದ ವಯನಾಡಿನಲ್ಲಿ ದೀರ್ಘಕಾಲಿಕ ಯೋಜನೆಗಳನ್ನು ಕೈಗೊಳ್ಳಬೇಕೆಂದು ಹೇಳಿದರಲ್ಲದೆ, ಎಲ್ಲಾ ವ್ಯಾಪಾರಸ್ಥರು ಹಾಗೂ ಕೈಗಾರಿಕೋದ್ಯಮಿಗಳು ಸಹಕಾರ ನೀಡಬೇಕೆಂದು ಕೋರಿದರು.

ಶೀಘ್ರದಲ್ಲೇ ಎಫ್‌ಕೆಸಿಸಿಐ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನಿಯೋಗ ವಯನಾಡಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸುವುದರ ಜೊತೆಗೆ ಅಲ್ಲಿನ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯೊಂದಿಗೆ ಸಭೆ ನಡೆಸಿ ದೀರ್ಘಕಾಲಿಕ ಪರಿಹಾರ ಕಾರ್ಯ ಕೈಗೊಳ್ಳುವ ಬಗ್ಗೆ ಈ ಸಭೆಯಲ್ಲಿ ನಿರ್ಧರಿಸಲಾಯಿತು. ವಯನಾಡಿನ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಯ ನೋಡಲ್ ಅಧಿಕಾರಿಯಾಗಿ ನೇಮಕವಾಗಿರುವ ಸಂಸ್ಥೆಯ ಜಂಟಿ ನಿರ್ದೇಶಕ ಟಿ. ದಿನೇಶ್, ಕಾರ್ಯದರ್ಶಿ ಶಿವಾಜಿ ರಾವ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಗೌರವ ಕಾರ್ಯದರ್ಶಿ ಸಿ.ಎಂ. ಸುಬ್ರಹ್ಮಣಿಯನ್, ಮೈಸೂರು ಕೈಗಾರಿಕೋದ್ಯಮಿಗಳ ಸಂಘದ ಗೌರವ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ಮೈಸೂರು ಡಿಸ್ಟ್ರಿಕ್ಟ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಲಖನ್ ನಾಯಕ್, ಹೋಟೆಲ್ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ಹೆಗ್ಡೆ, ಯಾದವಗಿರಿ ಕೈಗಾರಿಕೋದ್ಯಮಿಗಳ ಸಂಘದ ಉಪಾಧ್ಯಕ್ಷ ರಾಜಶೇಖರನ್ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದರು.

ಪ್ರವಾಸಿಗರ ಸ್ವರ್ಗ ವಯನಾಡು ಈಗ ಮರಣ ದಿಬ್ಬ: ಮೃತರ ಸಂಖ್ಯೆ 300ಕ್ಕೆ ಏರಿಕೆ

ವಯನಾಡು, ಆ.1– ಪ್ರವಾಸಿಗರ ಸ್ವರ್ಗ ಕೇರಳದ ವಯನಾಡು ಈಗ ಮರಣ ದಿಬ್ಬವಾಗಿದೆ. ಭೀಕರ ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ ಈವರೆಗೂ 300ಕ್ಕೂ ಹೆಚ್ಚು. 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಅವಶೇಷಗಳಡಿ ಇನ್ನೂ 240 ಮಂದಿ ಸಿಲುಕಿರಬಹುದು ಎಂದು ಅಂದಾಜಿಸಲಾಗಿದೆ. ಅವರ ಪತ್ತೆಗೆ ಪ್ರತಿಕೂಲ ಹವಾಮಾನದ ನಡುವೆಯೂ



ಸೇನೆ ಮತ್ತು ಎನ್‌ಡಿ ಆರ್‌ಎಫ್ ಅವಿರತವಾಗಿ ಶ್ರಮಿಸುತ್ತಿವೆ. 10ಕ್ಕೂ ಹೆಚ್ಚು ಜೆಸಿಬಿ ಬಳಸಿ ಕೆಸರು ಮಣ್ಣು, ಕಲ್ಲುಗಳನ್ನು ತೆರವು ಮಾಡಲಾಗುತ್ತಿದೆ. ಶ್ವಾನಗಳನ್ನು ಬಳಸಿ ಶೋಧ ಕಾರ್ಯ ನಡೆಯುತ್ತಿದೆ. ಜೆಸಿಬಿಯನ್ನು ನದಿಗೂ ಇಳಿಸಲಾಗಿದೆ. ಚಲಿಯಾರ್ ನದಿ ಪ್ರತಾಪ ಸ್ವಲ್ಪಮಟ್ಟಿಗೆ ಕಡಿಮೆ ಆಗಿದ್ದು ಮಂಗಳವಾರ ನಿರ್ಮಿಸಿದ್ದ ತಾತ್ಕಾಲಿಕ ಸೇತುವೆ ಮತ್ತೆ ಬಳಕೆಗೆ ಲಭ್ಯವಾಗಿದೆ. ರಕ್ಷಣಾ ತಂಡಗಳು ರಾತ್ರೋರಾತ್ರಿ ನದಿಗೆ ಅಡ್ಡಲಾಗಿ 2 ಕಬ್ಬಿಣದ ಸೇತುವೆಗಳನ್ನು ತಾತ್ಕಾಲಿಕವಾಗಿ ನಿರ್ಮಿಸಿದೆ. ಇದನ್ನು ಬಳಸಿ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗುತ್ತಿದೆ. ಈ ಕಾರ್ಯಾಚರಣೆ ಸದ್ಯಕ್ಕೆ ಮುಗಿಯುವುದು ಅನುಮಾನವಾಗಿದೆ. ಕನಿಷ್ಠ 15 ದಿನ ಈ ಕಾರ್ಯಾಚರಣೆ ನಡೆಯಬಹುದು ಎಂದು ಹೇಳಲಾಗುತ್ತಿದೆ. ಆಸ್ಪತ್ರೆಗಳಲ್ಲಿ ನೂರಾರು ಶವಗಳಿದ್ದು, ಸಂಬಂಧಿಕರು ಕಣ್ಣೀರಿಡುತ್ತಲೇ ತಮ್ಮವರ ಶವಗಳಿಗಾಗಿ ಹುಡುಕಾಟ ನಡೆಸಿದ್ದಾರೆ. ಒಬ್ಬಾಕೆಯಂತೂ ತಮ್ಮವರ ಶವ ನೋಡಿ ಕುಸಿದುಬಿದ್ದಿದ್ದಾರೆ. ನೂರಾರು ಸಾವುಗಳು ಉಂಟಾಗಿರುವ ಹಿನ್ನೆಲೆಯಲ್ಲಿ ಹೆಚ್1ಎನ್1 ಸೇರಿ ಸಾಂಕ್ರಾಮಿಕ ರೋಗ ಭೀತಿ ಆವರಿಸಿದೆ. ಹೀಗಾಗಿ ಮಾಸ್ಕ್ ಕಡ್ಡಾಯ ಮಾಡಲಾಗಿದೆ.

ನನ್ನ ತಂದೆ ಮೃತಪಟ್ಟಾಗ ಆದ ನೋವು ನೆನಪಾಯ್ತು

ವಯನಾಡು ಭೂಕುಸಿತ ನೋಡಿ ರಾಹುಲ್ ಗಾಂಧಿ ಭಾವುಕ

ವಯನಾಡು (ಕೇರಳ), ಆ.1– ದೇವರ ನಾಡು ಕೇರಳ ರಾಜ್ಯದ ವಯನಾಡು ಜಿಲ್ಲೆಯಲ್ಲಿ ಭೂ ಕುಸಿತ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿದ ಕಾಂಗ್ರೆಸ್ ನಾಯಕ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ರಕ್ಷಣಾ ಕಾರ್ಯಗಳ ಅವಲೋಕನ ಮಾಡಿದರು. ಗುಡ್ಡ ಕುಸಿತ ಸಂಭವಿಸಿದ ಮುಂಡುಕೈ ಹಾಗೂ ಅಕ್ಕಪಕ್ಕದ ನಾಲ್ಕು ಹಳ್ಳಿಗಳಲ್ಲಿ ಸುತ್ತಾಡಿದ ರಾಹುಲ್ ಗಾಂಧಿ, ಸಂತ್ರಸ್ತರಿಗೆ ಸಾಂತ್ವನ ಹೇಳಿದರು.



ಬಳಿಕ ಮಾತನಾಡಿದ ಅವರು, ನನ್ನ ತಂದೆ ಮೃತಪಟ್ಟಾಗ ನನಗೆ ಎದುರಾದ ಭಾವನೆಗಳೇ ಇದೀಗ ಮತ್ತೆ ಎದುರಾಗಿದೆ ಎಂದು ಭಾವುಕರಾಗಿ ನುಡಿದರು. ಇಲ್ಲಿನ ಜನರು ಕೇವಲ ಒಬ್ಬ ತಂದೆಯನ್ನು ಮಾತ್ರವಲ್ಲ, ಇಡೀ ಕುಟುಂಬವನ್ನೇ ಕಳೆದುಕೊಂಡಿದ್ದಾರೆ. ತಾವು ಗೌರವಿಸುವ ಹಾಗೂ ಪ್ರೀತಿಪಾತ್ರರಾಗಿದ್ದ ಜನರನ್ನೇ ಇಲ್ಲಿನವರು ಕಳೆದುಕೊಂಡಿದ್ದಾರೆ. ಇದೀಗ ಇಡೀ ದೇಶದ ಗಮನ ವಯನಾಡಿನತ್ತ ಇದೆ ಎಂದು ರಾಹುಲ್ ಗಾಂಧಿ ಹೇಳಿದರು.

ವಯನಾಡಿನಲ್ಲಿ ನಡೆದ ದುರಂತ ಕೇರಳ ಮಾತ್ರವಲ್ಲ, ಇಡೀ ದೇಶದಲ್ಲೇ ಅತೀ ದೊಡ್ಡ ದುರಂತವಾಗಿದೆ. ಇಲ್ಲಿನ ಪರಿಸ್ಥಿತಿ ನೋಡಲು ನಾವು ಬಂದೆವು. ಇಲ್ಲಿನ ಜನರ ಸಂಕಷ್ಟಕರ ಸನ್ನಿವೇಶ ನೋಡಿ ನೋವಾಗುತ್ತಿದೆ. ತಮ್ಮ ಮನೆ ಹಾಗೂ ಕುಟುಂಬ ಸದಸ್ಯರನ್ನೇ ಕಳೆದುಕೊಂಡ ಇಲ್ಲಿನ ಜನ ಸಂಕಷ್ಟದಲ್ಲಿದ್ದಾರೆ ಎಂದ ರಾಹುಲ್ ಗಾಂಧಿ, ಇಲ್ಲಿನ ಜನರಿಗೆ ಸೂಕ್ತ ಪರಿಹಾರ ಸಿಗುವಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ಆದಷ್ಟು ಬೇಗ ಇಲ್ಲಿನ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಬೇಕಿದೆ. ಈ ಭಾಗದಲ್ಲಿ ಸಾಕಷ್ಟು ಪರಿಹಾರ ಕಾರ್ಯ ಆಗಬೇಕಿದೆ ಎಂದು ರಾಹುಲ್ ಗಾಂಧಿ ಹೇಳಿದರು.

ಇದೊಂದು ರಾಷ್ಟ್ರೀಯ ದುರಂತ ಎಂದು ಬಣ್ಣಿಸಿದ ರಾಹುಲ್ ಗಾಂಧಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಏನು ಮಾಡುತ್ತವೆ ನೋಡೋಣ ಎಂದರು. ಇನ್ನು ಘಟನಾ ಸ್ಥಳದಲ್ಲಿ ಹಗಲು–ರಾತ್ರಿ ಎನ್ನದೆ ದಿನವಿಡೀ ಶ್ರಮಿಸುತ್ತಿರುವ ವೈದ್ಯರು, ನರ್ಸ್‌ಗಳು, ಜಿಲ್ಲಾಡಳಿತ, ಸ್ವಯಂ ಸೇವಕರು ಹಾಗೂ ಎನ್‌ಡಿ ಆರ್‌ಎಫ್ ಸಿಬ್ಬಂದಿಗೆ ರಾಹುಲ್ ಗಾಂಧಿ ಧನ್ಯವಾದ ಅರ್ಪಿಸಿದರು. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಕೂಡಾ ಸಂತ್ರಸ್ತರಿಗೆ ಸಾಂತ್ವನ ಹೇಳಿದರು.

ಮೂರನೇ ಪುಟದಿಂದ

ಒಳಮೀಸಲಾತಿಗೆ ಸುಪ್ರೀಂ ಅಸ್ತು

ಹಕ್ಕುಗಳ ಉಲ್ಲಂಘನೆಯಾಗುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಕೇಂದ್ರಕ್ಕೆ ಶಿಫಾರಸು ಮಾಡಿದ್ದ ರಾಜ್ಯ ಸರ್ಕಾರ: ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಹಲವು ಸಮುದಾಯಗಳಿಗೆ ಒಳಮೀಸಲಾತಿಯನ್ನು ಕಲ್ಪಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಕೇಂದ್ರಕ್ಕೆ ಶಿಫಾರಸು ಮಾಡುವ ಪ್ರಸ್ತಾವನೆಗೆ ಕಳೆದ ವರ್ಷ ನಡೆದಿದ್ದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಈ ಕುರಿತಂತೆ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದ ಸಚಿವ ಡಾ.ಎಚ್.ಸಿ. ಮಹದೇವಪ್ಪ ಒಳಮೀಸಲಾತಿಗಾಗಿ ಸಂವಿಧಾನದ 341ನೇ ಪರಿಚ್ಛೇದಕ್ಕೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದರು.

ಕಳೆದ ಹಲವಾರು ದಶಕಗಳಿಂದ ದಲಿತರ ಒಳಪಂಗಡಗಳಿಗೆ ಅನ್ಯಾಯ ಆಗಿದೆ. ಹಾಗಾಗಿ, ಇಂದಿನ ದಿನಗಳಲ್ಲಿ ಒಳ ಮೀಸಲಾತಿಬೇಕು ಎಂದು ಕೇಳುತ್ತಿದ್ದಾರೆ. ಹೀಗಾಗಿ ನ್ಯಾಸದಾಶಿವ ಆಯೋಗದ ವರದಿ ನೀಡಲು ಈ ಹಿಂದಿದ್ದ ಸರ್ಕಾರವನ್ನು ಕೇಳಲಾಗಿತ್ತು. ಸದಾಶಿವ ಆಯೋಗದ ವರದಿ ವಿಧಾನ ಮಂಡಲ ಅಧಿವೇಶನಗಳಲ್ಲಿ ಮಂಡನೆ ಯಾಗಲೇ ಇಲ್ಲ. ಆದರೆ, ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ನ್ಯಾಸದಾಶಿವ ಆಯೋಗದ ವರದಿಯನ್ನು ನಾವು ಅಧಿಕಾರಕ್ಕೆ ಬಂದಾಗ ಮಂಡನೆ ಮಾಡುತ್ತೇವೆ ಎಂದು ನಾವು ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಪ್ರಣಾಳಿಕೆಯಲ್ಲಿ ಹಾಕಿದ್ದೆವು. ಆದರೆ, ನಾವು ಪೂರ್ಣ ಪ್ರಮಾಣದಲ್ಲಿ ಆಗ ಅಧಿಕಾರಕ್ಕೆ ಬರಲಿಲ್ಲ ಎಂದು ಹೇಳಿದ್ದರು.

ಪ್ರವಾಸಿ ತಾಣಗಳಿಗೆ ಪ್ರವೇಶ ನಿರ್ಬಂಧ

ಹೊಗೇನಕಲ್ ಫಾಲ್ಸ್‌ಗಳಿಗೂ ಶುಕ್ರವಾರ ಸಂಜೆವರೆಗೆ ಪ್ರವೇಶ ನಿಷೇಧಿಸಲಾಗಿದ್ದು, ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಗಳಿಂದ ಹೊರ ಹರಿವಿನ ಪ್ರಮಾಣ ನೋಡಿಕೊಂಡು ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ. ಅತೀ ಮಳೆಯಿಂದಾಗಿ ಗುಡ್ಡ ಕುಸಿತ, ಮರಗಳು ಉರುಳಿ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿರುವುದರಿಂದ ಬೆಟ್ಟ–ಗುಡ್ಡ ಆಶ್ರಿತ ಚಿಕ್ಕಮಗಳೂರು ಜಿಲ್ಲೆಯ ಧಾರ್ಮಿಕ ಕೇಂದ್ರ, ಯಾತ್ರಾ ಸ್ಥಳ, ನಿಸರ್ಗ ತಾಣಗಳಿಗೆ ಪ್ರವಾಸವನ್ನು ಆ.15ರವರೆಗೆ ಪ್ರವಾಸ ಹಮ್ಮಿಕೊಳ್ಳ ಬಾರದೆಂದು ಜಿಲ್ಲಾಡಳಿತ ಸಲಹೆ ನೀಡಿದೆ. ಅದೇ ರೀತಿ ಉಡುಪಿ ಜಿಲ್ಲೆಯಲ್ಲೂ ಹೆಚ್ಚು ಮಳೆಯಾಗುತ್ತಿರುವುದರಿಂದ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಕಾಂಗ್ರೆಸ್‌ನಿಂದ ನೈತಿಕತೆ ಪ್ರಶ್ನೆ ಸಭೆ

ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಪಾದಯಾತ್ರೆ ಘೋಷಣೆ ಮಾಡಿದ್ದಾರೆ. ಇಷ್ಟು ದಿನ ಕೇಂದ್ರ ಸಚಿವ ಕುಮಾರಸ್ವಾಮಿ ಹಾಗೂ ಜೆಡಿಎಸ್‌ನವರು ಈ ವಿಚಾರದಲ್ಲಿ ಅತಂತ್ರವಾಗಿದ್ದರು. ಪಾದಯಾತ್ರೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದರು. ಜೆಡಿಎಸ್ ಕಾರ್ಯಕಾರಿ ಸಮಿತಿ ಮುಖ್ಯಸ್ಥರು ಪಾದಯಾತ್ರೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದನ್ನೂ ಗಮನಿಸಿದ್ದೇನೆ. ಬಿಜೆಪಿಯವರು ಕೂಡ ಗೊಂದಲದಲ್ಲಿದ್ದರು. ಈಗ ಎರಡೂ ಪಕ್ಷಗಳ ನಾಯಕರು ಪಾದಯಾತ್ರೆ ಮಾಡುವುದಾಗಿ ಘೋಷಣೆ ಮಾಡಿದ್ದು, ಅದಕ್ಕೂ ಮುನ್ನ ನಾವು ಅವರನ್ನು ಪ್ರಶ್ನೆ ಮಾಡಬೇಕಿದೆ. ಈ ಪಾದಯಾತ್ರೆಯನ್ನು ಎನ್‌ಡಿಎ ಮೈತ್ರಿಕೂಟ ಘೋಷಣೆ ಮಾಡಿಲ್ಲ. ಕೇವಲ ಬಿಜೆಪಿ ಮಾತ್ರ ಘೋಷಣೆ ಮಾಡಿದೆ.

ಪಾದಯಾತ್ರೆ ಸಂಬಂಧ ಪೊಲೀಸರು ಹಾಗೂ ಮಾಧ್ಯಮಗಳಿಗೆ ನೀಡಿರುವ ಮಾಹಿತಿಯಲ್ಲಿ ಬಿಜೆಪಿಯ ಪಾದಯಾತ್ರೆ ಎಂದು ಹೇಳಲಾಗಿದೆ ಹೊರತು, ಜೆಡಿಎಸ್ ಪಕ್ಷದ ಚಿಹ್ನೆ ಸಹ ಇಲ್ಲ. ಪಾದಯಾತ್ರೆಗೆ ಅಪಸ್ವರ ಎತ್ತಿದ್ದ ಜೆಡಿಎಸ್ ನಾಯಕರು ಒಪ್ಪಿದ್ದಾರೆ. ಜೆಡಿಎಸ್ ಪ್ರಾಬಲ್ಯ ಇರುವ ಕ್ಷೇತ್ರದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಜೆಡಿಎಸ್ ನಾಯಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಭಾವಿಸಿದ್ದೆ ಎಂದರು.

ಅವರ ಪಾದಯಾತ್ರೆಗೆ ನಮ್ಮ ವತಿಯಿಂದ ಯಾವುದೇ ಅಡ್ಡಿ ಮಾಡುವುದಿಲ್ಲ. ಬೆಂಗಳೂರಿನಲ್ಲಿ ನಗರದ ಒಳಗೆ ಪ್ರತಿಭಟನೆಗೆ ಅವಕಾಶ ನೀಡಬಾರದು ಎಂಬ ಸುಪ್ರೀಂಕೋರ್ಟ್ ಆದೇಶ ಪಾಲನೆ ಮಾಡುತ್ತೇವೆ. ನಾವು ಪಾದಯಾತ್ರೆ ಮಾಡುವುದಿಲ್ಲ. ಸತ್ಯ ಹರಿಶ್ಚಂದ್ರರಂತೆ ಪಾದಯಾತ್ರೆ ಮಾಡುತ್ತಿರುವ ಬಿಜೆಪಿ ನಾಯಕರಿಗೆ ಅವರ ಕಾಲದಲ್ಲಿನ ಅಕ್ರಮಗಳ ಬಗ್ಗೆ, ರಾಜ್ಯಕ್ಕೆ ಮಾಡಿರುವ ಅನ್ಯಾಯ, ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಬಗ್ಗೆ ಪ್ರಶ್ನೆ ಮಾಡುತ್ತೇವೆ. ಬಿಜೆಪಿ ಹಾಗೂ ಜೆಡಿಎಸ್ ಅಧಿಕಾರಾವಧಿಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ ನಮ್ಮ ಬಳಿಯೂ ದಾಖಲೆಗಳಿವೆ. ದಾಖಲೆ ಸಮೇತ ನಾವು ಪ್ರಶ್ನೆ ಮಾಡುತ್ತೇವೆ ಎಂದರು. ಪಾದಯಾತ್ರೆ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದವರು ಈಗ ಒಟ್ಟಿಗೆ ಪಾದಯಾತ್ರೆ ಮಾಡುತ್ತಿರುವ ಬಗ್ಗೆ ಕೇಳಿದಾಗ, ಅವರು ಏನಾದರೂ ಮಾಡಿಕೊಳ್ಳಲಿ. ಕುಮಾರಸ್ವಾಮಿ ಅವರ ಮಾತು, ವಿಚಾರ ನೋಡಿದ್ದೇನೆ. ಬಿಜೆಪಿ ಜತೆ ಜೆಡಿಎಸ್ ಅನ್ನು ವಿಲೀನ ಮಾಡಿಕೊಂಡಿರಬೇಕು. ಹೀಗಾಗಿ ಬಿಜೆಪಿ ಹೆಸರಿನಲ್ಲಿ ಪಾದಯಾತ್ರೆ ಮಾಡುತ್ತಿದ್ದಾರೆ. ಹಳೆ ಮೈಸೂರು ಭಾಗದಲ್ಲಿ ಬಿಜೆಪಿಗೆ ನೆಲೆ ಇಲ್ಲ. ಹೀಗಾಗಿ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಮೈಸೂರಿಗೆ ನಾಳೆಯಿಂದ ಪಾದಯಾತ್ರೆ

ಹೋರಾಟ ಪಾದಯಾತ್ರೆ ಮೂಲಕ ನಡೆಯಲಿದೆ ಎಂದು ತಿಳಿಸಿದರು.

ಗೊಂದಲ ನಿವಾರಣೆ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮಾತನಾಡಿ, ನಮ್ಮ ಪಾದಯಾತ್ರೆ ಇದೇ ಶನಿವಾರದಿಂದ ನಿಗದಿಯಂತೆ ಆರಂಭವಾಗಲಿದೆ. ಮುಡಾ ಮತ್ತು ವಾಲ್ಮೀಕಿ ಹಗರಣಗಳ ವಿರುದ್ಧ ಹೋರಾಟ ಮಾಡಲಾಗುತ್ತದೆ. ಎನ್‌ಡಿಎಯಿಂದ ಹೋರಾಟ ನಡೆಯಲಿದೆ. ಪಾದಯಾತ್ರೆಯ ಬಗ್ಗೆ ಕುಮಾರಸ್ವಾಮಿ ಜೊತೆಗೆ ಮಾತನಾಡಿದ್ದೇವೆ. ಇದ್ದ ಸ್ವಲ್ಪ ಗೊಂದಲ ಬಗೆಹರಿಸಿಕೊಂಡಿದ್ದೇವೆ. ಒಟ್ಟು 7 ದಿನಗಳ ಪಾದ ಯಾತ್ರೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಹೆಚ್‌ಡಿಕೆ–ಬಿಎಸ್‌ವೈ ಚಾಲನೆ: ಇದೇ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ಈ ಪಾದಯಾತ್ರೆಯಲ್ಲಿ ಎರಡೂ ಪಕ್ಷಗಳ ಸಂಸದರು, ಶಾಸಕರು ಭಾಗವಹಿಸುತ್ತಾರೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಹಿರಿಯರಾದ ಬಿ.ಎಸ್.ಯಡಿಯೂರಪ್ಪ ಅವರು ಪಾದಯಾತ್ರೆಗೆ ಚಾಲನೆ ಕೊಡಲಿದ್ದಾರೆ ಎಂದು ಹೇಳಿದರು. ಭ್ರಷ್ಟ ಹಗರಣಗಳ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಂದೋಲನ ಇದಾಗಿರಲಿದೆ. ಇದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತೇವೆ. ವಾಲ್ಮೀಕಿ ನಿಗಮದ ಹಗರಣ ಮತ್ತು ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಬಿಜೆಪಿ ಮತ್ತು ಜೆಡಿಎಸ್ ಸದನದಲ್ಲಿ ಒಟ್ಟಾಗಿ ಹೋರಾಟ ಮಾಡಿದ್ದೆವು. ಸದನ ಮುಗಿದ ಬಳಿಕ ಈ ಹೋರಾಟ ಮುಂದುವರೆಸಲು ನಿರ್ಧರಿಸಲಾಗಿತ್ತು. ನಮ್ಮ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರ್‌ವಾಲ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮತ್ತು ನಾವೆಲ್ಲರೂ ಕುಳಿತು ಚರ್ಚಿಸಿದ್ದೇವೆ. ಎಲ್ಲವೂ ಇತ್ಯರ್ಥ ಆಗಿದೆ. ಅಹಿಂದ ಹೆಸರು ಹೇಳಿಕೊಂಡು ಅಧಿಕಾರ ಪಡೆದ ರಾಜ್ಯದ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದ ಬಗ್ಗೆ ಕರ್ನಾಟಕ ಮಾತ್ರವಲ್ಲದೆ, ದೇಶಾದ್ಯಂತ ಚರ್ಚೆ ಆಗುತ್ತಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಹಗರಣದಡಿ ಪರಿಶಿಷ್ಟ ಪಂಗಡಗಳ ಹಣವನ್ನು ಕಾಂಗ್ರೆಸ್ ಸರ್ಕಾರ ದೋಚಿತ್ತು ಎಂದು ಟೀಕಿಸಿದ್ದಾರೆ. ಸ್ವತಃ ಮುಖ್ಯಮಂತ್ರಿಗಳೇ ಸದನದಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ. ಮತ್ತೊಂದೆಡೆ ಮುಡಾದಲ್ಲಿ ಮುಖ್ಯಮಂತ್ರಿಗಳ ಕುಟುಂಬಕ್ಕೆ ಅಕ್ರಮವಾಗಿ ಬಂದ 14 ನಿವೇಶನಗಳ ಜೊತೆಗೆ 4 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಸಾವಿರಾರು ನಿವೇಶನಗಳನ್ನು ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಬೇಕು ಬೇಕಾದವರಿಗೆ ಕೊಟ್ಟದ್ದು ಪ್ರಮುಖ ಅಂಶ ಎಂದು ವಿವರಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪೇಚಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಔರಾನ್ ಮೇ ಕಹಾನ್ ದಮ್ ಥಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಲ್ಕಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಬೋಟ್ (ತ)	4 ಪ್ರದರ್ಶನಗಳು
ಸಂಗಂ	
ಕಾಟನ್‌ಪೇಟೆ ಗೇಟ್ (ಕ)	4 ಪ್ರದರ್ಶನಗಳು
ಲಿಡೋ	
ಹೆಬ್ಬುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ಪ್ರಭಾ	
ಅಡವಿಕಟ್ಟೆ (ಕ)	2 ಪ್ರದರ್ಶನಗಳು
ಇಷ್ಕ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯನ್ (ತ): ಬೆ.10.40ಕ್ಕೆ, ಮ.1.30ಕ್ಕೆ, ರಾ.10ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಮರ್ಫ್ಯ ಪಿಡಿಕಥಾ ಮನಿಥನ್ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಬೆ.10.25ಕ್ಕೆ.
ಸ್ಕ್ರೀನ್ 3	ಇಷ್ಕ್ (ಕ): ಬೆ.10.45ಕ್ಕೆ, ಹೆಬ್ಬುಲಿ (ಕ): ಮ.1.40ಕ್ಕೆ, ಬಡ್ಡಿ (ತೆ): ಸಂ.4.30ಕ್ಕೆ, ಶಿವಂ ಭಜೆ (ತೆ): ರಾ.7.20ಕ್ಕೆ, ರೂಪಾಂತರ (ಕ): ರಾ.9.55ಕ್ಕೆ.
ಸ್ಕ್ರೀನ್ 4	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.45ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.


ಹಸಿರು ನಮ್ಮ ಉಸಿರು

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಗುರುವಾರ	122.60 ಅಡಿ
ಒಳಹರಿವು	112451 ಕ್ಯೂಸೆಕ್
ಹೊರಹರಿವು	99501 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2281.30 ಅಡಿ
ಒಳಹರಿವು	45951 ಕ್ಯೂಸೆಕ್
ಹೊರಹರಿವು	50000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2854.14 ಅಡಿ
ಒಳಹರಿವು	8446 ಕ್ಯೂಸೆಕ್
ಹೊರಹರಿವು	8500 ಕ್ಯೂಸೆಕ್


ಭುವನ್‌ರಾಜ್ ಫೌಂಡೇಶನ್ ಸಂಸ್ಥಾಪಕರು ಹಾಗೂ
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಯುವ ಮುಖಂಡರಾದ
ಚೇತನ್‌ರಾಜ್ ಎನ್. ರವರಿಗೆ
36ನೇ ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು: ಚೇತನ್‌ರಾಜ್ ಎನ್. ಅಭಿಮಾನಿಗಳ ಬಳಗ, ಮೈಸೂರು
ಹಾಗೂ ಡಾ. ಯತೀಂದ್ರ ಯುವ ಬ್ರಿಗೇಡ್, ಮೈಸೂರು
ಶಿವು ಪ್ರಿಂಟರ್ಸ್ SHIVU PRINTERS
9060363617